ನಿಲುವಳಿ ಸೂಚನೆಗೆ ಅನುಮತಿ ಕೋರಿ ಚರ್ಚೆ

ಕಾವೇರಿ ಪ್ರಾಧಿಕಾರ ರಚನೆ ಕುರಿತು

ಅಧ್ಯಕ್ಷರು : ಈಗ ಮಾನ್ಯ ಯಡಿಯೂರಪ್ಪನವರು ಕಾವೇರಿ ವಿಚಾರ ಪ್ರಸ್ತಾಪ ಮಾಡಬೇಕೆಂದು ಕೇಳಿದ್ದಾರೆ. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಕೂಡ ಕಳುಹಿಸಿ ಕೊಟ್ಟಿದ್ದರು. ವಿರೋಧ ಪಕ್ಷದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಯಡಿಯೂರಪ್ಪನವರು ಮೊದಲು ಪ್ರಸ್ತಾಪ ಮಾಡುತ್ತಾರೆ, ತಾವು ನಂತರ ಮಾಡಬೇಕು. ಸಹಕರಿಸಿದ ಅವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ತಮ್ಮ ಪ್ರಾಸ್ತಾವಿಕ ಮಂಡನೆಯನ್ನು ಸಲ್ಲಿಸಬೇಕೆಂದು ಕೇಳಿಕೊಳ್ಳುತ್ತೇನೆ. ತಾವು ಕೊಟ್ಟಿರುವ ಜೀರೋ ಅವರ್‌ನಲ್ಲಿ ತಮ್ಮ ಜೊತೆ ಇನ್ನು ಅನೇಕ ಜನ ಕೊಟ್ಟಿದ್ದಾರೆ, ಎಲ್ಲರಿಗೂ ಅವಕಾಶ ಕೊಡುತ್ತೇನೆ. ಅಡ್ಜರ್ನ್‌ಮೆಂಟ್ ಮೋಷನ್‌ಗೆ ನೋಟೀಸು ಕೊಟ್ಟಿರುವುದರಿಂದ ಪ್ರಶ್ನೋತ್ತರ ಅವಧಿ ಮುಗಿದ ತಕ್ಷಣ, ಪ್ರಾಸ್ತಾವಿಕ ಭಾಷಣಕ್ಕೆ ಅವಕಾಶ ಕೊಡಬೇಕು. ನಾನು ನಿಮ್ಮನ್ನು ಬಿಟ್ಟು ಎಲ್ಲಿ ಹೋಗುತ್ತೇನೆ. ನೀವು ಹೀಗೆ ಕೇಳಿದರೆ ಹೇಗೆ? ನಿಮ್ಮನ್ನು ಬಿಟ್ಟು ನಾನು ಏನು ಮಾಡುವುದಕ್ಕಾಗುತ್ತದೆ ಹೇಳಿ?

+ ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ) : ಸನ್ಮಾನ್ಯ ಅಧ್ಯಕ್ಷರೆ, ಕಾವೇರಿ ಪ್ರಾಧಿಕಾರ ರಚನೆ ವಿಚಾರದಲ್ಲಿ ನಿಲುವಳಿ ಸೂಚನೆ ಮೂಲಕ ಇತರ ಎಲ್ಲಾ ಪ್ರತಿಪಕ್ಷದ ಮುಖಂಡರು ಸೇರಿ ಚರ್ಚೆ ಮಾಡುವುದಕ್ಕೆ ಪ್ರಾರಂಭಿಸಿದ್ದೇವೆ. ಈ ಕಾವೇರಿ ಪ್ರಾಧಿಕಾರ ರಚನೆಯ ಒಂದು ಕರಡು ಪ್ರತಿ ಈಗಾಗಲೇ ನಮ್ಮ ಸರ್ಕಾರಕ್ಕೆ ಬಂದಿದೆ. ಸುಪ್ರೀಂ ಕೋರ್ಟಿನ ಮುಂದೆ ಈ ಕಾವೇರಿ ಪ್ರಾಧಿಕಾರ ರಚನೆ ಮಾಡುವಂತಹ ಒಂದು ಪ್ರಸ್ತಾಪವನ್ನು ಕೇಂದ್ರಸರ್ಕಾರ ನಮ್ಮ ಸಾಲಿಸೀಟರ್ ಜನರಲ್ ಮೂಲಕ ಪ್ರಸ್ತಾಪ ಮಾಡಿ, ನಮ್ಮ ರಾಜ್ಯ ಸರ್ಕಾರ ಪ್ರತಿನಿಧಿಸತಕ್ಕಂಥ ನಮ್ಮ ಕೌನ್ಸಿಲ್ ಅದನ್ನು ಪ್ರತಿಭಟನೆ ಮಾಡದೆ ಒಪ್ಪಿಕೊಂಡು ಇವತ್ತು ನಮ್ಮ ಮೇಲೆ ಆ ತೂಗು ಕತ್ತಿ ಏನು ಅಲ್ಲಾಡುತ್ತಿದೆ, ಆ ಬಗ್ಗೆ ಪ್ರಾರಂಭದಲ್ಲಿಯೇ ನಾವು ಪ್ರಸ್ತಾಪ ಮಾಡಬೇಕಾಗಿತ್ತು. ಆದರೆ, ವಿದ್ಯುತ್‌ಚ್ಛಕ್ತಿ ಬೆಲೆ ಜಾಸ್ತಿ ಮಾಡಿರುವ ಹಿನ್ನೆಲೆಯಲ್ಲಿ ಇಡೀ ನಾಡಿನ ಜನರಿಗೆ ಸಂಬಂಧಪಟ್ಟ ವಿಷಯವನ್ನು ಪ್ರಸ್ತಾಪ ಮಾಡಬೇಕಾಗಿದ್ದರಿಂದ ನಿಧಾನವಾಯಿತು. ಒಂದು ವಾರ

(ಮಾನ್ಯ ಉಪ ಸಭಾಧ್ಯಕ್ಷರು ಈ ಹಂತದಲ್ಲಿ ಬಂದು ಪೀಠವನ್ನು ಅಲಂಕರಿಸಿದರು)

ಕಳೆದ ಮೇಲೆ ಇವತ್ತು ಗಂಭೀರವಾಗಿ ವಿಷಯವನ್ನು ನಾವು ಪ್ರಸ್ತಾಪ ಮಾಡುತ್ತಿದ್ದೇವೆ. ನಾನು ಬಹಳ ಹೊತ್ತು ಈ ವಿಷಯದ ಬಗ್ಗೆ ಮಾತನಾಡಲು ಇಷ್ಟಪಡುವುದಿಲ್ಲ. ಎಲ್ಲರಿಗೂ ಗೊತ್ತಿರುವಂತೆ ಈ ಸದನದಲ್ಲಿ ನಾವು ಅನೇಕ ಭಾರೀ ಈ ವಿಷಯ ಚರ್ಚೆ ಮಾಡಿದ್ದೇವೆ. ಈ ಕಾವೇರಿ ಪ್ರಾಧಿಕಾರ ರಚನೆ ಪ್ರಸ್ತಾಪ ಕೈಬಿಡಬೇಕೆಂದು ಒತ್ತಾಯ ಮಾಡುವುದಕ್ಕೋಸ್ಕರ ಸರ್ವಪಕ್ಷಗಳ ನಿಯೋಗವನ್ನು ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಪ್ರಧಾನಿಯವರ ಭೇಟಿ ಮಾಡುವುದಕ್ಕೆ ಹೋಗಿದ್ದೆವು. ಮತ್ತೆ ಸುಪ್ರೀಂ ಕೋರ್ಟಿನಲ್ಲಿ ನಮ್ಮ ರಾಜ್ಯವನ್ನು ಪ್ರತಿನಿಧಿಸತಕ್ಕಂತಹ ಹಿರಿಯ ನಾರಿಮನ್‌ರವರನ್ನು ಸಹ ನಾವು ಭೇಟಿ ಮಾಡಿದ್ದೆವು. ನಾವು ಹೋಗಿ ಬಂದ ಮೇಲೆ ಪರಿಣಾಮ ಏನು, ಫಲಸ್ರುತಿ ಏನು ಆಗಿದೆ ಎನ್ನುವುದು

ಈ ಸದನಕ್ಕೆ ಗೊತ್ತಾಗಿಲ್ಲ. ಪ್ರಧಾನಿಯವರನ್ನು ನಾವು ಬೆಂಬಲಿಸಲಿಕ್ಕೆ ಮನವಿಯನ್ನು ಸಲ್ಲಿಸಿದ ಮೇಲೆ, ಈ ಪ್ರಾಧಿಕಾರ ರಚನೆ ಮಾಡುವುದು ಪರಿಶೀಲನೆಯಾಗುತ್ತದೆ, ಎನ್ನುವುದನ್ನು ತಿಳಿಸಿದ ಮೇಲೆ, ಪಕ್ಕದಲ್ಲಿ ನಮ್ಮ ಮುಖ್ಯ ಮಂತ್ರಿಗಳಾದ ಪಟೇಲರನ್ನು ಪ್ರಧಾನಿಯವರು ಕುಳ್ಳಿರಿಸಿಕೊಂಡು ಹೆಗಲ ಮೇಲೆ ಕೈಹಾಕಿ ಬಹಳ ಆತ್ಮೀಯತೆಯಿಂದ ಮಾತನಾಡಿ ನಾನು ತಮಿಳುನಾಡು ಮುಖ್ಯಮಂತ್ರಿಗಳ ಜೊತೆ ಮಾತನಾಡುತ್ತೇನೆ, ಮತ್ತು ಈ ಸಮಸ್ಯೆಗೆ ಪರಿಹಾರವನ್ನು ಕಂಡು ಹಿಡಿಯುತ್ತೇನೆ ಎನ್ನುವ ಮಾತನ್ನು ಪ್ರಾಮಾಣಿಕವಾಗಿ ಹೇಳಿದ್ದರು. ಈಗಾಗಲೇ ಇಂಟರಿಂ ಆದೇಶದ ಬಗ್ಗೆ ನಾವು ಟ್ರಿಬ್ಯುನಲ್ ಮುಂದೆ ರಿವ್ಯೂ ಪೆಟಿಷನ್ ಹಾಕಿದ್ದೇವೆ. ಅದರ ಬಗ್ಗೆ ಇನ್ನೂ ಅವರ ತೀರ್ಪು ಕೊಟ್ಟಿಲ್ಲ. ಈ ಸಮಯದಲ್ಲಿ ಸಾರ್ವಜನಿಕರ ಮೂಲಕ ಸುಪ್ರೀಮ್ ಕೋರ್ಟಿಗೆ ಒಂದು ಮನವಿಯನ್ನು ಅವರೇ ಸಲ್ಲಿಸಿ, ಇವತ್ತು ಈ ಒಂದು ಪ್ರಾಧಿಕಾರವನ್ನು ರಚನೆ ಮಾಡುವುದನ್ನು ತಡೆಹಿಡಿಯಬೇಕು ಎನ್ನುವಂತಹ ಒತ್ತಾಯವನ್ನು ನಾವು ಮಾಡಿದ್ದೆವು. ಈ ಬಗ್ಗೆ ತಮಿಳುನಾಡಿನ ಮುಖ್ಯಮಂತ್ರಿಗಳನ್ನು ಕರೆಸಿ ಮಾತನಾಡುತ್ತೇನೆಂದು ಹೇಳಿದ್ದರು. ಇವರಿಗೆ ಗೊತ್ತಿರುವ ಪ್ರಕಾರ ನಾವು ಒಂದು ಹೆಜ್ಜೆ ಮುಂದೆ ಹೋಗಿದ್ದೇವೆಂದು ನಾನು ಅಂದುಕೊಂಡಿದ್ದೇನೆ. ಸ್ವಾಮಿ, ಈ ಸದನದಲ್ಲಿ ಎರಡು ಮನೆಯಲ್ಲಿ ಅನೇಕ ಬಾರಿ ನಿರ್ಣಯ ಕೈಕೊಂಡಿದ್ದೇವೆ. ಆದರೆ ಇದುವರೆಗೂ ತೆಗೆದುಕೊಂಡ ತೀರ್ಮಾನಗಳನ್ನು ನಮ್ಮ ಸರ್ಕಾರ ಕಾರ್ಯರೂಪಕ್ಕೆ ತರುವಂತಹ ಯಾವುದೇ ಒಂದು ಪ್ರಯತ್ನವನ್ನು ಮಾಡಲಿಲ್ಲ. ನಮ್ಮನ್ನು ನಡುನೀರಿನಲ್ಲಿ ಬಿಟ್ಟು ನಮಗೆ ಅನ್ಯಾಯ ಆಗತಕ್ಕಂತಹ ಪರಿಸ್ಥಿತಿಗೆ ಈ ಸರ್ಕಾರ ತಂದಿದೆ. ಸನ್ಮಾನ್ಯ ಅಧ್ಯಕ್ಷರೆ, 28-12-1995 ರಂದು ಮಾನ್ಯ ದೇವೇಗೌಡರು ಸರ್ವಾನುಮತದಿಂದ ಪ್ರಸ್ತಾಪ ಮಾಡಿ, ಸರ್ವಸಮ್ಮತವಾದ ಒಂದು ನಿರ್ಣಯವನ್ನು ಕೈಗೊಂಡರು, ನಾನು ಅಂದು ಚಕಾರ ಎತ್ತಲಿಲ್ಲ. ಇದು ಆಗಬಾರದು, ಏಕೆ ಅಂದರೆ ಇವತ್ತು ವೀರಪ್ಪನ್ ಚರ್ಚೆ ಆದರೆ ಏನು ಆಗುತ್ತದೆ, ಅದೇ ರೀತಿ ಆವಾಗ ಕಾವೇರಿ ಬಗ್ಗೆ ಚರ್ಚೆ ಆಯಿತು. ನಮ್ಮ ಪಕ್ಷದವರು ಹಾಗೂ ಆಡಳಿತ ಪಕ್ಷದ ನಾಯಕರು ಕೂಡಿಕೊಂಡು ದೇವೇಗೌಡರು ಮುಖ್ಯಮಂತ್ರಿಗಳು ಆಗಿದ್ದ ಕಾಲದಲ್ಲಿ ಏನು ನಿರ್ಣಯ ಮಾಡಿದರು.

"ಅಂತರ್ ರಾಜ್ಯದ ಜಲವಿವಾದದಂತಹ ಸೂಕ್ಷ್ಮ, ಗಂಭೀರ ಹಾಗೂ ವ್ಯಾಪಕ ಪರಿಣಾಮಗಳನ್ನುಂಟು ಮಾಡುವ ವಿವಾದಗಳನ್ನು ಸಂಬಂಧಿಸಿದ ರಾಜ್ಯದ ಮುಖ್ಯಮಂತ್ರಿಗಳು ಕಲೆತು, ಚರ್ಚಿಸಿ ಸೌಹಾರ್ದಯುತವಾದ ನಿರ್ಣಯಕ್ಕೆ ಬರುವುದು, ಕಾರ್ಯಸಾಧುವು ಹಾಗೂ ಅಪೇಕ್ಷಣೀಯವಾದದ್ದೆಂದು ತೀರ್ಮಾನಿಸಲಾಯಿತು. ಈ ವಿವೇಕಯುತವಾದ ನೀತಿಯನ್ನು ಇಲ್ಲಿಯವರೆಗೆ ಅನುಸರಿಸಿಕೊಂಡು ಬಂದಿರುವುದು ಇತ್ತೀಚಿನ ಇತಿಹಾಸ".

ರಾಷ್ಟ್ರೀಯ ಜಲ ನೀತಿಯ ಮಾರ್ಗದರ್ಶನವೇ ನಮಗೆ ಲಭ್ಯವಿಲ್ಲದಿರುವಾಗ, ಅಂತಹ ಒಂದು ರಾಷ್ಟ್ರೀಯ ಜಲ ನೀತಿ ಮಾರ್ಗಸೂಚಿ ರೂಪಿಸಬೇಕಾದ ಅನಿವಾರ್ಯತೆ ಹಾಗೂ ಅಗತ್ಯತೆಯಿದೆಯೆಂದು ಮನಗಂಡು, ಕೇಂದ್ರ ಸರ್ಕಾರದ ಜಲ ಸಂಪನ್ಮೂಲ ಸಚಿವರ ಅಧ್ಯಕ್ಷತೆಯಲ್ಲಿ ಇತ್ತೀಚಿಗೆ ಕರೆದ ಸಭೆಯಲ್ಲಿ, ರಾಷ್ಟ್ರದ ನೀರಾವರಿ ಮಂತ್ರಿಗಳು ತೆಗೆದುಕೊಂಡ ನಿರ್ಣಯವನ್ನು ಸ್ವಾಗತಿಸುತ್ತಾ, ಶೀಘ್ರವಾಗಿ, ಅಂತಹ ಮಾರ್ಗಸೂಚಿಯನ್ನು ರೂಪಿಸಬೇಕೆಂದು, ಈ ಸದನವು ಅತ್ಯಂತ ಕಳಕಳಿಯಿಂದ

ಒತ್ತಾಯಿಸುತ್ತದೆ. ಇಂತಹ ಭಾವನಾತ್ಮಕ ಹಾಗೂ ಜಟಿಲ ಸಮಸ್ಯೆಗಳನ್ನು ನ್ಯಾಯಾಲಯದ ವ್ಯಾಪ್ತಿಯ ಹೊರಗಡೆ ಬಗೆಹರಿಸುವುದು ಒಳ್ಳೆಯದು. 7.7.1991 ರಂದು ಈ ಸದನವು 25.6.1991 ರಂದು ಕಾವೇರಿ ಜಲ ವಿವಾದದ ಟ್ರಿಬ್ಯೂನಲ್ ಮಾಡಿದ ತೀರ್ಪು, ರಾಜ್ಯದ ಹಿತಕ್ಕೆ ಭಾದಕವೂ, ಅನುಷ್ಠಾನಗೊಳಿಸಲಾರದ ತೀರ್ಪಾಗಿರುವುದರಿಂದ ಜಲನೀತಿಯ ಮಾರ್ಗಸೂಚಿಗಳನ್ನು ರೂಪಿಸುವವರೆಗೆ, ಎಲ್ಲಾ ವಿವಾದಗಳ ಇತ್ಯರ್ಥವನ್ನು ಸ್ಥಗಿತಗೊಳಿಸಬೇಕೆಂದು ತೆಗೆದುಕೊಂಡ ನಿರ್ಣಯಕ್ಕೆ ಈ ಸದನವು ಬದ್ಧವಾಗಿದೆ.

ರಾಜ್ಯ-ರಾಜ್ಯಗಳ ನಡುವಿನ ಇಂತಹ ಗಂಭೀರವಾದ ವಿವಾದಗಳನ್ನು ಸರ್ವಸಮ್ಮತವಾಗಿ ಬಗೆಹರಿಸಲು, ಪ್ರಧಾನ ಮಂತ್ರಿಗಳು ಸಂಬಂಧಿಸಿದ ರಾಜ್ಯಗಳ ಮುಖ್ಯಮಂತ್ರಿಗಳನ್ನು ಕರೆದು, ಚರ್ಚಿಸಿ, ನ್ಯಾಯ ಸಮ್ಮತವಾದ ಹಾಗೂ ಸರ್ವಸಮ್ಮತವಾದ ತೀರ್ಮಾನವನ್ನು ತೆಗೆದುಕೊಳ್ಳುವುದು ಹೆಚ್ಚು ಸಮಂಜಸವೂ,ಕಾರ್ಯಸಾಧುವೆಂದು ಈ ಸಭೆಯು ಕೇಂದ್ರ ಸರ್ಕಾರವನ್ನು ಈ ನಿರ್ಣಯದ ಮೂಲಕ ಸರ್ವಾನುಮತದಿಂದ ಒತ್ತಾಯಿಸುತ್ತದೆ. ಈ ನಿರ್ಣಯವನ್ನು ತಂದಾಗ, ದೇವಗೌಡರು ಇದ್ದರು, ಅದನ್ನು ನಾವು ಸರ್ವಾನುಮತದಿಂದ ಪಾಸ್ ಮಾಡಿ ಕಳುಹಿಸಿಕೊಟ್ಟೆವು. ಇದು ಆದಮೇಲೆ ದಿನಾಂಕ: 3-1-1996ರಂದು ಗಂಭೀರವಾದ ಪರಿಸ್ಥಿತಿ ಬಂದ ಕಾಲದಲ್ಲಿ ಯಾವ ಸುಪ್ರೀಂ ಕೋರ್ಟಿನ ಮುಂದೆ ಟ್ರಿಬ್ಯೂನಲ್‌ದಿಂದ 10 ಟಿ.ಎಂ.ಸಿ. ನೀರನ್ನು ತಾತ್ಕಾಲಿಕವಾಗಿ ಬಿಡಬೇಕು ಅಂತ ಹೇಳಿದಾಗ ಸುಪ್ರೀಂ ಕೋರ್ಟು ಪ್ರಧಾನಿಯವರನ್ನು ಮಧ್ಯೆ ಪ್ರವೇಶ ಮಾಡಿ ವಾಸ್ತವಿಕ ಸ್ಥಿತಿಯನ್ನು ತಿಳಿದುಕೊಂಡು ಒಂದು ತೀರ್ಮಾನಕ್ಕೆ ಬರಬೇಕೆಂದು ಹೇಳಿದರು. ಆದರೆ ಟ್ರಿಬ್ಯುನಲ್ 10 ಟಿ.ಎಂ.ಸಿ ನೀರು ಬಿಡಬೇಕೆಂದು ಹೇಳಿದ್ದು ವ್ಯವಹಾರವಾದ್ದು ಅಲ್ಲ. ನೀವು ನೋಡಿ ಬಂದು, ಒಂದು ತೀರ್ಮಾನ ತೆಗೆದುಕೊಳ್ಳಿ ಅಂತ ಸುಪ್ರೀಂ ಕೋರ್ಟ್ ಆದೇಶ ನೀಡಿದ್ದರಿಂದ ಪ್ರಧಾನಿಯವರು ಪ್ರವೇಶ ಮಾಡಿ ಹೇಳಿದರು. ಆ ಟೈಮ್‌ನಲ್ಲಿ ದೇವೇಗೌಡರು ಮಧ್ಯೆ ಪ್ರವೇಶ ಮಾಡಿ ಒಂದು ತೀರ್ಮಾನ ತೆಗೆದುಕೊಂಡಾಗ, ನಾವು ಎಲ್ಲ ಸರ್ವಪಕ್ಷದ ಎಲ್ಲ ಮುಖಂಡರುಗಳು ಆಡಳಿತ ಪಕ್ಷದ ನಾಯಕರು ಸೇರಿ ನಿರ್ಣಯವನ್ನು ಮಾಡಿದೆವು ಆ ನಿರ್ಣಯಗಳು ಏನು "ಸರ್ವೋಚ್ಚ ನ್ಯಾಯಾಲಯವು ಪ್ರಧಾನ ಮಂತ್ರಿಯವರಿಗೆ ಮಾಡಿದ ವಿನಂತಿಯ ಮೇರೆಗೆ ಮತ್ತು ಪ್ರಧಾನ ಮಂತ್ರಿಯವರು ನೀಡಿದ ನಿರ್ದೇಶನಕ್ಕೆ ಗೌರವ ಕೊಟ್ಟು ಅಂತರ್ ರಾಜ್ಯಗಳ ಸೌಹಾರ್ಧತೆಯ ದೃಷ್ಟಿಯಿಂದ 6 ಟಿ.ಎಂ.ಸಿ ನೀರನ್ನು ತಮಿಳುನಾಡಿಗೆ ಕರ್ನಾಟಕದಿಂದ ಬಿಡಲು ಈ ಸಭೆ ನಿರ್ಧರಿಸಿದೆ".

ಇದು 3-1-96 ರಂದು ತೆಗೆದುಕೊಂಡ ನಿರ್ಣಯ. ಮಾನ್ಯ ಪ್ರಧಾನ ಮಂತ್ರಿಯವರು ರಾಷ್ಟ್ರೀಯ ಮಾರ್ಗಸೂಚಿ ಪ್ರಕಟಿಸುವುದಕ್ಕೋಸ್ಕರವಾಗಿ ಫೆಬ್ರವರಿ ಮೊದಲವಾರದಲ್ಲಿ ಸಭೆ ಕರೆಯುವುದಾಗಿ ದಿನಾಂಕ 1-1-96ರ ಪತ್ರದಲ್ಲಿ ಸ್ಪಷ್ಟವಾಗಿ ತಿಳಿಸಿರುವುದರಿಂದ ರಾಷ್ಟ್ರೀಯ ಜಲ ನೀತಿಯ ಮಾರ್ಗಸೂಚಿ ಪ್ರಕಟಿಸುವವರೆಗೆ ಕರ್ನಾಟಕವು ಕಾವೇರಿ ನ್ಯಾಯಾಧಿಕರಣದ ಮುಂದೆ ಭಾಗವಹಿಸಬಾರದಾಗಿ ತೀರ್ಮಾನಿಸಿದೆ. ಇನ್ನು ಅದರ ಮುಂದೆ ಹೋಗಬಾರದು. ಕಾವೇರಿ ಜಲಾನಯನ ಪ್ರದೇಶದ ರೈತರಿಗೆ ನಿಯಮಾನುಸಾರಗಳ ಪ್ರಕಾರ ಜೂನ್‌ತಿಂಗಳವರೆಗೆ ಈ ಹಿಂದೆ ನೀರು ಕೊಡುತ್ತಿದ್ದ ರೀತಿಯಲ್ಲೇ ನೀರನ್ನು ಒದಗಿಸಲು ಸರಕಾರ ಬದ್ಧವಾಗಿರಬೇಕೆಂದು ಸಭೆ ತೀರ್ಮಾನಿಸಿದೆ. ರಾಜ್ಯದ

ಹಾಗೂ ಕಾವೇರಿ ಜಲಾನಯದ ಪ್ರದೇಶದ ರೈತರ ಹಿತದೃಷ್ಟಿಯಿಂದ ತೆಗೆದುಕೊಂಡ ಈ ನಿರ್ಣಯದ ತೀರ್ಮಾನದ ಹಿನ್ನೆಲೆಯಲ್ಲಿ ರಾಜ್ಯ ಸಮಸ್ತ ಜನಸ್ತೋಮ ಶಾಂತಿ ಮತ್ತು ಸೌಹಾರ್ದ ರೀತಿಯಲ್ಲಿ ಪರಿಸ್ಥಿತಿಯನ್ನು ಕಾಪಾಡಬೇಕೆಂದು ಈ ಮೂಲಕ ಸರ್ವ ಪಕ್ಷಗಳ ಸಭೆ ವಿನಂತಿಸುತ್ತದೆ. ಇದು ಸರ್ವಾನುಮತದ ನಿರ್ಣಯ. ಸದನದಲ್ಲಿ ನಿರ್ಣಯವನ್ನು ಮಾಡಿದೆವು. ಸರ್ವ ಪಕ್ಷಗಳ ಸದಸ್ಯರು ದಿನಾಂಕ 3-1-96ರಂದು ರಾಷ್ಟ್ರೀಯ ಜಲ ನೀತಿ ಮಾರ್ಗ ಸೂಚಿಯನ್ನು ಮಾನ್ಯ ಪ್ರಧಾನ ಮಂತ್ರಿಗಳು ಹೇಳಿದ್ದರಿಂದ ತಾತ್ಕಾಲಿಕವಾಗಿ ಅನಿವಾರ್ಯವಾಗಿ ನಮಗೆ ತೊಂದರೆ ಇದ್ದರೂ ಕೂಡ 6 ಟಿ.ಎಂ.ಸಿ ನೀರನ್ನು ಬಿಡುತ್ತೇವೆಂದು ನಾವು ಎರಡನೇ ನಿರ್ಣಯದಲ್ಲಿ ತೀರ್ಮಾನ ಮಾಡಿದ್ದೆವು. ನಾನು ತಮ್ಮನ್ನು ಇಷ್ಟೇ ಕೇಳುವುದಕ್ಕೆ ಇಚ್ಛೆಪಡುವಂಥಾದ್ದು. ಇವತ್ತು ಸರ್ವಾನುಮತದ ವಿಧಾನಸಭೆ ಮತ್ತು ವಿಧಾನಪರಿಷತ್ತಿನಲ್ಲಿ ಕೈಕೊಂಡ ಈ ನಿರ್ಣಯಕ್ಕೆ, ಪ್ರತಿಪಕ್ಷದ ಮುಖಂಡರು ತೆಗೆದುಕೊಂಡ ನಿರ್ಣಯಕ್ಕೆ ಸರಕಾರದವರು ಬದ್ಧರಾಗಿದ್ದಾರೋ ಇಲ್ಲವೋ ಎಂಬುದನ್ನು ತಿಳಿಸಬೇಕು. ಅಥವಾ ಇವರೇನಾದರೂ ಮನ ಬಂದಂತೆ ಇನ್ನೊಂದು ನಿರ್ಣಯವನ್ನು ತೆಗೆದುಕೊಂಡು ತಾವು ಇಲ್ಲಿ ಇನ್ನೊಂದು ನಿರ್ಣಯವನ್ನು ತೆಗೆದುಕೊಳ್ಳುವ ತೀರ್ಮಾನ ಮಾಡುವುದರಿಂದ, ಈ ರಾಜ್ಯದ ಕಾವೇರಿ ಜಲಾನಯನ ಪ್ರದೇಶದಲ್ಲಿನ ರೈತರು ಸಂಕಷ್ಟಕ್ಕೆ ಸಿಕ್ಕಿಕೊಳ್ಳುತ್ತಾರೆ ಎಂದು ಮಾನ್ಯ ನಾಗೇಗೌಡರಿಗೆ ಗೊತ್ತಿಲ್ಲವೇ, ಈ ರಾಜ್ಯದ ಮುಖ್ಯ ಮಂತ್ರಿಗಳಿಗೆ ಇದು ಗೊತ್ತಿಲ್ಲವೇ ? ಇನ್ನೊಂದು ದುರಾದೃಷ್ಟವೆಂದರೆ ಮಾನ್ಯ ನಾಗೇಗೌಡರವರು ಮಂಡ್ಯ ಜಿಲ್ಲೆಯಿಂದ ಬಂದಂತಹವರು ಅವರು ಈ ಸಮಸ್ಯೆಗಳನ್ನು ನೋಡಿ ಚೆನ್ನಾಗಿ ತಿಳಿದು ಬಹಳ ವರ್ಷಗಳಿಂದ ಅಭ್ಯಾಸ ಮಾಡಿದಂತಹವರಾಗಿದ್ದಾರೆ. ಇವರೇ ಹೆಜ್ಜೆ ಹೆಜ್ಜೆಗೂ ಮುಗ್ಗರಿಸುತ್ತಿದ್ದರೆ ಹೇಗೆ? ಜನರನ್ನು ಸಂಕಷ್ಟಕ್ಕೆ ಸಿಕ್ಕಿಸುವಂತಹ ಸಂಚಿನಲ್ಲಿ ಗೊಂದಲದಲ್ಲಿ ನಮ್ಮನ್ನು ಸಿಕ್ಕಿಸುವಂತಹ ಪ್ರಯತ್ನ ನಿಮ್ಮ ಕಾಲದಲ್ಲಿ ಮಾಡುತ್ತಿರುವಂಥಾದ್ದು ನಿಮಗೆ ಶೋಭೆ ತರುವಂತಹ ಸಂಗತಿ ಸರಿಯೇ? ತಾವು ಕಾವೇರಿ ಮೇಲೆ ಆಣೆ ಇಟ್ಟು ಅಧಿಕಾರಕ್ಕೆ ಬಂದಿರಿ. ನಮ್ಮವರೇ ಇಲ್ಲಿ ಮುಖ್ಯಮಂತ್ರಿಯಾದಂತಹವರು ಪ್ರಧಾನಿಗಳಾದರು. ನಾನು ಬಹಳ ದುಃಖದಿಂದ ಹೇಳುತ್ತೇನೆ. 9-4-97ರಂದು ಸರಕಾರದ ಅಟಾರ್ನಿ ಜನರಲ್ ಶ್ರೀ ಅಶೋಕ ದೇಸಾಯಿಯವರು ಸುಪ್ರೀಂ ಕೋರ್ಟಿನ ನ್ಯಾಯಪೀಠದ ಮುಂದೆ ಕಾವೇರಿ ಪ್ರಾಧಿಕಾರ ರಚನೆ ಮಾಡಲು ಕೇಂದ್ರ ಸರ್ಕಾರ ತೀರ್ಮಾನ ಮಾಡಿದ್ದನ್ನು ತಿಳಿಸಿದ್ದು, ಬ್ರಿಟಿಷರು ನಮಗೆ ಮಾಡಿದ ಅನ್ಯಾಯಕ್ಕಿಂತ ದೊಡ್ಡ ಅನ್ಯಾಯವೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ತಮಿಳುನಾಡಿನ ಪರ ಇದ್ದಂತಹ ಕಾವೇರಿ ನ್ಯಾಯಾಧಿಕರಣದ ನ್ಯಾಯಾಧೀಶರು ಮಾಡಿದ್ದ ಅನ್ಯಾಯಕ್ಕಿಂತ ಇದು ದೊಡ್ಡ ಅನ್ಯಾಯವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ತಮಿಳುನಾಡಿನ ಪರ ಇದ್ದಂತಹ ಕೇಂದ್ರದ ಅಧಿಕಾರಿಗಳು ಮಾಡಿದ ಅನ್ಯಾಯಕ್ಕಿಂತ ಘೋರ ಅನ್ಯಾಯ ಇದು ಎಂದು ಹೇಳುವುದ್ಕಕೆ ಇಚ್ಛೆಪಡುತ್ತೇನೆ. ನಮ್ಮವರೇ ನಮ್ಮ ಜನಕ್ಕೆ ಅನ್ಯಾಯ ಮಾಡುವಂತಹ ಪ್ರಯತ್ನ ನಡೆಯಿತು. ಕನ್ನಡದಲ್ಲಿ ಒಂದು ಗಾದೆ ಇದೆ. " ಹೆತ್ತ ತಾಯಿ ತನ್ನ ಮಗುವಿಗೆ ವಿಷದ ಹಾಲನ್ನು ಕುಡಿಸುವುದಕ್ಕೆ ಪ್ರಯತ್ನ ಪಟ್ಟರೆ ಆ ಮಗುವನ್ನು ಯಾರು ಉಳಿಸಬೇಕು" ಎಂ.ಪಿ.ಗಳಾಗಿ ಹೋರಾಟ ಮಾಡಿದ್ದೀರಿ. ಯಾವುದೇ ಕಾರಣಕ್ಕೆ ಅಲ್ಲಿ ಟ್ರಿಬ್ಯುನಲ್ ರಚನೆಯಾಗಿರುವಂಥಾದ್ದು ಸರಿಯಿಲ್ಲವೆನ್ನುವರು ತಮಿಳುನಾಡಿನ ಪರ ಇದ್ದಾರೆ, ಅದು ಕಾರ್ಯಕಲಾಪ ನಡೆಸಕೂಡದೆಂದು ಹೇಳಿದಿರಿ. ಮುಖ್ಯಮಂತ್ರಿಗಳಾಗಿ ತಾವೇ ನಿರ್ಣಯ ಮಾಡಿದಿರಿ.

ಕಾವೇರಿ ರಾಷ್ಟ್ರೀಯ ಜಲ ಪಾಲಿಸಿ ಗೈಡ್‌ಲೈನ್ಸ್ ಫ್ರೇಮ್ ಆಗುವವರೆಗೆ ಯಾವುದೇ ಅಧಿಕೃತ ಕಾರ್ಯಕಲಾಪ ನಡೆಸಬಾರದೆಂದು ಹೇಳಿದಿರಿ. ಮುಖ್ಯಮಂತ್ರಿಗಳಾಗಿ ತಾವೇ ನಿರ್ಣಯವನ್ನು ಮಾಡಿದಿರಿ. ಇವರು ಪ್ರಧಾನಿಯಾಗಿ ಅಧಿಕಾರಕ್ಕೆ ಬಂದ ಮೇಲೆ ಖಾಲಿ ಇದ್ದ ನ್ಯಾಯಾಧಿಕರಣದ ಅಧ್ಯಕ್ಷರನ್ನು ನೇಮಕ ಮಾಡಿದಿರಿ. ಈಗ ಈ ರೀತಿಯ ನಿರ್ಣಯವನ್ನು ತಾವು ಕೈಗೊಂಡಿದ್ದೀರಿ. 3-1-96 ಹಾಗೂ 28-12-95 ರಂದು ಸರ್ವಾನುಮತದಿಂದ ಈ ನಿರ್ಣಯವನ್ನು ಇಲ್ಲಿ ತೆಗೆದುಕೊಂಡೆವು ಅದನ್ನು ಸಹ ತಿಳಿಸುವಂತಹ ಪ್ರಾಮಾಣಿಕ ಪ್ರಯತ್ನವನ್ನು ನಾನು ಇಂದು ಮಾಡಿದ್ದೇನೆ. ಇನ್ನೊಂದು ಬಹಳ ಪ್ರಮುಖವಾಗಿರತಕ್ಕಂಥಾದ್ದು ಇದೆ. ದಿನಾಂಕ 1-1-96ರಲ್ಲಿ ಸ್ವತಃ ಆಗ ಪ್ರಧಾನಿಯಾಗಿದ್ದ ಮಾನ್ಯ ನರಸಿಂಹರಾಯರು ಒಂದು ಪತ್ರವನ್ನು ಬಹಳ ಸ್ಪಷ್ಟವಾಗಿ ಬರೆದರು. ಈ 6 ಟಿಎಂಸಿ ನೀರನ್ನು ಬಿಡಿ. ರಾಷ್ಟ್ರೀಯ ಮಾರ್ಗಸೂಚಿ ಇದೊಂದೇ ಇದಕ್ಕೆ ಮಾರ್ಗ. ಬೇರೆ ಯಾವುದೇ ರೀತಿಯಾಲ್ಲೂ ಇದರ ಬಗ್ಗೆ ತೀರ್ಮಾನವನ್ನು ಕೈಗೊಳ್ಳುವುದಕ್ಕೆ ಸಾಧ್ಯವಿಲ್ಲ ಇದಕ್ಕೆಂದು ನಾನು ಸಭೆ ಕರೆಯುತ್ತೇನೆಂದು ಹೇಳಿದರು, ಅದರಂತೆ ಒಂದು ಸಭೆಯನ್ನು ಸಹ ಕರೆದರು. ಇದಾದ ಮೇಲೆ ಮಾನ್ಯ ನಾಗೇಗೌಡರವರು ಹಾಗೂ ಜೆ.ಹೆಚ್. ಪಟೇಲ್‌ರವರು ಅನೇಕ ಬಾರಿ ಕನಿಷ್ಟ ವಾರಕ್ಕೊಂದು ಬಾರಿ ದೆಹಲಿಗೆ ಹೋದರು. ಅಲ್ಲಿ ನಮ್ಮವರೇ ಪ್ರಧಾನಿಯಾಗಿದ್ದರು ಯಾವುದಾದರೂ ಒಂದು ಬಾರಿ ರಾಷ್ಟ್ರೀಯ ಜಲ ನೀತಿ ಮಾರ್ಗ ಸೂಚಿಯನ್ನು ರೂಪಿಸಬೇಕೆಂದು ನೀವು ವಿನಂತಿಯನ್ನು ಅವರಿಗೆ ಮಾಡಿದ್ದೀರಾ? ಮಾನ್ಯ ಪ್ರಧಾನ ಮಂತ್ರಿಯವರಲ್ಲಿ ಒತ್ತಾಯ ತಂದಿದ್ದೀರಾ ಅವರಿಗೇನಾದರೂ ಪತ್ರವನ್ನು ಬರೆದಿದ್ದೀರೋ? ಬರೆದಿದ್ದರೆ ದಯವಿಟ್ಟು ಅದನ್ನು ಸದನದಲ್ಲಿ ಆ ದಾಖಲೆಗಳನ್ನು ಇಡಬೇಕೆಂದು ನಾನು ತಮ್ಮ ಮೂಲಕ ಒತ್ತಾಯವನ್ನು ಮಾಡುತ್ತೇನೆ. ಕಾವೇರಿಯಲ್ಲಿ ನೀರೇ ಇಲ್ಲದಿರುವಂತಹ ಸಂದರ್ಭದಲ್ಲಿ 205 ಟಿ.ಎಂ.ಸಿ ನೀರನ್ನು ಬಿಡಬೇಕೆಂಬ ಒಂದು ಅವೈಜ್ಞಾನಿಕ ವರದಿಯನ್ನು ಅನುಷ್ಠಾನಗೊಳಿಸುವುದಕ್ಕೆ ಮತ್ತು 11,20,000 ಎಕರೆಗಿಂತ ಹೆಚ್ಚು ನೀರಾವರಿ ಮಾಡಬಾರದೆಂಬ ತೀರ್ಮಾನಕ್ಕೆ ನಾನೇ ಕ್ರಮ ತೆಗೆದುಕೊಳ್ಳುತ್ತೇನೆ, ನಾನೇ ಮುಂದೆ ನಿಂತು ಇದನ್ನು ಅನುಷ್ಠಾನಗೊಳಿಸುತ್ತೇನೆಂದು ಕೇಂದ್ರ ಸರಕಾರ ಸುಪ್ರೀಂ ಕೋರ್ಟಿಗೆ ಕಾವೇರಿ ಪ್ರಾಧಿಕಾರ ರಚನೆ ಮಾಡಿರುವುದಕ್ಕೆ ಹೋಗಿರುವಂಥಾದ್ದು ಇದೆ. ನಾನು ಏನನ್ನು ಹೇಳುವುದಕ್ಕೆ ಹೊರಟಿದ್ದೇನೆಂದರೆ ಬಹುಶಃ ನಿಮ್ಮ ತಪ್ಪಿನಿಂದ ಕಾವೇರಿ ಜಲಾನಯನ ಪ್ರದೇಶ ಇರಬಹುದು ಕೃಷ್ಣಾ ಜಲಾನಯನ ಪ್ರದೇಶ ಇರಬಹುದು ಮತ್ತೆ ಮತ್ತೆ ನೀವು ತಪ್ಪುಗಳನ್ನು ಮಾಡಿ ನಿಮ್ಮ ಕುರ್ಚಿಗಳನ್ನು ಉಳಿಸುವುದಕ್ಕೋಸ್ಕರ ತಮಿಳುನಾಡಿನ ರಕ್ಷಣೆ ಅವರಿಗೆ ಸಿಕ್ಕಿಬೇಕೆಂಬುದಕ್ಕೋಸ್ಕರ ಆ ಮುಖ್ಯಮಂತ್ರಿಗಳನ್ನು ಒಲಿಸಿಕೊಳ್ಳುವುದಕ್ಕೋಸ್ಕರ ಆಂಧ್ರಪ್ರದೇಶದ ಮುಖ್ಯಮಂತ್ರಿಯವರನ್ನು ಒಲಿಸಿಕೊಳ್ಳುವುದಕ್ಕೋಸ್ಕರ ಮತ್ತೆ ಮತ್ತೆ ತಪ್ಪುಗಳನ್ನು ಮಾಡಿ ದೇಶದ ಜನರ ಮುಂದೆ ರಾಜ್ಯದ ಜನರನ್ನು ಒಂದು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವಂತಹ ಅಕ್ಷಮ್ಯ ಅಪರಾಧವನ್ನು ನೀವೇ ಮಾಡಿಕೊಂಡು ಬರುತ್ತೀದ್ದೀರಿ. ಸುಪ್ರೀಂ ಕೋರ್ಟಿನಲ್ಲೂ ಸಹ ನೀವು ಬೆಳಿಗ್ಗೆ ಒಂದು ಸಂಜೆ ಒಂದು ನಿಲುವನ್ನು ತೆಗೆದುಕೊಳ್ಳುತ್ತೀರಿ ಎಂದು ಅಲ್ಲಿನ ನ್ಯಾಯಾಧೀಶರು ನಿಮ್ಮನ್ನು ಹಗುರವಾಗಿ ಟೀಕೆ ಮಾಡುವ ಮಟ್ಟಕ್ಕೆ ನೀವು ಬೇಜವಾಬ್ದಾರಿಯಿಂದ ನಡೆದುಕೊಳ್ಳುವ ಮಟ್ಟಕ್ಕೆ ಈ ಸರಕಾರ ಮಾಡುತ್ತಿದೆ. 1956ರ ಅಂತರ್ ರಾಜ್ಯದ ಜಲವಿವಾದದ ಕಾನೂನಿನ ಬಗ್ಗೆ ಒಂದು ತಿದ್ದುಪಡಿ ಅವಶ್ಯಕತೆ ಇದೆ ಎಂದು ಅನೇಕ

ನೀರಾವರಿ ಎಕ್ಸ್‌ಪರ್ಟ್ಸ್‌ಗಳು ಅನೇಕ ಬುದ್ಧಿಜೀವಿಗಳು ಏನು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಅದರ ಕಡೆಗೆ ಗಮನಹರಿಸಬೇಕಾಗಿತ್ತು. 18 ಜನ ನಮ್ಮ ರಾಜ್ಯದಿಂದ ಅಧಿಕಾರ ಪಕ್ಷದಲ್ಲಿರುವ ಲೋಕಸಭಾ ಸದಸ್ಯರು ಇದ್ದು ನಮ್ಮವರೇ ಪ್ರಧಾನಿಯಾಗಿದ್ದ ಕಾಲದಲ್ಲಿ 5-6 ಜನ ನಮ್ಮವರೇ ಕೇಂದ್ರದಲ್ಲಿ ಕ್ಯಾಬಿನೆಟ್ ಸಚಿವರಾಗಿದ್ದಂತಹ ಕಾಲದಲ್ಲಿ ಮತ್ತೆ ಕೇಂದ್ರದಲ್ಲಿರುವ ಸರಕಾರವೇ ರಾಜ್ಯದಲ್ಲಿ ಸರಕಾರ ನಡೆಸುತ್ತಿರುವ ನಮ್ಮ ಮುಖ್ಯ ಮಂತ್ರಿಗಳು ಇದ್ದಂತಹ ಕಾಲದಲ್ಲಿ ಈ ರೀತಿ ಅನ್ಯಾಯ ನಡೆಯುತ್ತಿದೆ. ಆದರೆ ಇದ್ಯಾವುದರ ಬಗ್ಗೆಯೂ ಪರಿವೇ ಇಲ್ಲ ಎನ್ನುವುದನ್ನು ಈ ರಾಜ್ಯದ ಜನ ನಂಬಬೇಕೇ? ಪ್ರತಿ ಹಂತದಲ್ಲಿ ಕೇಂದ್ರ ಸರಕಾರ ತೆಗೆದುಕೊಳ್ಳುವಂತಹ ನಿರ್ಣಯ ನಿಮಗೆ ಗೊತ್ತಿತ್ತು ಎಂಬುದನ್ನು ನಾನು ಇಲ್ಲಿ ಹೇಳುವುದಕ್ಕೆ ಹೊರಟಿದ್ದೇನೆ. ಪ್ರಾಧಿಕಾರ ರಚನೆ ಮಾಡುವುದಕ್ಕೆ ಅವರು ಮುಂದಾಗಿದ್ದಾರೆಂಬುದು ನಿಮಗೆ ಗೊತ್ತಿತ್ತು. ನಮ್ಮಿಂದ ಆಯ್ಕೆಯಾಗಿ ಹೋದ ಎಂ.ಪಿ.ಗಳು ಅಲ್ಲಿ ಕೇಂದ್ರದಲ್ಲಿ ಸಚಿವ ಸಂಪುಟ ದರ್ಜೆಯ ಸಚಿವರಾಗಿದ್ದವರು ಏನು ಇದ್ದರು ಅವರೂ ಕೂಡ ಕಣ್ಣುಮುಚ್ಚಿಕೊಂಡು ಕುಳಿತುಕೊಂಡರು. ಅನೇಕ ಬಾರಿ ಮಾನ್ಯ ಪ್ರಧಾನಮಂತ್ರಿಯವರ ಜೊತೆ ವೈಯಕ್ತಿಕವಾಗಿ ರಾಜ್ಯದ ಸಮಸ್ಯೆಗಳ ಬಗ್ಗೆ ಮತ್ತು ಬೇರೆ ಬೇರೆ ಸಮಸ್ಯೆಗಳ ಬಗ್ಗೆ ಮಾತನಾಡುತ್ತಿದ್ದಂತಹ ನೀರಾವರಿ ಸಚಿವರಾದ ಮಾನ್ಯ ನಾಗೇಗೌಡರವರಿಗೂ ಗೊತ್ತಿತ್ತು. ಮುಖ್ಯಮಂತ್ರಿಗಳಾದ ಮಾನ್ಯ ಜೆ.ಹೆಚ್. ಪಟೇಲರಿಗೂ ಗೊತ್ತಿತ್ತು. ಆದರೆ ಆವತ್ತು ನಿಮಗೆ ರಾಜ್ಯದ ಹಿತ ಮುಖ್ಯವಾಗಿರಲಿಲ್ಲ ನಿಮ್ಮ ಕುರ್ಚಿ ಮುಖ್ಯ ಇತ್ತು. ಹಾಗಾಗಿ ಈ ತಪ್ಪುಗಳ ಮೇಲೆ ತಪ್ಪುಗಳಾಗುವುದಕ್ಕೆ ಬಿಟ್ಟು ಸುಪ್ರೀಂ ಕೋರ್ಟಿನ ಮುಂದೆ ಕೈಕಟ್ಟಿ ಕುಳಿತುಕೊಂಡು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವಂತಹ ಪರಿಸ್ಥಿತಿಗೆ ನಮ್ಮನ್ನು ದೂಡಿದ್ದೀರಿ ಎನ್ನುವಂತಹ ಮಾತನ್ನು ನಾನು ಅನಿವಾರ್ಯವಾಗಿ ಹೇಳಬಯಸುತ್ತೇನೆ. ಕಾವೇರಿ ಪ್ರಾಧಿಕಾರವೆಂದು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ತಮಿಳುನಾಡಿನ ಹಿತರಕ್ಷಣೆಯ ಪ್ರಾಧಿಕಾರವೆಂದು ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ ಈ ಪ್ರಾಧಿಕಾರದ ನಿಯಮಾವಳಿಗಳು ಏನು ಇರಬೇಕೆಂದು ನಿಶ್ಚಯ ಮಾಡಿದವರೇ ತಮಿಳುನಾಡಿನ ಸರಕಾರದವರು. ಅದನ್ನು ಕಾರ್ಯರೂಪಕ್ಕೆ ತರುವಂತಹ ಪ್ರಯತ್ನ ಮಾಡಿದಾಗ, ಇದನ್ನು ಕಾವೇರಿ ಪ್ರಾಧಿಕಾರವೆಂದು ಕರೆಯುವುದಕ್ಕೆ ಬದಲಾಗಿ ತಮಿಳುನಾಡಿನ ಹಿತ ರಕ್ಷಣೆಯ ಪ್ರಾಧಿಕಾರವೆಂದು ಕರೆಯುವುದು ಸೂಕ್ತವೆಂದು ಹೇಳಲು ಇಚ್ಛೆಪಡುತ್ತೇನೆ. ಕೆ.ಆರ್.ಎಸ್. ಜಲಾಶಯದ ನಿಯಂತ್ರಣವನ್ನು ಬಳಸಿಕೊಂಡು ನೀರು ಗಂಟಿ ಕೆಲಸ ಮಾಡುವಂತಹ ಪರಿಸ್ಥಿತಿಗೆ ನಮ್ಮನ್ನು ತಳ್ಳಿದ್ದೀರಿ ಎಂಬ ಮಾತನ್ನು ಅನಿವಾರ್ಯವಾಗಿ ಹೇಳಬೇಕಾಗುತ್ತದೆ. ರಾಷ್ಟ್ರೀಯ ಸಂಯುಕ್ತ ರಂಗ ಸರಕಾರ ಕೂಡ ಟ್ರಿಬ್ಯುನಲ್ ರಚನೆ ಬಗ್ಗೆ ಪ್ರಸ್ತಾಪ ಮಾಡುವಂತಹ ಕೆಲಸದ ಮೂಲಕ ಒಂದು ಹೊಣೆಗೇಡಿತನವನ್ನು ಜಗಜ್ಜಾಹೀರು ಪಡಿಸಿದೆ. ಮಾನ್ಯ ವಿ.ಪಿ. ಸಿಂಗ್‌ರ ಕಾಲದಲ್ಲಿ ಏನು ತಪ್ಪು ಆಯಿತೋ ಅದೇ ತಪ್ಪು ಮತ್ತೊಮ್ಮೆ ಮಾನ್ಯ ದೇವೇಗೌಡರವರು ಪ್ರಧಾನಿಯಾಗಿದ್ದಂತಹ ಕಾಲದಲ್ಲಿ ಮರುಕಳಿಸಿತು ಎನ್ನುವುದನ್ನು ನಾನು ಅನಿವಾರ್ಯವಾಗಿ ಹೇಳುವುದಕ್ಕೆ ಬಯಸುತ್ತೇನೆ. ಒಂದು ಮಾತನ್ನು ನಾನು ಈ ಸದನದ ಹಾಗೂ ಮಾನ್ಯ ನೀರಾವರಿ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಸುಪ್ರೀಂ ಕೋರ್ಟಿನ ಮುಂದೆ ಕಾವೇರಿ ವಿವಾದದ ಬಗ್ಗೆ ಚರ್ಚೆಯಾಗುತ್ತಿದ್ದ ಕಾಲದಲ್ಲಿ 1971 ರಲ್ಲಿ 1974ರಲ್ಲಿ ತಮಿಳುನಾಡಿನ ರಿಟ್ ಅರ್ಜಿಗಳ ಬಗ್ಗೆ ತನ್ನ ಅಭಿಪ್ರಾಯವನ್ನು ಕೊಡುವಂತಹ ಕಾಲದಲ್ಲಿ ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಅಂತರ್ ರಾಜ್ಯ ನದಿ ವಿವಾದದಲ್ಲಿ ನಾವು

ಮಧ್ಯೆ ಪ್ರವೇಶ ಮಾಡುವುದಕ್ಕಾಗುವುದಿಲ್ಲವೆನ್ನುವ ತೀರ್ಪನ್ನು ಏನು ಕೊಟ್ಟಿದ್ದಾರೆ, ಅದನ್ನು ತಾವು ಗಮನಿಸಿದ್ದೀರ ಎಂದು ನಾನು ತಿಳಿದುಕೊಂಡಿದ್ದೇನೆ. ಹೀಗೆ ಒಂದಾದ ಮೇಲೆ ಒಂದು ತಪ್ಪುಗಳನ್ನು ಮಾಡಿಕೊಂಡು ಬರುತ್ತಿದ್ದೇವೆ. ಕರಡು ನಿಯಮಗಳ ಪ್ರಕಾರ ನಿಯಮ 2 ರ ಅನ್ವಯ ಕರ್ನಾಟಕ ಸರಕಾರದ ಮುಖ್ಯ ಕಾರ್ಯದರ್ಶಿಯವರನ್ನು ಬಿಟ್ಟರೆ ಉಳಿದವರೆಲ್ಲ ಕೇಂದ್ರ ಸರಕಾರ ಮತ್ತು ತಮಿಳುನಾಡಿನ ಪರ ಇರುವಂತಹವರೇ ಈ ಸಮಿತಿಯ ಸದಸ್ಯರಾಗಿದ್ದಾರೆ. ಈ ನಿಯಮ 7(2)ರಂತೆ ಎಕ್ಸಿಕ್ಯುಟಿವ್ ಇಂಜಿನಿಯರ್ ಶ್ರೇಣಿಯ ಅಧಿಕಾರಿಗಳನ್ನು ಜಲಾಶಯ ಉಸ್ತುವಾರಿ ನೋಡಿಕೊಳ್ಳುವುದಕ್ಕೆ ಪ್ರಾಧಿಕಾರ ನೇಮಿಸಿರುವಂಥಾದ್ದು ಅತ್ಯಂತ ಕೆಟ್ಟದಾದ ನಿಯಮ. ನಿಯಮ 7 (6)ರಂತೆ ರಾಜ್ಯ ಸರಕಾರದ ಯಾವುದೇ ನಿರ್ದೇಶನವನ್ನು ಪಾಲಿಸದೇ ಇದ್ದಲ್ಲಿ ಜಲಾಶಯಗಳ ಸ್ವಾಧೀನವನ್ನು ತೆಗೆದುಕೊಳ್ಳುವ ಅಧಿಕಾರವನ್ನು ಸಹ ಪ್ರಾಧಿಕಾರಕ್ಕೆ ಇವತ್ತು ನೀಡಲಾಗಿದೆ. 7(6)ನಲ್ಲಿ ಆ ಅವಕಾಶ ಮಾಡಿಕೊಂಡಿದ್ದಾರೆ. ನಿಯಮ 10ರಂತೆ ಕಾವೇರಿ ನ್ಯಾಯಾಧಿಕರಣ ತನ್ನ 25-6-90ರ ಮಧ್ಯಂತರ ತೀರ್ಪನ್ನು ಜಾರಿಗೊಳಿಸುವ ಹೊಣೆಗಾರಿಕೆ ನೀಡಿದ್ದು ಈ ಪ್ರಾಧಿಕಾರ ರಚನೆಯಾದಲ್ಲಿ 10(a) ರಂತೆ 205 ಟಿ.ಎಂ.ಸಿ ನೀರನ್ನು ಮೆಟ್ಟೂರು ಜಲಾಶಯಕ್ಕೆ ಬಿಡಿಸುವ ಒಂದು ಹೊಣೆಗಾರಿಕೆ ಸಹ ಅವರ ಮೇಲೆ ಜವಾಬ್ದಾರಿಯನ್ನು ಕೊಟ್ಟಂತಾಗುತ್ತದೆ. ನಿಯಮ 10(1) ಸಿ ಪ್ರಕಾರ ಕರ್ನಾಟಕ ರಾಜ್ಯ ಬಹಳ ಪ್ರಮುಖವಾಗಿ ನಮ್ಮ ನೀರಾವರಿ ವಿಸ್ತೀರ್ಣವನ್ನು 11.2 ಲಕ್ಷ ಎಕರೆಗಿಂತ ಹೆಚ್ಚು ಮಾಡದಂತೆ ನೋಡಿ ಕೊಳ್ಳುವ ಕೆಲಸವನ್ನು ಪ್ರಾಧಿಕಾರಕ್ಕೆ ಅಧಿಕಾರ ನೀಡಿದೆ. ಒಂದು ಟ್ರಿಬ್ಯುನಲ್‌ನ ಇಂಟಿರಿಮ್ ಆರ್ಡರ್‌ನ್ನು ಜಾರಿಗೆ, ಕಾರ್ಯರೂಪಕ್ಕೆ ತರುವುದಕ್ಕೋಸ್ಕರ ಇಲ್ಲಿ ಪ್ರಾಧಿಕಾರ ರಚನೆ ಮಾಡಿರುವಂಥಾದ್ದು. ನಮಗೆ ಗೊತ್ತಿರುವಂತೆ ದೇಶದ ಇತಿಹಾಸದಲ್ಲಿ ಇಲ್ಲ. ಇದು ದೇಶದ ಇತಿಹಾಸದಲ್ಲಿ ಮೊದಲ ಬಾರಿಗೆ ಆಗಿರುವಂಥಾದ್ದು. ಟ್ರಿಬ್ಯುನಲ್ ಫೈನಲ್ ಆರ್ಡರ್ ಕೊಟ್ಟ ಮೇಲೆ ಉಭಯ ರಾಜ್ಯಗಳು ಒಪ್ಪಿಗೆ ಕೊಟ್ಟರೆ ಆಗ ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಾಧಿಕಾರ ರಚನೆ ಮಾಡಿದರೆ ಆಗ ಆ ಪ್ರಸ್ತಾಪಕ್ಕೆ ಅದಕ್ಕೆ ಒಂದು ಅರ್ಥ ಬರುತ್ತದೆ.

11.30 ಎ.ಎಂ

ಈಗ ಅದಕ್ಕೆ ನೀವು ಅವಕಾಶವನ್ನು ಮಾಡಿಕೊಟ್ಟಿದ್ದೀರಿ.ಮತ್ತೆ 11.2 ಲಕ್ಷ ಎಕರೆಗಿಂತ ನೀರಾವರಿ ಮಾಡಬಾರದು ಎಂದು ಹೇಳುವುದಕ್ಕೆ ಅವರ್ಯಾರು? ಇವತ್ತು ನಮ್ಮ ಪಾಲಿಗೆ ಎಷ್ಟು ನೀರು ಬರುತ್ತದೆ, ಯಾವ ರೀತಿ ಬೆಳೆ ಪ್ಯಾಟ್ರನ್ ಇರಬೇಕು, ಒಂದು ಟಿಎಂಸಿಗೆ ನಾವು ಎಷ್ಟು ಬೆಳೆಯನ್ನು ಬೆಳೆಯುತ್ತಿದ್ದೇವೆ, ಅದನ್ನು ಕಡಿಮೆ ಮಾಡಿಕೊಳ್ಳುವುದು ಹೇಗೆ, ವಿಸ್ತೀರ್ಣ ಮಾಡಿಕೊಳ್ಳುವುದು ಹೇಗೆ ಎಂದು ಅವಕಾಶ ಮಾಡಿಕೊಳ್ಳುವ ಸಾರ್ವಭೌಮ ಹಕ್ಕು ನಮಗೆ ಇರುವಂಥ ಈ ಕಾಲದಲ್ಲಿ ಈ ರೀತಿ ನಿಮ್ಮ ಆನ್‌ಗೋಯಿಂಗ್ ಎಲ್ಲಾ ವರ್ಕ್ಸ್‌ನ್ನು ನಿಲ್ಲಿಸುವಂಥ ಒಂದು ಅಧಿಕಾರವನ್ನು ಕೊಡುವಂಥ ಪ್ರಯತ್ನ ಇದರಲ್ಲಿ ಆಗಿದೆ ಮತ್ತು ನಿಯಮ 10(2)ರ ಪ್ರಕಾರ ಕರ್ನಾಟಕ ಯಾವುದೇ ಹೊಸ ಯೋಜನೆಗಳನ್ನು ಕೈಗೊಳ್ಳಬಾರದು. ಅಥವಾ ಈಗಿರುವ ಯೋಜನೆಗಳನ್ನು ಪುನರ್ ರೂಪಿಸಲು ಅಧಿಕಾರ ನಮಗೆ ಇರುವುದಿಲ್ಲ. ನಿಯಮ 10(3)ರ ಪ್ರಕಾರ ಕಾವೇರಿ ಜಲಾನಯನ ಪ್ರದೇಶದಲ್ಲಿ ಬರುವ ಏಳು ಜಲಾಶಯಗಳ ಗೇಟುಗಳನ್ನು ನಿಯಂತ್ರಿಸುವ ಅಧಿಕಾರವನ್ನೂ ಸಹ ನಾವು ಪ್ರಾಧಿಕಾರಕ್ಕೆ

ಕೊಡುತ್ತಿದ್ದೇನೆ. ಈ ರೀತಿ ಜನತೆಗೆ ಅನ್ಯಾಯ ಮಾಡುವಂಥ ಒಂದು ಪ್ರಾಧಿಕಾರ ರಚನೆ ಮಾಡುವಂಥ ಪ್ರಯತ್ನ ಇವತ್ತು ಇಲ್ಲಿ ಆಗುತ್ತಿದೆ. ಮತ್ತೆ ಇನ್ನೊಂದು ಬಹಳ ಪ್ರಮುಖವಾದ ಸಂಗತಿಯನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಇಚ್ಛಿಪಡುವುದು, 1996 ಅಕ್ಟೋಬರ್‌ನಿಂದ ಅಂದರೆ ಮಳೆಗಾಲ ಮುಗಿದಮೇಲೆ 1997ರ ಎಪ್ರಿಲ್‌ರವರೆಗೆ ಅಂದರೆ ಮಳೆಗಾಲ ಪ್ರಾರಂಭವಾಗುವುದಕ್ಕೆ ಮುಂಚೆ ಬಿಟ್ಟು 237 ಟಿಎಂಸಿ ನೀರನ್ನು ಬಿಟ್ಟಿದೆ ಎಂದು ತಮಿಳುನಾಡಿನ ನೀರಾವರಿ ಸಚಿವರು ಹೇಳಿಕೆಯನ್ನು ನೀಡಿದ್ದಾರೆ. ಅಂದರೆ ಮಧ್ಯಂತರ ಆದೇಶದ ಪ್ರಕಾರ 205 ಟಿಎಂಸಿ ಯಷ್ಟು ನೀರನ್ನು ಬಿಡಬೇಕಾಗಿತ್ತು. ಇನ್ನು 32 ಟಿಎಂಸಿ ನೀರನ್ನು ಹೊಸದಾಗಿ ಬಿಡುವುದಕ್ಕೆ ಕಾರಣಕರ್ತರು ಯಾರು? ಏಕೆಂದರೆ ತಮಿಳುನಾಡಿನ ಸಚಿವರೇ ಜವಾಬ್ದಾರಿಯುತವಾಗಿ ಈ ಮಾತನ್ನು ಹೇಳಬೇಕಾದರೆ ಅಂದರೆ ನೀವು ಕದ್ದುಮುಚ್ಚಿ ಅವರ ಇನ್‌ಫ್ಲ್ಯೂಯೆನ್ಸ್‌ಗೋಸ್ಕರ ನೀರನ್ನು ಬಿಡುತ್ತಿದ್ದೀರಿ ಕೇಂದ್ರ ಸರ್ಕಾರಕ್ಕೆ ಅವರು ಬೆಂಬಲ ಕೊಡುತ್ತಿದ್ದಾರೆ, ಇರಲಿಬಿಡು ಎಂದು ಅವರನ್ನು ತೃಪ್ತಿ ಪಡಿಸಿ ನಮ್ಮ ರಾಜ್ಯದ ಜನರಿಗೆ ಮೋಸ ಮಾಡುವಂಥ ಕೆಲಸ ನಿರಂತರವಾಗಿ ನಡೆಯುತ್ತಿದೆ ಎಂದು ಈ ಒಂದು ಅಂಕಿಅಂಶಗಳಿಂದ ಸ್ಪಷ್ಟವಾಗಿ ಕಾಣುತ್ತಾ ಇದೆ. ಈ ಕಾವೇರಿ ಜಲಾನಯನ ಪ್ರದೇಶದಲ್ಲಿ ನೀರಿನ ಉಪಯೋಗವಾಗಿರುವುದು ಶೇಕಡ 48 ರಷ್ಟು ಮಾತ್ರ. ಇನ್ನು ಹಲವಾರು ಕಾಮಗಾರಿಗಳು ಇವತ್ತು ಪ್ರಗತಿಯಲ್ಲಿದೆ. ವರುಣಾ ನಾಲೆಯ ಕೆಲಸ ಹಲವಾರು ಕಾರಣಗಳಿಂದ ನಿಂತೇ ಹೋಗಿದೆ. ಇನ್ನೂ ಸುಮಾರು 24 ಸಾವಿರ ಹೆಕ್ಟೇರ್ ಗಿಂತ ಹೆಚ್ಚಿಗೆ ಜಮೀನಿಗೆ ನೀರು ನೀಡುವ ಜವಾಬ್ದಾರಿ ಸರ್ಕಾರದ ಮೇಲಿದೆ. ಎಗಚಿ ಅಣೆಕಟ್ಟು ಇನ್ನೂ ಸಂಪೂರ್ಣವಾಗಿಲ್ಲ. ಹಲವಾರು ಏತ ನೀರಾವರಿ ಯೋಜನೆಗಳಿಗೆ ಅಡಿಗಲ್ಲನ್ನಿಟ್ಟು ಕೋಟ್ಯಾಂತರ ರೂಪಾಯಿ ಖರ್ಚು ಮಾಡಿದನಂತರ ರಾಜಕೀಯದ ಒಂದು ಕಾರಣಗಳಿಗಾಗಿ ನೀರಾವರಿ ಯೋಜನೆಗಳೂ ಇನ್ನೂ ಸಹಾ ಪ್ರಾರಂಭವಾಗಿಲ್ಲ. ಅದನ್ನು ಕೈಬಿಟ್ಟಿದ್ದೇವೆ. ಇಂಥ ಒಂದು ಪರಿಸ್ಥಿತಿ ನಮ್ಮ ರಾಜ್ಯದಲ್ಲಿರುವಂಥ ಈ ಸಂದರ್ಭದಲ್ಲಿ ಇವತ್ತು ಈ ಪ್ರಾಧಿಕಾರವನ್ನು ರಚನೆ ಮಾಡುವುದಕ್ಕೆ ಹೇಗೆ ಸಾಧ್ಯವಾಯಿತು? ನಾನು ಸುದೀರ್ಘವಾಗಿ ಗಂಟೆಗಟ್ಟಲೆ ಮಾತನಾಡಿ ಅಥವಾ ಇಡೀ ದಿನ ಮಾತನಾಡಿದರೆ ಮಂಡ್ಯ ಜಿಲ್ಲೆ ಅಥವಾ ಕಾವೇರಿ ಜಲಾನಯನ ಪ್ರದೇಶದ ರೈತರಿಗೆ ತೃಪ್ತಿಯಾಗುತ್ತೇನೊ ಎನ್ನುವಂಥ ಭಾವನೆ ಇಟ್ಟುಕೊಂಡಂಥ ವ್ಯಕ್ತಿಯಲ್ಲ. ಅನೇಕ ಹೋರಾಟಗಳನ್ನು ನಾವು ಮಾಡಿಕೊಂಡು ಬರುತ್ತಿದ್ದೇವೆ. ಈ ನದಿ ನೀರಿನ ಪ್ರಶ್ನೆ ಬಂದಾಗ ಭೂಮಿಯ ಪ್ರಶ್ನೆ ಬಂದಾಗ, ಭಾಷೆಯ ಪ್ರಶ್ನೆ ಬಂದಾಗ ಈ ಸದನದಲ್ಲಿ ಎಂದೂ ಸಹಾ ನಾವು ಬೇರೆ ನೀವು ಬೇರೆ, ಆಡಳಿತ ಪಕ್ಷ ಬೇರೆ, ಪ್ರತಿಪಕ್ಷ ಬೇರೆ ಎಂದು ನಾವು ಯೋಚನೆ ಮಾಡಿಲ್ಲ. ಆದರೆ ನನಗೆ ದುಃಖ ತರುವಂಥ ಸಂಗತಿ ಎಂದರೆ ಈ ರೀತಿ ಪ್ರಾಧಿಕಾರ ರಚನೆ ಮಾಡುವಂಥ ಪ್ರಸ್ತಾಪ ಸುಪ್ರೀಂ ಕೋರ್ಟನ ಮುಂದೆ ಬಂದಾಗ ಕೇಂದ್ರ ಸರ್ಕಾರವೇ ಆ ಪ್ರಸ್ತಾವವನ್ನು ಮುಂದೆ ಇಟ್ಟಾಗ ನಮ್ಮ ಅಡ್ವೊಕೇಟ್ಸ್ ಏಕೆ ಕೈ ಕಟ್ಟಿಕೊಂಡು ಕುಳಿತಿದ್ದರು? ಕಾವೇರಿ ಮಧ್ಯಂತರ ಆದೇಶವನ್ನು ಜಾರಿಗೆ ತರಬಾರದು ಎಂದು ಹೇಳಿ ನಾವು ಈಗಾಗಲೇ ಟ್ರಿಬ್ಯೂನಲ್ ಮುಂದೆ ಅಪೀಲು ಹಾಕಿರುವಂಥ ಕಾಲದಲ್ಲಿ, ಮೇಲ್ಮನವಿ ಸಲ್ಲಿಸಿರುವಂಥ ಕಾಲದಲ್ಲಿ ಕರ್ನಾಟಕ ಭವನದಲ್ಲಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಒಂದು ಲೀಗಲ್ ಸೆಲ್ಲನ್ನೇ ನಾವು ಇಟ್ಟುಕೊಂಡಿರುವಂಥ ಕಾಲದಲ್ಲಿ ಅವರೇನು ಮಾಡುತ್ತಿದ್ದರು? ಅವರು ನಿಮ್ಮ ಗಮನಕ್ಕೆ ತರಲಿಲ್ಲವೇ? ಕೇಂದ್ರದಲ್ಲಿ ನಮ್ಮವರೇ ಸಚಿವರು

ಇರುವಂಥವರು ಈ ರೀತಿ ಚರ್ಚೆಯಾಗುತ್ತಿದೆ, ಈ ರೀತಿ ಪ್ರಸ್ತಾಪವಾಗುತ್ತಿದೆ, ಈಗಲೇ ಎಚ್ಚರ ವಹಿಸಿ ಎಂದು ನಿಮ್ಮ ಕಿವಿಯಲ್ಲಿ ಹೇಳಲಿಲ್ಲವೇ? ಅಥವಾ ಕೇಂದ್ರದಲ್ಲಿ ನಮ್ಮವರು ಎಂ.ಪಿ.ಗಳಾಗಿ ಅಲ್ಲಿ ಕ್ಯಾಬಿನೆಟ್ ಸಚಿವರಾಗಿರುವಂಥವರು ನಮ್ಮ ರಾಜ್ಯಕ್ಕೆ ಅನುಕೂಲ ಮಾಡುವುದು ಬೇಡ. ರಾಜ್ಯದ ದೃಷ್ಟಿಯಿಂದ ನ್ಯಾಯಬದ್ಧವಾದಂಥ ಅವರ ಕರ್ತವ್ಯವನ್ನೇ ನಿರ್ವಹಿಸಿದಂಥವರು ನಮ್ಮವರು ಈ ಕ್ಯಾಬಿನೆಟ್ ಸಚಿವರಾಗಿದ್ದು ಈ ಜನರಿಗೆ ದ್ರೋಹ ಮಾಡುತ್ತಿದ್ದಾರೆ, ಇದೊಂದು ಅಕ್ಷಮ್ಯ ಅಪರಾಧವಲ್ಲವೇ? ಈ ಪ್ರಶ್ನೆಗಳಿಗೆ ಉತ್ತರವನ್ನು ನಾವು ಹುಡುಕಬೇಕಾಗಿದೆ. ನಾನು ಹೇಳುತ್ತೇನೆ, ಈ ಸರ್ಕಾರಿ ಕಾವೇರಿ ಮೇಲೆ ಆಣೆ ಇಟ್ಟು ಅಧಿಕಾರಕ್ಕೆ ಬಂದು ರಾಜ್ಯದಲ್ಲೂ ನಿಮ್ಮದೇ ಸರ್ಕಾರ, ಕೇಂದ್ರದಲ್ಲೂ ನಿಮ್ಮದೇ ಸರ್ಕಾರ, ಹೀಗಿದ್ದೂ ಸಹ ಇವತ್ತು ಈ ರಾಜ್ಯದ ಜನತೆಗೆ ದ್ರೋಹ ಮಾಡುವಂಥ ಒಂದು ಅಕ್ಷಮ್ಯ ಅಪರಾಧದ ಕೆಲಸವನ್ನು ಇವತ್ತು ನೀವು ಮಾಡಿದ್ದೀರಿ. ಪ್ರಧಾನಿಯವರು ನಿಮ್ಮನ್ನೆಲ್ಲಾ ಕರೆಸಿಕೊಂಡು ಪ್ರತಿಪಕ್ಷದ ನಾಯಕರನ್ನೆಲ್ಲಾ ಕರೆಸಿಕೊಂಡು ಮಾತನಾಡಿದರಲ್ಲ ನಾರಿಮನ್ ಹತ್ತಿರ ಮಾತನಾಡಿದ್ದೀರಲ್ಲ. ಏನು ಮಾತನಾಡಿದವು? ನಾನು ಹೇಳುತ್ತೇನೆ, ಯಾವ ಕಾರಣಕ್ಕೂ ಪ್ರಧಾನಿಯವರಿಂದ ಇದಕ್ಕೆ ಪರಿಹಾರ ಸಿಗುವುದಿಲ್ಲ. ನಾನು ಇದನ್ನು ಇಲ್ಲಿ ಹೇಳಿಲ್ಲ. ದೆಹಲಿಯಲ್ಲಿ ಪತ್ರಕರ್ತರ ಮುಂದೆ ನಾನು ಹೇಳಿ ಬಂದಿದ್ದೇನೆ. ಏಕೆ? ತಮಿಳುನಾಡಿನ ಬೆಂಬಲ ಇಲ್ಲದೇ ಒಂದು ಕ್ಷಣ ಅವತ್ತಿನ ದಿವಸ ದೇವೇಗೌಡರು ಅಧಿಕಾರದಲ್ಲಿ ಮುಂದುವರಿಯುವುದಕ್ಕೆ ಆಗುತ್ತಿರಲಿಲ್ಲ. ಅದಕ್ಕಾಗಿ ಈ ಪ್ರಾಧಿಕಾರ ರಚನೆ ಮಾಡುವಂಥ, ಅವರನ್ನು ತೃಪ್ತಿಪಡಿಸುವುದಕ್ಕೋಸ್ಕರ ಪ್ರಸ್ತಾಪ ತಂದರು. ಇವತ್ತಿನ ಪ್ರಧಾನಿಯವರೂ ಸಹ ಅವರ ಬೆಂಬಲ ಇಲ್ಲದೆ ಒಂದು ಕ್ಷಣ ಮುಂದುವರೆಯುವುದಕ್ಕೆ ಆಗುವುದಿಲ್ಲ. ಇವತ್ತು ರಾಜಕೀಯ ಪರಿಸ್ಥಿತಿ ಎಲ್ಲಿಗೆ ಬಂದಿದೆ ಎಂದರೆ, ಕೇಂದ್ರದಲ್ಲಿ ಅಧಿಕಾರದಲ್ಲಿ ಇರುವಂಥ ಪ್ರಧಾನಿ ನಿಷ್ಠೂರವಾಗಿ ದೇಶದ ಜನರ ಹಿತದೃಷ್ಟಿಯಿಂದ ಒಂದು ನಿರ್ಧಾರವನ್ನು ಕೈಗೊಳ್ಳುವಂಥ ಒಂದು ರಾಜಕೀಯ ಪರಿಸ್ಥಿತಿ ಇಲ್ಲ. ತಮಿಳುನಾಡಿನ ಸರ್ಕಾರವನ್ನು, ಆಂಧ್ರದ ಸರ್ಕಾರವನ್ನು ತೃಪ್ತಿಪಡಿಸಿಕೊಂಡು ಹೇಗೋ ಅಧಿಕಾರದಲ್ಲಿ ಮುಂದುವರಿಯುವಂಥ ಈ ಸಂದರ್ಭದಲ್ಲಿ ಇವತ್ತು ಪ್ರಧಾನಿಯವರು ಏನು ಹೇಳಿದರು, ನಮ್ಮೆಲ್ಲ ವಾಸ್ತವಿಕ ಸ್ಥಿತಿ ಏನು ಎಂದು ಹೇಳಿದೆವು, ಆ ಸಂಗತಿಯನ್ನು ಸಮಾಧಾನವಾಗಿ ಗಂಟೆಗಟ್ಟಲೆ ಕುಳಿತುಕೊಂಡು ಕೇಳಿದರು. ಇಲ್ಲಾ ಎಂದು ನಾನು ಹೇಳುವುದಿಲ್ಲ. ಕೇಳಿದ ಮೇಲೆ ಏನು ಹೇಳಿದರು, ನಾನು ತಮಿಳುನಾಡಿನ ಮುಖ್ಯಮಂತ್ರಿ ಜೊತೆ ಮಾತನಾಡುತ್ತೇನೆ, ತಮಿಳುನಾಡಿನ ಮುಖ್ಯಮಂತ್ರಿಯವರ ಜೊತೆ ಈವರೆಗೆ ಪ್ರಧಾನಿಯವರು ಮಾತನಾಡಿಲ್ಲ ನನಗೆ ತಿಳಿದ ಪ್ರಕಾರ. ಇದುವರೆಗೂ ನೀವು ಮಾತನಾಡಿದಿರಾ ಇಲ್ಲವೇ ಎಂದು ಕೇಳುವಂಥ ಪ್ರಯತ್ನ ಸಹಾ ನಾಗೇಗೌಡರಿಂದಾಗಲೀ, ಈ ರಾಜ್ಯದ ಮುಖ್ಯಮಂತ್ರಿಗಳಿಂದಾಗಲೀ ಇದುವರೆಗೂ ನೀರಾವರಿ ಸಚಿವರು, ಮುಖ್ಯಮಂತ್ರಿಗಳು ಮಾಡಿಲ್ಲ. ಎರಡು ರಾಜ್ಯದ ಮುಖ್ಯಮಂತ್ರಿಗಳನ್ನು ಕರೆದು ಮಾತನಾಡುತ್ತೇನೆ ಎಂದು ಹೇಳಿ ತಿಂಗಳು ಉರುಳಿ ಹೋಯಿತು. ಇದುವರೆಗೂ ಆಗಲಿಲ್ಲ. ಸುಪ್ರೀಂ ಕೋರ್ಟ್, ನಿಮಗೆ ಸಮಯ ಕೊಟ್ಟಾಯಿತು. ಪ್ರಾಧಿಕಾರ ರಚನೆ ಮಾಡಿದ್ದೀರೋ ಇಲ್ಲವೋ ಎಂದು ಪ್ರಶ್ನೆ ಕೇಳಿದಾಗ ಬಹುಶಃ ಕೇಂದ್ರಸರ್ಕಾರದ ಪರವಾಗಿ ನಮ್ಮ ಸಾಲಿಸಿಟರ್ ಜನರಲ್ ಹೋಗಿ ಈ ಒಂದು ಟ್ರಿಬ್ಯೂನಲ್‌ಮುಂದೆ ಇಂಟಿರೀಯಮ್ ಆರ್ಡರ್‌ನ್ನು ಕರ್ನಾಟಕ ರಾಜ್ಯದವರು ಕ್ವಶ್ಚನ್ ಮಾಡಿದ್ದಾರೆ. ಆ ತೀರ್ಪು ಕೊಡುವವರೆಗೂ ಇದನ್ನು

ತಾತ್ಕಾಲಿಕವಾಗಿ ತಡೆಹಿಡಿಯಿರಿ ಎಂದು ಹೇಳುವಂಥ ಧೈರ್ಯವನ್ನು ಮಾಡುತ್ತಾರೆ ಎನ್ನುವ ವಿಶ್ವಾಸ ಇವತ್ತು ನನಗೆ ಇಲ್ಲ. ಇವತ್ತೇನಾಗಿದೆ, ಇವತ್ತು ಕೆ.ಆರ್.ಎಸ್.ಎಲ್ಲಾ ತುಂಬಿ ತುಳುಕುತ್ತಾ ಇದೆ, ತೃಪ್ತಿಯಾಗಿದ್ದೇವೆ. ಆ ನೀರು ಕಡಿಮೆಯಾದಮೇಲೆ ತಮಿಳುನಾಡಿಗೆ ನೀರು ಬಿಡಬೇಕು, ಟ್ರಿಬ್ಯೂನಲ್ ಆದೇಶದ ಪ್ರಕಾರ ಎಂದು ಹೇಳಿದಾಗ ಕಣ್ಣುಬಾಯಿ ಬಿಟ್ಟುಕೊಂಡು ಆಗ ಕೂಗಾಡಿ ಪತ್ರಿಕಾ ಹೇಳಿಕೆಯನ್ನು ಕೊಟ್ಟು ನೀರನ್ನೂ ಬಿಟ್ಟು ನಮ್ಮ ರೈತರು ಇವತ್ತು ಬೀದಿಪಾಲಾಗುವಂಥ, ಮಣ್ಣು ಪಾಲಾಗುವಂಥ ದುಸ್ಥಿತಿಗೆ ನಿಮ್ಮ ಸರ್ಕಾರ ತಂದು ಇಟ್ಟಿದೆ. ಅದಕ್ಕೋಸ್ಕರ ಇದು ಇಡೀ ರಾಜ್ಯದ ಎಲ್ಲ ಜನರಿಗೆ ಸಂಬಂಧಪಟ್ಟಂಥ ವಿಚಾರವಾಗಿರುವುದರಿಂದ ಇದಕ್ಕಿಂತ ಪ್ರಮುಖವಾದ ವಿಷಯ ನಿಲುವಳಿ ಸೂಚನೆ ಮೂಲಕ ಪ್ರಸ್ತಾಪ ಮಾಡುವುದಕ್ಕೆ ಬೇರೆ ಯಾವುದೂ ಇಲ್ಲ ಎಂದು ನನಗೆ ಅನ್ನಿಸುವುದಿಲ್ಲ. ನಾವು ಇದರ ಬಗ್ಗೆ ವಿಶೇಷವಾದ ಅಧಿವೇಶನ ಕರೆಯಬೇಕೆಂದು ಹೇಳಿ ಒತ್ತಾಯ ಮಾಡಿದಂಥವರು ನಾವು. ಅಧಿವೇಶನ ಪ್ರಾರಂಭವಾಗಿ ಈಗಾಗಲೇ ಆರು ದಿವಸ ಕಳೆದುಹೋಗಿದೆ. ಪ್ರಾರಂಭದ ದಿವಸದಲ್ಲಿಯೇ ಇದನ್ನು ಪ್ರಸ್ತಾಪ ಮಾಡಬೇಕಾಗಿತ್ತು. ಬೇರೆ ಬೇರೆ ಅನಿವಾರ್ಯ ಕಾರಣಗಳಿಂದ ಇವತ್ತು ನಿಲುವಳಿ ಸೂಚನೆ ಮೂಲಕ ಇಂಥ ಪ್ರಮುಖವಾದ ಈ ವಿಷಯವನ್ನು ಪ್ರಸ್ತಾಪ ಮಾಡಬೇಕು. ಮತ್ತು ಅದಕ್ಕೆ ತಾವು ಒಪ್ಪಿಗೆ ಕೊಟ್ಟು ಎಲ್ಲಾ ವಿವರವಾದ ಚರ್ಚೆಗೆ ಒಂದು ಅವಕಾಶವನ್ನು ತಾವು ಮಾಡಿಕೊಡಬೇಕೆನ್ನುವ ದೃಷ್ಟಿಯಿಂದ ನಾವು ಇದನ್ನು ತಮ್ಮ ಗಮನಕ್ಕೆ ತರುವಂಥ ಪ್ರಯತ್ನ ಮಾಡಿದ್ದೇವೆ. ಬಹುಶಃ ನಿಮಗೆ ಸಮಾಧಾನವಾಗಿದ್ದರೆ ನಿಲುವಳಿ ಸೂಚನೆ ಮೂಲಕ ಸುದೀರ್ಘವಾಗಿ ಚರ್ಚೆ ಮಾಡುವುದಕ್ಕೆ ತಾವು ಅನುಮತಿಯನ್ನು ಕೊಟ್ಟರೆ ಉಳಿದ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅನುಕೂಲವಾಗುತ್ತದೆ. ಅದಕ್ಕಾಗಿ ಅವಕಾಶ ಮಾಡಿಕೊಡಬೇಕೆಂದು ಸನ್ಮಾನ್ಯ ಉಪಾಧ್ಯಕ್ಷರಲ್ಲಿ ವಿನಂತಿ ಮಾಡಿ ನನ್ನ ಕೆಲವು ಮಾತುಗಳನ್ನು ಹೇಳುತ್ತೇನೆ. ತಾವು ಅವಕಾಶ ಮಾಡಿ ಕೊಟ್ಟಮೇಲೆ ವಿವರವಾಗಿ ಅದರ ಬಗ್ಗೆ ತಮ್ಮ ಗಮನಕ್ಕೆ ತರುವ ಪ್ರಯತ್ನವನ್ನು ಮಾಡುತ್ತೇನೆ, ಧನ್ಯವಾದಗಳು.

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಉಪಾಧ್ಯಕ್ಷರೇ, ಈಗ ಕಾವೇರಿ ನೀರಿನ ವಿವಾದದ ಬಗ್ಗೆ ಮತ್ತು ವಿಶೇಷವಾಗಿ ಕಾವೇರಿ ರಿವರ್ ಅಥಾರಿಟಿ ಮಾಡಬೇಕು ಎಂದು ನೋಟಿಫಿಕೇಷನ್‌ನ್ನು ಏನು ಇಷ್ಯೂ ಮಾಡಿದ್ದರು, ಅದರ ಬಗ್ಗೆ ಚರ್ಚೆಗೆ ತೆಗೆದುಕೊಳ್ಳಬೇಕು ಎಂದು ಹೇಳಿ ನಾನೂ ಕೂಡ ಬರವಣಿಗೆಯಲ್ಲಿ ತಮಗೆ ಕೊಟ್ಟಿದ್ದೇನೆ. ಆದರೆ, ಕಾರಣಾಂತರದಿಂದ ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡ್‌ನವರು ಅತ್ಯಂತ ಹೆಚ್ಚಿನ ಟ್ಯಾರಿಫ್‌ನ್ನು ಏರಿಸಿ ಜನರಿಗೆ ತೊಂದರೆ ಮಾಡತಕ್ಕಂಥ ಪ್ರಯತ್ನ ಏನು ಮಾಡಿದ್ದರು, ಆ ಪ್ರಯತ್ನ ಮಾಡಿದ್ದಕ್ಕಾಗಿ ಪ್ರತಿಭಟಿಸಬೇಕು ಎನ್ನುವ ದೃಷ್ಟಿಯಿಂದ ಆ ಒಂದು ವಿಷಯವನ್ನು ಮೊಟ್ಟಮೊದಲನೆಯದಾಗಿ ನಾವು ತೆಗೆದುಕೊಂಡೆವು. ಅಧ್ಯಕ್ಷರೂ ಕೂಡ, ಸೋಮವಾರದ ದಿವಸ ಕಾವೇರಿ ಬಗ್ಗೆ ತೆಗೆದುಕೊಳ್ಳೋಣ ಎಂದು ಹೇಳಿದರು. ಮಂಗಳವಾರದ ದಿವಸ ವೀರಪ್ಪನ್ ಸಬ್ಜೆಕ್ಟ್ ತೆಗೆದುಕೊಳ್ಳೋಣ, ಅದಕ್ಕೆ ಒಂದೊಂದಾಗಿ ನಾವು ಚರ್ಚೆ ಮಾಡಿದರೆ ಸರಿಯಾಗುತ್ತದೆ ಎಂದು ಅವರ ಅನಿಸಿಕೆಯ ಪ್ರಕಾರ ಈ ಸಬ್ಜೆಕ್ಟ್‌ನ್ನು, ಒಂದುವಾರ ಕಳೆದ ಮೇಲೆ ಇವತ್ತು ಬಂದಿದೆ. ಈಗಾಗಲೇ ಕೆಲವು ವಿಷಯಗಳನ್ನು ಮಾನ್ಯ ಬಿಜೆಪಿ ನಾಯಕರಾದ ಶ್ರೀಮಾನ್ ಯಡಿಯೂರಪ್ಪನವರು ಪ್ರಸ್ತಾಪ ಮಾಡಿದ್ದಾರೆ. ನಾನು ಈ ನೋಟಿಫಿಕೇಶನ್ ಇಷ್ಯೂ

ಮಾಡಿದ ತಕ್ಷಣವೆ ಒಂದು ಪ್ರತಿಕ್ರಿಯೆ ವ್ಯಕ್ತಪಡಿಸಿದ್ದೆ. ಎಷ್ಟರಮಟ್ಟಿಗೆ ಈ ನೋಟಿಫಿಕೇಷನ್ ಸರಿ ಇದೆ, ಈ ಯೋಜನೆ ಏನು ಪ್ರಾರಂಭವಾಗಿದೆ ಇದು ಯಾವುದಕ್ಕೋಸ್ಕರ ಆಗಿದೆ ಮತ್ತು ಇದನ್ನು ಯಾರು ಡ್ರಾಫ್ಟ್ ಮಾಡಿ ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದಾರೆ ಎನ್ನತಕ್ಕಂಥದ್ದರ ಬಗ್ಗೆ ಸ್ಪಷ್ಟವಾದ ಹೇಳಿಕೆಯನ್ನೂ ಕೂಡ ಕೊಟ್ಟಿದ್ದೇನೆ. ಆದರೆ ನಮ್ಮ ರಾಜ್ಯ ಸರ್ಕಾರದವರು ತನ್ನದೇ ಆದ ಒಂದು ನಿಲುವು ಮತ್ತು ಸಮರ್ಥನೆ ಮಾಡತಕ್ಕಂಥ ಒಂದು ಪ್ರಯತ್ನವನ್ನು ಮಾಡಿದರು. ಕೊನೆಗೆ ರಾಜ್ಯದ ಹಿತದೃಷ್ಟಿಯಿಂದ ಕೆಲವು ಸಲ ನಮ್ಮ ಅನಿಸಿಕೆ ಏನಿದೆ ಅದನ್ನು ಸ್ಪಷ್ಟವಾಗಿ ನಾವು ಹೇಳಿದರೂ ಕೂಡ ನಾವು ಒಗ್ಗಟ್ಟನ್ನು ತೋರಿಸಬೇಕೆಂದು ಹೇಳಿ ಎಲ್ಲಾ ವಿರೋಧ ಪಕ್ಷದ ನಾಯಕರನ್ನೂ ಕೂಡ ಸಹಕರಿಸಬೇಕೆಂದು ತಿಳಿಸಿ ದಿನಾಂಕ 9.7.97 ರಲ್ಲಿ ಪ್ರಧಾನಮಂತ್ರಿಗಳನ್ನು ನಾವು ಭೇಟಿಯಾಗಲಿಕ್ಕೆ ಏನು ಹೋಗಿದ್ದೆವು ಅದರಲ್ಲಿ ಒಮ್ಮತ ಇರಬೇಕು ಎನ್ನುವ ದೃಷ್ಟಿಯಿಂದ ಮಾತ್ರ ನಾವೆಲ್ಲರೂ ಹೋಗಿದ್ದೇವೆ. ಇವರು ಮಾಡಿದಂಥ ಎಲ್ಲಾ ಇಷ್ಯೂಗಳನ್ನು ನಾವು ಒಪ್ಪಿಕೊಂಡಿಲ್ಲ. ಅದರ ಬಗ್ಗೆ ಪ್ರತಿಭಟಿಸಿದ್ದೇವೆ. ಅದರಲ್ಲಿರುವ ಲೋಪದೋಷಗಳನ್ನು ನಾವು ಎತ್ತಿ ತೋರಿಸಿದ್ದೇವೆ. ಆದರೂ ಕೂಡ ಅದನ್ನು ಸರಿಪಡಿಸಿಕೊಳ್ಳತಕ್ಕಂಥದ್ದು ಅಥವಾ ಅದರ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ ಕೆಲಸ ಮಾಡತಕ್ಕಂಥದ್ದನ್ನು ಈ ಸರ್ಕಾರ ಮಾಡಲಿಲ್ಲ. ಅದಕ್ಕೆ ಏನು ಕಾರಣ ಗೊತ್ತಿಲ್ಲ. ಮತ್ತು ಇವೊತ್ತು ಈ ಚರ್ಚೆಗೆ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಇದ್ದರೆ ಚೆನ್ನಾಗಿತ್ತು. ಏತಕ್ಕೆಂದರೆ ಇದು ಸಾರ್ವಜನಿಕರ ಹಿತದೃಷ್ಟಿಯಿಂದ ಅಷ್ಟೆ ಅಲ್ಲ ಇಡೀ ರಾಜ್ಯದ ಹಿತದೃಷ್ಟಿಯಿಂದ ಮತ್ತು ಒಂದು ಕಾನೂನಿನ ಚೌಕಟ್ಟಿನಲ್ಲಿ ಇವೊತ್ತು ಈ ಒಂದು ಪ್ರಾಧಿಕಾರ ಅಥವಾ ರಿವರ್ ಅಥಾರಿಟಿಯನ್ನು ಕಾನ್‌ಸ್ಟಿಟ್ಯೂಟ್‌ಮಾಡುವಾಗ ಎಷ್ಟರಮಟ್ಟಿಗೆ ಅದು ಸರಿ, ಎಷ್ಟರಮಟ್ಟಿಗೆ ನಮಗೆ ಅನಾನುಕೂಲವಾಗುತ್ತದೆ ಎನ್ನತಕ್ಕಂಥದ್ದರ ಬಗ್ಗೆ ರಾಜ್ಯದ ಮುಖ್ಯಮಂತ್ರಿಗಳೂ ಇದ್ದು ಇದನ್ನು ಕೇಳಿದ್ದರೆ ಬಹುಶಃ ಇನ್ನೂ ಒಳ್ಳೆಯದಾಗುತ್ತಿತ್ತು. ಆದರೆ ಏನು ಕಾರಣವೋ ಗೊತ್ತಿಲ್ಲ, ಅವರು ಬಂದಿರುವುದಿಲ್ಲ. ಸೋಮವಾರ ಅಧಿವೇಶನ ಇದೆ. ನಾವು ಕೆಲವು ವಿಚಾರಗಳನ್ನು ಏನು ಹೇಳುತ್ತೇವೆ ಅದನ್ನು ಅವರೂ ಕೂಡ ತಿಳಿದುಕೊಂಡು ಅದಕ್ಕೆ ಉತ್ತರ ಕೊಟ್ಟರೆ ಅದು ಕೇವಲ ಈ ಸದನಕ್ಕೆ ಅಷ್ಟೇ ಅಲ್ಲ ಇಡೀ ರಾಜ್ಯದ ಜನತೆಗೆ ಮತ್ತು ರೈತ ಸಮುದಾಯಕ್ಕೆ ಕೂಡ ಸಮಾಧಾನ ನೀಡಿದಂತಾಗುತ್ತದೆ. ನಾನು ಹಿಂದಿನ ಇತಿಹಾಸವನ್ನು ಹೇಳುವುದಿಲ್ಲ. ಇದು ಯಾವಾಗಿನಿಂದ ನಡೆದುಕೊಂಡು ಬಂದಿತ್ತು ಮತ್ತು ಏನೇನಾಯಿತು ಅದರ ಬಗ್ಗೆ ಸಂಪೂರ್ಣವಾಗಿ ಈ ಸದನದಲ್ಲಿ ಸಾಕಷ್ಟು ಬಾರಿ ಚರ್ಚೆಯಾಗಿದೆ. ಕಳೆದ ಮೂರು ವರ್ಷಗಳಲ್ಲಿ ಪ್ರತಿ ಸಲ ಯಾವಾಗ ಈ ಸದನ ಸೇರುತ್ತದೆ ಆಗೆಲ್ಲಾ ನಾವು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇವೆ. ಇವೊತ್ತು ವಿಶೇಷವಾದಂಥ ರೀತಿಯಲ್ಲಿ ಪ್ರಸ್ತಾಪ ಮಾಡತಕ್ಕಂಥದ್ದು ಏನಿದೆ ಅಂದರೆ ಈ ನೋಟಿಫಿಕೇಶನ್ ಬಗ್ಗೆ ಏನು ಚರ್ಚೆ ತಂದಿದ್ದೇವೆ ಇದು ದಿನಾಂಕ : 30.5.1997 ರಲ್ಲಿ ಡ್ರಾಫ್ಟ್ ನೋಟಿಫಿಕೇಷನ್ ಹೇಗಿದೆ ಎಂದು ನಾವು ಸಂಬಂಧಪಟ್ಟಂಥ ಇಲಾಖೆಯವರನ್ನು ಕೇಳಿದ್ದೇವೆ ಮತ್ತು ಪತ್ರಿಕೆಯಲ್ಲಿ ಒಂದು ವಿಚಾರ ಪ್ರಸ್ತಾಪವಾಗಿದೆ, ಅದಕ್ಕೆ ಯಾವ ರೀತಿಯಿಂದ ಮತ್ತು ಏನೇನು ಕಂಡೀಷನ್‌ಗಳನ್ನು ಈ ನೋಟಿಫಿಕೇಷನ್‌ನಲ್ಲಿ ಹಾಕಿದ್ದಾರೆ ಎನ್ನತಕ್ಕಂಥದ್ದನ್ನು ಕೇಳಿದಾಗ ನೀರಾವರಿ ಇಲಾಖೆಯವರು ಆ ವಿವರವನ್ನು ಕೊಡಲು ತಯಾರಿಲ್ಲ. ಅವರು ಎಲ್ಲಿಯವರೆಗೆ ಹೋದರು ಎಂದರೆ ಕೇಂದ್ರ ಸರ್ಕಾರದವರು ಇಷ್ಯೂ ಮಾಡಿದಂಥ ನೋಟಿಫಿಕೇಷನ್ ನಮಗೆ ಇನ್ನೂ

ತಲುಪಿಲ್ಲ ಎನ್ನತಕ್ಕಂಥ ಮಾತನ್ನು ಕೂಡ ಅವರು ಹೇಳಿದರು. ಅಂದರೆ ದಿನಾಂಕ : 30.5.1997ಕ್ಕೆ ಆರ್.ಕೆ. ಪರಾಶರ್, ಪ್ರಾಜೆಕ್ಟ್ ಕಮಿಷನರ್‌ರವರು ಈ ನೋಟಿಫಿಕೇಷನ್‌ಗೆ ಸೈನ್ ಮಾಡಿ ಇವರಿಗೆ ಕಳುಹಿಸಿಕೊಟ್ಟರು. ಸೈನ್ ಮಾಡಿ ಕಳುಹಿಸಿದ ಮೇಲೆ ಇಲ್ಲಿ ನಾವು ನೋಟಿಫಿಕೇಷನ್‌ನಲ್ಲಿ ಏನಿದೆ ಎನ್ನತಕ್ಕಂಥದ್ದನ್ನು ನೋಡುವುದಕ್ಕಾಗಿ ಅದರ ಒಂದು ಕಾಪಿಯನ್ನು ಕೊಡಿ ಎಂದು ಕೇಳಿದರೆ ಒಬ್ಬರೂ ಕೂಡ ಅದರಲ್ಲಿ ಏನು ಬಂದಿದೆ ಎನ್ನುವುದನ್ನು ಹೇಳುವುದಕ್ಕೆ ತಯಾರಿಲ್ಲ. ಮಾನ್ಯ ಮುಖ್ಯಮಂತ್ರಿಗಳು 30ನೇ ತಾರೀಖು ಬಂದ ಮೇಲೆ ಬಹುಶಃ ಅವರ ಕೈ ಸೇರಿದ್ದರೆ ಅಥವಾ ಅದು ಇಷ್ಯೂ ಆದ ತಕ್ಷಣ ಫ್ಯಾಕ್ಸ್ ಮಾಡಿದ್ದರೆ ಅದೇದಿನ ಅವರಿಗೆ ತಲುಪುತ್ತದೆ. ಏಕೆಂದರೆ ಕಾವೇರಿ ನದಿನೀರಿನ ವಿವಾದದ ಸಮಸ್ಯೆಯನ್ನು ಬಗೆಹರಿಸುವುದಕ್ಕೋಸ್ಕರ ಒಂದು ಪ್ರತ್ಯೇಕ ಸೆಲ್ ಇದೆ. ಅನೇಕ ವಕೀಲರುಗಳಿದ್ದಾರೆ, ಚೀಫ್ ಇಂಜಿನಿಯರ್‌ಗಳಿದ್ದಾರೆ. ಇಂತಹ ಒಂದು ನೋಟೀಫಿಕೇಷನ್ ಇಷ್ಯೂ ಮಾಡಿದ್ದರೆ ಅವರು ಇದು ನನ್ನ ಗಮನಕ್ಕೆ ಬಂದದ್ದು 7 ಅಥವಾ 8ನೇ ತಾರೀಖು ಎನ್ನತಕ್ಕಂಥ ಮಾತನ್ನು ಹೇಳುತ್ತಾರೆ. ಅಂದರೆ ಅವರು ವಿದೇಶಕ್ಕೆ ಹೋಗುವುದಕ್ಕಿಂತ ಒಂದು ದಿವಸ ಮುಂಚೆ ನನ್ನ ಕೈಗೆ ಸಿಕ್ಕಿದೆ, ಅದಕ್ಕಾಗಿ ಅದರ ಬಗ್ಗೆ ನಾನು ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕಾಗಲಿ ಅಥವಾ ಆ ಬಗ್ಗೆ ಹೇಳುವುದಕ್ಕಾಗಲಿ, ವಿರೋಧ ಪಕ್ಷದವರನ್ನು ಕರೆಯಿಸಿ ಮಾತನಾಡುವುದಕ್ಕಾಗಲಿ ಆಗಲಿಲ್ಲ ಎನ್ನುವಂಥ ಮಾತನ್ನು ಹೇಳುತ್ತಾರೆ. ಅಂದರೆ ಇಂಥ ಒಂದು ಜರೂರಾದಂಥ ಮಹತ್ವದ ನೋಟಿಫಿಕೇಷನ್ ಅಲ್ಲಿಂದ ನಮಗೆ ಬರಲಿಕ್ಕೆ 10 ದಿವಸವಾಗುತ್ತದೆ ಎಂದರೆ ಎಷ್ಟರಮಟ್ಟಿಗೆ ಈ ಒಂದು ಕೇಸಿನ ಬಗ್ಗೆ ಅಥವಾ ಕೆಲಸದ ಬಗ್ಗೆ ಅವರು ಕಾಳಜಿ ವಹಿಸುತ್ತಿದ್ದಾರೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಇದು ಒಂದು ಕಡೆಯಾದರೆ ನೋಟಿಫೀಕೇಷನ್ ಏನಿದೆ ಈ ನೋಟಿಫೀಕೇಷನ್ ಮತ್ತು ಬ್ರಿಟಿಷರ ಕಾಲದಲ್ಲಿ ಸುಮಾರು 1892ರಲ್ಲಿ ಒಂದು ಅಗ್ರಿಮೆಂಟ್ ಏನು ಆಗಿತ್ತು. ಆ ಅಗ್ರಿಮೆಂಟ್, ತದನಂತರ 1924ರಲ್ಲಿ ಆದ ಅಗ್ರಿಮೆಂಟ್‌ಗಳೊಡನೆ ಈ ನೋಟಿಫೀಕೇಷನ್‌ನ್ನು ಹೋಲಿಸಿದರೆ ಏನೂ ವ್ಯತ್ಯಾಸವಿಲ್ಲ. ಅದರಲ್ಲಿ ಏನೇನು ಷರತ್ತುಗಳು ಬ್ರಿಟಿಷರ ಕಾಲದಲ್ಲಿ ಇದ್ದವು ಅವು ಸ್ವಾತಂತ್ರ್ಯ ಸಿಕ್ಕ ಮೇಲೆ ಇಂಟರ್ ಸ್ಟೇಟ್ ವಾಟರ್ ಡಿಸ್‌ಪ್ಯೂಟ್ ಆಕ್ಟ್ -1956ರ ಕಾನೂನು ಬಂದ ಮೇಲೂ ಸಹ ಅದೇ ಕಂಡೀಷನ್ಸ್‌ಗಳನ್ನು ಅವರು ಹಾಗೆಯೇ ಇಷ್ಯೂ ಮಾಡಿದ್ದಾರೆ. ಇದನ್ನು ತಮ್ಮ ಗಮನಕ್ಕೆ ತರುತ್ತೇನೆ. 1892ರಲ್ಲಿ ಆಗ ಅಂದಿನ ಮೈಸೂರಿನ ದಿವಾನರು ಕನ್ನಂಬಾಡಿ ಟ್ಯಾಂಕ್ ಕಟ್ಟಬೇಕು ಎಂದು ಹೇಳಿ ಒಂದು ಮನವಿಯನ್ನು ಸಲ್ಲಿಸಿದಾಗ ಏನು ಒಂದು ಸಣ್ಣ ಅಗ್ರಿಮೆಂಟ್ ಆಗಿತ್ತು ಎಂದರೆ ಮೊದಲನೆಯದು

1) Severe restrictions were imposed on Mysore on the utilisation of Cauvery and its Tributaries for the purpose of irrigation ;

2) In the second para, if made obligatory for Mysore State to obtain prior consent of Madras Presidency for taking up any irrigation works icluding repairs and restoration of the existing irrigation works in any of the State's tributaries of the river Cauvery, while there was no restrictions imposed on Madras;

3) In the third para it was agreed that the powers and the rights to utilise the rightful share of water by the Princely Mysore State should not be rejected and there was a provision for referring the matter of dispute for adjudication and arbitration. ಅದು ಯಾವಾಗ ಎಂದರೆ 1892ರಲ್ಲಿ. ತದನಂತರ 1924ರಲ್ಲಿ ಅಂದಿನ ದಿವಾನರಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯನವರು ಕೆಆರ್‌ಎಸ್ ಡ್ಯಾಂ ಕಟ್ಟುವಾಗ ಒಂದು ಅಗ್ರಿಮೆಂಟ್ ಮಾಡಿಕೊಂಡರು. ಈ ಕೇಸ್ ಮುಂದೆ ಬೆಳೆಯುತ್ತಾ ಹೋದಂತೆ ಹೆಚ್.ಬಿ. ಗ್ರಿಫನ್ ಅವರು ಏನು ಒಪ್ಪಂದ ಮಾಡಿಕೊಂಡರು ಎಂದರೆ ಇದು ನಾವು ಕಟ್ಟಿಕೊಳ್ಳಬಹುದು ಆದರೆ ಮದ್ರಾಸ್‌ನವರು ಈಗ ಎಷ್ಟು ನೀರನ್ನು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ ಅಷ್ಟು ನೀರನ್ನು ನೀವು ಕೊಡಲೇಬೇಕು ಎನ್ನುವಂಥ ಮಾತನ್ನು ಅವರು 1924ರಲ್ಲಿನ ಅಗ್ರಿಮೆಂಟ್‌ನಲ್ಲಿ ಹೇಳಿದರು. ಮುಂದೆ ಏನು ಹೇಳಿದರು ಎಂದರೆ ನಾಲ್ಕೈದು ಕಂಡೀಷನ್ಸ್ ಹಾಕಿದರು. First condition being,

1) Madras was entitled to all the flows in the Cauvery river up to the limits defined thereon before any impounding water could be made at K.R.S. by Mysore State.

2) It empowers Madras to construct Mettur Reservoir with a capacity to impound 93.5 TMC of Water and to have irrigation potential of 3 lakh 1 acres;

3) It provides assured irrigation in the command area including second crop;

4) It was agreed to construct reservior in Mettur across the tributary;

5) It was agreed to for construction of KRS Reservoir with only 44.83 tmc capacity and construction of reservoir and tributaries of Cauvery with combined capacity of only 45 Tmc;

6) This agreement becomes void in any case not enforceable after 1974;

7) Thus the two State-Karnataka and Tamil Nadu agree to review the 1924 agreement after 50 years ; 50 ವರ್ಷದವರೆಗೆ ಈ ಅಗ್ರೀಮೆಂಟ್ ಇರುತ್ತದೆಂದು ಹೇಳಿ 1924ರಲ್ಲಿ ಆಯಿತು. 50 ವರ್ಷ ಆದಮೇಲೆ 1974ರಿಂದ ನಮ್ಮವರು ಅನೇಕ ರಿಸರ್ವಾಯರ್ಸ್ ಕಟ್ಟಿಕೊಂಡು ಬಂದರು. ಹಾರಂಗಿ ಇರಬಹುದು, ಹೇಮಾವತಿ ಇರಬಹುದು, ಇವೆಲ್ಲ ಕೂಡ. ಆದರೆ ಇಲ್ಲಿಯವರೆಗೆ ಈ ಕಂಡೀಷನ್ಸ್‌ಗೆ ಮತ್ತು ಹೊಸದಾಗಿ 30.05.97ಕ್ಕೆ ಕೇಂದ್ರ ಸರ್ಕಾರದವರು ಇಷ್ಯೂ ಮಾಡಿದಂತಹ ಒಂದು ನೋಟಿಫಿಕೇಷನ್‌ಗೆ ಏನಾದರೂ ವ್ಯತ್ಯಾಸ ಇದೆಯಾ? ಇದನ್ನು ನಾವು ನೋಡಬೇಕಾಗುತ್ತದೆ. ಅಂದರೆ ಎಷ್ಟರಮಟ್ಟಿಗೆ ಕೇಂದ್ರ ಸರ್ಕಾರದಲ್ಲಿ ತಮ್ಮ ಪ್ರಭಾವವನ್ನು ಬೀರಿ

ಇವತ್ತಿನ ದಿವಸ ತಮಗೆ ಬೇಕಾದಂತಹ ರೀತಿಯಲ್ಲಿ ಈ ನೋಟಿಫಿಕೇಷನ್ ಇಶ್ಯೂ ಮಾಡಿದ್ದಾರೆ. ಮತ್ತು ವಿಶೇಷವಾಗಿ ಈ ನೋಟಿಫಿಕೇಷನ್ ಡ್ರಾಫ್ಟ್ ಮಾಡುವುದಕ್ಕಿಂತ ಮುಂಚೆ ನಮ್ಮ ರಾಜ್ಯದವರೇ ಪ್ರಧಾನ ಮಂತ್ರಿಗಳಾಗಿದ್ದರು. ಮತ್ತು ಇದು ಇಲ್ಲಿ ಏನು ನಡೆದಿದೆ ಎನ್ನುವ ಬಗ್ಗೆ ಹೆಚ್ಚಿನ ಮಾಹಿತಿ ಅವರಿಗೆ ಗೊತ್ತಿತ್ತು. ಇದೇನೂ ಒಂದೇ ದಿವಸದಲ್ಲಿ ಆದಂಥಹದ್ದು ಅಲ್ಲ. ಇದ್ದು ಆದದ್ದು ಯಾವಾಗ? 9.4.97ಕ್ಕೆ ಅಟಾರ್ನಿ ಜನರಲ್ ಶ್ರೀ ಅಶೋಕ್ ದೇಸಾಯಿ ಅವರು ಸುಪ್ರೀಂ ಕೋರ್ಟಿನ ಮುಂದೆ ಹೇಳಿಕೆ ಕೊಟ್ಟರು. ನಾವು ಒಂದು ಸ್ಕೀಮನ್ನು ತಯಾರು ಮಾಡುತ್ತಿದ್ದೇವೆ. 25 ಜೂನ್ 1991ರ ಇಂಟೀರಿಮ್ ಆರ್ಡರ್ ಏನು ಇದೆ, 205 ಟಿಎಂಸಿ ನೀರು ಬಿಡಬೇಕಾದಂಥದ್ದು ಅದರ ಬಾಬತ್ತಿನಲ್ಲಿ, ಆ ವಿಷಯದಲ್ಲಿ ನಾವು ಒಂದು ಸ್ಕೀಮನ್ನು ಮಾಡಿ ಕೊಡುತ್ತೇವೆ ಎನ್ನತಕ್ಕ ಒಂದು ಅಂಡರ್‌ಟೇಕಿಂಗ್ ಕೊಟ್ಟ ಮೇಲೆ, ಆ ಹೇಳಿಕೆ ಹೇಳಿದ ಮೇಲೆ ಸುಪ್ರೀಂ ಕೋರ್ಟನವರು ಈ ಸ್ಕೀಮನ್ನು ಜಾರಿಯಲ್ಲಿ ತನ್ನಿ ಎನ್ನತಕ್ಕ ಮಾತನ್ನು ಹೇಳಿದರು. ಈ ಮಾತನ್ನು ಸುಪ್ರೀಂ ಕೋರ್ಟಿನಲ್ಲಿ ಹೇಳಬೇಕಾದರೆ ಯಾವುದೇ ಅಟಾರ್ನಿ ಜನರಲ್.

ಶ್ರೀ ಎನ್. ರಾಜಣ್ಣ : ಸ್ವಾಮಿ, ಮಾನ್ಯ ನಮ್ಮ ನಾಯಕರು ಹೇಳುತ್ತಿರುವುದರ ಬಗ್ಗೆ ಒಂದೇ ಒಂದು ಕ್ಲಾರಿಫಿಕೇಷನ್.

ಉಪಾಧ್ಯಕ್ಷರು : ಮಾನ್ಯ ರಾಜಣ್ಣನವರೇ ನೀವು ಆಮೇಲೆ ಮಾತನಾಡಿ.

SRI N. RAJANNA : My clarification is,... ಅವರು ಹೇಳುತ್ತಿರುವುದು ಬಹಳ ನಿಜವಾದಂತಹ ಅಂಶ. ಆದರೆ ನನ್ನ ಒಂದು ಕ್ಲಾರಿಫಿಕೇಷನ್ ಏನು ಎಂದರೆ. there was an agreement during, ಬ್ರಿಟಿಷ್ ರಿಜಿಮ್‌ನಲ್ಲಿ ಆಗಿ 1925ರಲ್ಲ ಒಂದು ಅಚೀವ್‌ಮೆಂಟ್ ಆಗಿದೆ. ಅದು ಏನೆಂದರೆ ನೀರು ನಾವು ಎಷ್ಟು ತೆಗೆದುಕೊಳ್ಳಬೇಕು, ತಮಿಳುನಾಡಿಗೆ ಎಷ್ಟು ಹೋಗುತ್ತದೆ, ಪಾಂಡಿಚೇರಿ ಎಷ್ಟು ಹೋಗಬೇಕು ಎಂದು. 1975ರಲ್ಲಿ ಕರುಣಾನಿಧಿಯವರು ಅಲ್ಲಿ ಸರ್ಕಾರ ನಡೆಸುತ್ತಿದ್ದರು. ಶ್ರೀಮತಿ ಇಂದಿರಾಗಾಂಧಿಯವರು ಸರ್ಕಾರ ನಡೆಸುತ್ತಿದ್ದರು. ಆವಾಗಲೇ ಇದು ಸಾಲ್ವ್ ಆಗಲಿಲ್ಲ. ಇಲ್ಲಿಯವರೆಗೆ ಎಳೆದುಕೊಂಡು ಬಂದಿದ್ದೀರಿ. ಆದರೆ ಈಗ, ಕರುಣಾನಿಧಿಯವರ ಸಹಕಾರ ನಮ್ಮ ಸೆಂಟ್ರಲ್ ಗವರ್ನ್‌ಮೆಂಟ್‌ನಲ್ಲಿದೆ, ಅದರಿಂದ ನೀವು ಸಾಲ್ವ್ ಮಾಡುವುದಕ್ಕೆ ಆಗುತ್ತಾ ಇಲ್ಲ ಎಂದು ನಮ್ಮ ಬಿಜೆಪಿ ನಾಯಕರೂ ಹೇಳಿದರು. ಈಗ ಅವರೂ ಹೇಳುತ್ತಿದ್ದಾರೆ. It was not solved for nearly 75 years, 50+25= 75 ವರ್ಷ ಆಗಿದೆ. 1925ರಿಂದ 90 ಅಂದರೆ ಲೆಕ್ಕ ಹಾಕಿಕೊಳ್ಳಿ. 65 ರಿಂದ 75 ವರ್ಷ ಆಗಿದೆ. It is not solved. You have not solved during 1975 when there was good term with Sri Karunanidhi and Smt. Indira Gandhi.

ಶ್ರೀ ಮಂಜುನಾಥ್ ಸಿ ಕುನ್ನೂರು : ಆಗ ಸಮಸ್ಯೆ ಬಗೆಹರಿಯಲಿಲ್ಲ. ಈಗ ದೇವೇಗೌಡರು ಬಂದ ಮೇಲೆ ಸಮಸ್ಯೆ ಮತ್ತಷ್ಟು ಹೆಚ್ಚಾಗಿದೆ ಎಂಬುದನ್ನು ರಾಜಣ್ಣನವರು ಒಪ್ಪಿಕೊಳ್ಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ನಾನು ಹೇಳತಕ್ಕದ್ದು ಇಷ್ಟೇ. ಒಬ್ಬ ಅಟಾರ್ನಿ ಜನರಲ್ ಅವರೊಬ್ಬರು ಸುಪ್ರೀಂ ಕೋರ್ಟ್‌ನ ಮುಂದೆ ಯಾವುದೇ ಒಂದು ಸರ್ಕಾರದ ನಿಲುವನ್ನು

ತಾಳುವಾಗ, ಖಂಡಿತವಾಗಿ ಸಂಬಂಧಪಟ್ಟಂತಹ ಪ್ರಧಾನ ಮಂತ್ರಿಗಳಿಗಾಗಲೀ ಅಥವಾ ನೀರಾವರಿ ಸಚಿವರಿಗೆ ಆಗಲಿ ನಾನು ಏನು ನಿಲುವು ತೆಗೆದುಕೊಳ್ಳಬೇಕು ಎಂದು ಕೇಳೇ ಕೇಳುತ್ತಾನೆ. ಏಕೆಂದರೆ ಇದು ನೇರವಾಗಿ ಕರ್ನಾಟಕಕ್ಕೆ ಸಂಬಂಧಪಟ್ಟಂತಹ ವಿಷಯ. ಕಾವೇರಿಗೆ ಸಂಬಂಧಪಟ್ಟ ವಿಷಯ. ನೇರವಾಗಿ ಅಂದಿನ ಪ್ರಧಾನ ಮಂತ್ರಿಯವರು ಈ ಒಂದು ವಿಷಯದಲ್ಲಿ ಯಾವಾಗಲೂ ಆಸಕ್ತಿ ವಹಿಸಿ ಕೆಲಸ ಮಾಡಿದ್ದಾರೆ ಎಂದು ಅವರಿಗೆ ಗೊತ್ತು. ಅಂದಾಗ ಆಸಕ್ತಿ ವಹಿಸಿ ಕೆಲಸ ಮಾಡಿದ್ದುದು ಮತ್ತು ಅವರದೇ ರಾಜ್ಯದ ಸಮಸ್ಯೆ ಆದ ಕಾರಣ ಅಟಾರ್ನಿ ಜನರಲ್ ಅವರನ್ನು ಕೇಳದೇ ಸುಪ್ರೀಂ ಕೋರ್ಟಿನಲ್ಲಿ ಈ ನಿಲುವನ್ನು ಹೇಗೆ ತೆಗೆದುಕೊಳ್ಳುತ್ತಾರೆ, ಹೇಗೆ ಸಾಧ್ಯ ಇದೆ? ನಾನು ಆರ್ಡರ್ ಶೀಟ್ ಓದಿ ಹೇಳುತ್ತೇನೆ. ಇದರಲ್ಲಿ ಹೀಗೆ ಹೇಳಿದ್ದಾರೆ.

``The Union of India is agreeable to frame a scheme Under Section 6 of the Act for the effective implementation of the Interim Award of the Tribunal. The Scheme will be sent within the next 8 weeks to the party-States for their comments and thereafter will be finalised by the Union of India and placed before the Parliament in accordance with law. In response to this statement of the learned Attorney General, Sri Anil B. Dewan, learned Counsel for the state of Karnataka and Sri K. Parasaran, learned Counsel for the State of Tamil Nadu is that in these circumstances it may be appropriate to accept the request of the Learned Attorney General and that the further hearing of this matter be deferred for sometime to enable the Union of India to complete this exercise... ಅಂದರೆ ಇನ್‌ಕೊಲೂಷನ್, ಆಗಿರತಕ್ಕದ್ದು ಇದು ಎಲ್ಲರಿಗೂ ಗೊತ್ತಿದೆ. ಸ್ಕೀಮ್ 6(ಎ) ಸಬ್ ಕ್ಲಾಸ್ 2ರಲ್ಲಿ ಸೇಮ್ ಸ್ಕೀಮನ್ನು ತಯಾರು ಮಾಡತಕ್ಕದ್ದು ಹಿಂದಿನ ಪ್ರಧಾನ ಮಂತ್ರಿಗಳ ಕನ್‌ಸೆಂಟ್ ಇಲ್ಲದೇ ಇದು ಸಾಧ್ಯವೇ ಇಲ್ಲ. ಇಲ್ಲ ಎಂದರೆ ಅವರು ಹೇಳಬಹುದಾಗಿತ್ತು. ನ್ಯಾಶನಲ್ ವಾಟರ್ ಪಾಲಿಸಿ ಮಾಡಬೇಕು ಎಂದು ಹೇಳಿ ನಾವು ಡಿಸೈಡ್ ಮಾಡಿದ್ದೇವೆ. ಹಿಂದಿನ ಪ್ರಧಾನ ಮಂತ್ರಿಯಾಗಿದ್ದಂತಹ ಶ್ರೀಮಾನ್ ನರಸಿಂಹರಾಯರನ್ನು ಕರೆದು ಅವರೇನು ಶ್ರೀಮಾನ್ ದೇವೇಗೌಡರು ಮುಖ್ಯಮಂತ್ರಿ ಇದ್ದಾಗ ಪತ್ರ ಬರೆದಿದ್ದರು. ಅದರಲ್ಲೂ ಕೂಡ ಅವರು ಹೇಳಿದ್ದಾರೆ. ನ್ಯಾಶನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್ ಮಾಡಲೇಬೇಕು. It must be done.., ಎಂದು ಅದರ ಆಧಾರದ ಮೇಲೆ ನಾವು ಮುಂದಿನ ನಿರ್ಣಯಗಳನ್ನು ತೆಗೆದುಕೊಳ್ಳಬೇಕು. ಈಗ ಸಧ್ಯಕ್ಕೆ ಸುಪ್ರೀಂ ಕೋರ್ಟ್‌ನ ಆದೇಶದ ಪ್ರಕಾರ ನೀವು ಆರು ಟಿಎಂಸಿ ನೀರು ಬಿಡಿ ಎಂದು ಇವರಿಗೆ ಪತ್ರ ಬರೆದರು. ಅಂದರೆ ಆವಾಗಲೂ ಕೂಡ ಕೇಂದ್ರ ಸರ್ಕಾರದ ಯೋಚನೆ ಏನು ಇತ್ತು ಅಂದರೆ ನ್ಯಾಶನಲ್-ವಾಟರ್ ಪಾಲಿಸಿ ಗೈಡ್‌ಲೈನ್ಸ್ ಅನ್ನು ಫ್ರೇಮ್ ಮಾಡಿದ ಮೇಲೆ ಮುಂದಿನ ಕ್ರಮವನ್ನು ಜಾರಿಯಲ್ಲಿ ತೆಗೆದುಕೊಳ್ಳಬೇಕು ಎನ್ನತಕ್ಕದ್ದು ಇತ್ತು. ಅಂದಾಗ ಈ ಮಾತನ್ನು ನೀವೇ ಹೇಳಿದ್ದಿರಿ. ಜನತಾ ದಳದ ಸರ್ಕಾರದವರೇ ಈ ಮಾತನ್ನು ಹೇಳಿ, ಈ ಮಾತಿಗೆ ಪುಷ್ಟಿ ಕೊಟ್ಟು, ಈ ಮಾತಿನ ಬಗ್ಗೆ ತಾವು ಚರ್ಚೆ ಮಾಡಿ ಹಿಂದಿನ ಪ್ರಧಾನ ಮಂತ್ರಿ

ಅಂದರೆ ಶ್ರೀ ಪಿ.ವಿ. ನರಸಿಂಹರಾವ್ ಅವರ ಮನವನ್ನು ಒಲಿಸಿ ನೀವು ಹೇಳಿದಂತಹವರು. ಇವತ್ತ ಏಕೆ ಹಿಂದೇಟು ಹಾಕಿ ಈ ಅಟಾರ್ನಿ ಜನರಲ್‌ಗೆ ನೀವು 6(ಎ)ರಲ್ಲಿ ಸ್ಕೀಮ್‌ನ್ನು ಮಾಡಿ ನೋಟಿಫಿಕೇಷನ್ ಜಾರಿಯಲ್ಲಿ ಬರಲಿ ಎನ್ನತಕ್ಕ ಮಾತನ್ನು ಹೇಳಿದಿರಿ ಎಂಬ ಮಾತನ್ನು ಕೇಳಿದ್ದೇನೆ. ಈ ಹೇಳಿಕೆಯಿಂದ ಈ ರಾಜ್ಯದ ಜನರಿಗೆ ನೀವು ಕೊಟ್ಟ ಮಾತನ್ನು ಉಳಿಸಿಕೊಂಡಿಲ್ಲ. ಅವರಿಗೆ ಮೋಸ ಮಾಡತಕ್ಕಂಥಹದು, ಅವರಿಗೆ ದ್ರೋಹ ಮಾಡತಕ್ಕದ್ದು, ವಂಚನೆ ಮಾಡತಕ್ಕಂಥ ಕೆಲಸವನ್ನು ನೀವು ಮಾಡಿದಿರಿ ಎನ್ನತಕ್ಕ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಏಕೆಂದರೆ ಡ್ರಾಫ್ಟ್ ಮಾಡಬೇಕು ಇದೆಲ್ಲಾ ಆಗಬೇಕು ಎಂದರೆ ಕನಿಷ್ಠ ಪಕ್ಷ ಒಂದು ತಿಂಗಳಗಿಂತ ಮುಂಚೆ ಆಗಲೇಬೇಕು. ಏನು ಒಂದು ದಿವಸದಲ್ಲಿ ಒಂದು ತಾಸಿನಲ್ಲಿ ಆಗತಕ್ಕಂಥದ್ದು ಅಲ್ಲ. ನಾನು ಈಗಾಗಲೇ ಹೇಳಿದ ಹಾಗೆ ಇಲ್ಲಿ ಅವರು ಒಪ್ಪಿಕೊಂಡರು. ನೋಟಿಫಿಕೇಷನ್‌ನಲ್ಲಿ ಏನು ಬಂತು? 1924ರಲ್ಲಿ ಯಾವ್ಯಾವ ಕಂಡೀಷನ್ಸ್ ಇತ್ತು, ಅವೆಲ್ಲಾ ಕಂಡೀಷನ್ಸ್ ಇಲ್ಲೂ ಕೂಡ ಬಂದವು. ನಿಮಗೆ ಹೇಳಬೇಕಾದರೆ ಆ ಕಂಡೀಷನ್ಸ್ ಓದಿ ಹೇಳಿದೆ. ಇಲ್ಲೂ ಕೂಡ ಆ ಕಂಡೀಷನ್ಸ್‌ನ್ನು ನಿಮ್ಮ ಗಮನಕ್ಕೆ ಏಕೆ ತರುತ್ತಿದ್ದೇನೆ ಎಂದರೆ ಸ್ವಲ್ಪ ಸಮಯಜಾಸ್ತಿ ಆದರೂ ಅಡ್ಡಿ ಇಲ್ಲ. 1924ರ ಅಗ್ರಿಮೆಂಟ್‌ನಲ್ಲಿ ಏನು ಕಂಡೀಷನ್ಸ್ ಇದ್ದವು ಅಥವಾ ತಾತ್ಪೂರ್ತಿಕವಾಗಿ 1982ರಲ್ಲಿ ಏನು ಅಗ್ರೀಮೆಂಟ್ ಆಗಿತ್ತು. ಅದರಲ್ಲಿ ಏನು ಕಂಡೀಷನ್ಸ್ ಇತ್ತು? ಮತ್ತು ಇವತ್ತು 30.5.97ರ ನೋಟಿಫಿಕೇಷನ್ ಏನು ಇದೆ, ಅದರಲ್ಲಿ ಏನು ಕಂಡೀಷನ್ಸ್ ಇದೆ ಎಂದು ಅದಕ್ಕೆ ನೀವು ಹೋಲಿಸಿದರೆ ಅಲ್ಲಿಂದ ಇಲ್ಲಿಯವರೆಗೆ ಇದು 1924ರ ಅಗ್ರೀಮೆಂಟ್ ಇಂಪ್ಲಿಮೆಂಟ್ ನೀವು ಮಾಡಿ ಎನ್ನತಕ್ಕಂಥ ನೋಟಿಫಿಕೇಷನ್.

12.00 ಪಿ.ಎಂ.

ಈ ಬಗ್ಗೆ ಎರಡು ಮಾತು ನಿಮ್ಮ ಗಮನಕ್ಕೆ ತರುತ್ತೇನೆ.

1. To ensure inflows of 205 TMCft. of water into Mettur Reservoir;

2. To ensure 6 TMCft. of water for the Karaikal region of the Union Territory of Pondichery;

3. To ensure that the State of Karnataka does not increase irrigation by the waters of Cauvery beyond adjusting 11.20 lakh acres. ಅಲ್ಲೂ ಕೂಡ ಯಾವುದೇ ಹೊಸ ಪ್ರಾಜೆಕ್ಟ್ ನೀವು ತೆಗೆದುಕೊಳ್ಳಬಾರದು ಎಂದು ಹೇಳುತ್ತಾರೆ, ಕೆಆರ್‌ಎಸ್ ಡ್ಯಾಮಿಗೆ ಕನ್‌ಸೆಂಟ್ ಕೊಡುವಾಗ ಬ್ರಿಟಿಷರು ಏನೇನು ಕಂಡೀಷನ್ಸ್ ಹಾಕಿದ್ದರು, ಅವನ್ನೇ ಇವತ್ತು ಕೇಂದ್ರ ಸರ್ಕಾರ ಹಾಕಿದೆ. ಅಂದರೆ ಬ್ರಿಟಿಷ್ ಸರ್ಕಾರದ ನಿಲುವಿಗೂ ಇವತ್ತಿನ ಕೇಂದ್ರದ ನಿಲುವಿಗೂ ಯಾವ ವ್ಯತ್ಯಾಸ ಇಲ್ಲವೆಂದು ಸ್ಪಷ್ಟವಾಗುತ್ತದೆ. ಈ ನಿಲುವಿಗೆ ನಮ್ಮ ಪ್ರತಿಭಟನೆ ಇಲ್ಲ. ನಾವೇ ಒಪ್ಪಿಕೊಂಡು ನಮ್ಮ ವಕೀಲರಿಗೆ 6(ಎ)ನಲ್ಲಿ ಒಂದು ಸ್ಕೀಂ ಮಾಡಲು ಪ್ಲೀಡ್ ಮಾಡಿ ಎಂದು ಹೇಳಿದ್ದೇವೆ. ಆ ಮಾತಿಗೆ ನಮ್ಮ ವಕೀಲರು ಮತ್ತ ತಮಿಳುನಾಡಿನ ವಕೀಲ ಪರಾಶರನ್ ಇಬ್ಬರೂ ಒಪ್ಪಿಕೊಂಡಿದ್ದಾರೆ. ಅಂದರೆ

ಹೇಳುವುದೊಂದು ಮಾಡುವುದೊಂದು ಏಕೆ ನೀವು ಮಾಡುತ್ತೀರಿ? ಇಲ್ಲದಿದ್ದರೆ ಕೋರ್ಟಿನಿಂದ ಏನೋ ಯಥಪ್ರಕಾರ ಆಗುತ್ತಿತ್ತು. ಅಂದರೆ ಒಂದು ಕಡೆ ಕನ್‌ಸೆಂಟ್ ಕೊಡುವುದು ಇನ್ನೊಂದು ಕಡೆ ಕೋರ್ಟು ನಮಗೆ ಒತ್ತಾಯ ಮಾಡಿದೆ ಎಂದು ಹೇಳುವುದು ಯಾವ ನ್ಯಾಯ? ಇಷ್ಟೇ ಅಲ್ಲ ಅಧ್ಯಕ್ಷರೇ, ಆ ರೆಗ್ಯುಲೇಶನ್ ಕಮಿಟಿ ಮುಂದೆ ಏನು ಹೇಳುತ್ತದೆ ಅಂದರೆ -

``The Regulation Committee shall oversee and direct the operation of the gates of 7 reservoirs i.e., 1. Kabini 2. Harangi 3. Hemavathi 4. KRS 5. Mettur 6. Bhavani 7. Karaikal ಅವರು ಕೆಳಗಿರುತ್ತಾರೆ ಆ ಮಾತು ಬೇರೆ. ಆದರೆ ನಮ್ಮ ಎಲ್ಲ ಕೆಲಸಗಳನ್ನು ವಾಚ್ ಮಾಡುವ ಕೆಲಸ ಈ ಕಮಿಟಿ ಮಾಡುತ್ತದೆ. ನಾವು ರಿಪೇರಿ ಕೂಡ ತೆಗೆದುಕೊಳ್ಳುವಂತಿಲ್ಲ. ನಾಳೆ ಯಾವುದೇ ನಿಸರ್ಗವಿಕೋಪದಿಂದ ತೊಂದರೆಯಾದರೆ ಅವರ ಪರ್ಮಿಶನ್ ಇಲ್ಲದೆ ಯಾವ ರಿಸರ್ವಾಯರಾಗಲಿ ಅಣೆಕಟ್ಟನ್ನಾಗಲಿ ರಿಪೇರಿ ಮಾಡುವಂತಿಲ್ಲ. ಅಂದರೆ ಪ್ರತಿಯೊಂದಕ್ಕೆ ಇವತ್ತು ನಾವು ಪರ್ಮಿಶನ್ ತೆಗೆದುಕೊಳ್ಳಬೇಕು ಇಂತಹ ಪರಿಸ್ಥಿತಿಯಲ್ಲಿ ಈ ನೋಟಿಫಿಕೇಷನ್ ನಮ್ಮನ್ನು ತಂದಿದೆ. ಆದರೆ ಈ ಅಧಿಸೂಚನೆ ಯಾರ ಸಲುವಾಗಿ? ಇದನ್ನು ತಮಿಳುನಾಡಿನವರು ಡ್ರಾಫ್ಟ್ ಮಾಡಿದ್ದು, ಅವರು ನೀರು ಉಪಯೋಗ ಮಾಡಿಕೊಳ್ಳುವ ಸಲುವಾಗಿ ತಯಾರಿಸಿದ ಅಧಿಸೂಚನೆ, ಇದನ್ನು ಕೇಂದ್ರ ಸರ್ಕಾರ ಇವತ್ತು ಅಕ್ಸೆಪ್ಟ್ ಮಾಡುತ್ತದೆ. ಅಂದರೆ ಕೇಂದ್ರ ಸರ್ಕಾರದ ಮುಖಾಂತರ ಇದನ್ನು ಇಷ್ಯೂ ಮಾಡಿದ್ದಾರೆ. ಅದಕ್ಕೇ ನಾನು ಹೇಳಿದೆ, 1924ರ ಅಗ್ರಿಮೆಂಟ್‌ಗೆ ಮತ್ತು ಈ ಅಧಿಸೂಚನೆಗೆ ಯಾವ ವ್ಯತ್ಯಾಸವೂ ಇಲ್ಲ ಅಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರು ಹೋಗಿ ಕಾಡಿ ಬೇಡಿ ಹೊಡೆದಾಡಿ ಆ ಅಗ್ರಿಮೆಂಟ್ ಮಾಡಿದಾಗ ಸ್ವಲ್ಪಮಟ್ಟಿಗೆ ನಮಗೆ ನೀರು ಕೊಡುವಂಥದ್ದಾಯಿತು. ಇಲ್ಲಂತೂ ಸುಪ್ರೀಂಕೋರ್ಟಿಗೆ ನಾವೇ ನೇರವಾಗಿ ಹೋಗಿ ಕೈಕಟ್ಟಿಸಿಕೊಂಡು ನೀವು ಸ್ಕೀಮನ್ನು ಪ್ರಿಪೇರ್ ಮಾಡಿ ಸೆಕ್ಷನ್ 6(ಎ) ರ ಪ್ರಕಾರ ಇಶ್ಯೂ ಮಾಡಿ ಅದನ್ನು ನಾವೂ ಒಪ್ಪಿಕೊಳ್ಳುತ್ತೇವೆ, ಅವರೂ ಒಪ್ಪಿಕೊಳ್ಳುತ್ತಾರೆ ಅಂತ ಹೇಳಿ ಕೊಂಡುಬಂದಮೇಲೆ ಅವರು ಸ್ವಾಭಾವಿಕವಾಗಿ ಇಶ್ಯೂ ಮಾಡುತ್ತಾರೆ. ಇವತ್ತು ನೀವು ನೀರು ಬಿಡುವುದಿಲ್ಲ ಅಂದರೆ ಯಾವುದೇ ರೀತಿಯಿಂದ ನೀರು ಬಿಡಲೇಬೇಕು ಎಂದು ಹೇಳುವ ಎನ್‌ಫೋರ್ಸ್‌ಮೆಂಟ್ ಅಥಾರಿಟಿ ಇದೆ ಅಂದರೆ ಇದು ಒಂದು ಕರಾಳ ಕಾಯಿದೆ, ಇಂತಹ ಕೆಟ್ಟ ಅಧಿಸೂಚನೆ ಅಥವಾ ರೂಲ್ಸ್‌ರೆಗ್ಯುಲೇಶನ್ಸ್ ಎಲ್ಲೂ ಯಾರು ಕೂಡ ಮಾಡಿಲ್ಲ. ಇದು ಒನ್‌ಸೈಡೆಡ್. ಇಂತಹ ಒಮ್ಮುಖ ಅಧಿಸೂಚನೆಗೆ ಹಿಂದೆ ಯಾಕೆ ಒಪ್ಪಿಕೊಂಡರು? ಅದರ ಸಂಪೂರ್ಣ ಜವಾಬ್ದಾರಿ ಈ ಸರ್ಕಾರ ಹೊತ್ತುಕೊಳ್ಳಬೇಕು ಮತ್ತು ಈ ಸರ್ಕಾರ ಬೆಂಬಲ ನೀಡಿ ನಮ್ಮ ರಾಜ್ಯದವರೇನು ಪ್ರಧಾನಿಗಳಾಗಿದ್ದರೋ ಅವರೂ ಕೂಡ ಹೊತ್ತುಕೊಳ್ಳಬೇಕಾಗುತ್ತದೆ. ಇವತ್ತು ಅವರು ಅಧಿಕಾರದಲ್ಲಿಲ್ಲದೆ ಇರಬಹುದು ಆದರೆ ಇವೆಲ್ಲ ನಡೆದಿರುವುದು ಅವರ ನಜರಿಗೆ ಬರದೇ ಏನೂ ಆಗಿಲ್ಲ. ಅಂದಾಗ ನೀವು ಏನು ರಕ್ಷಣೆ ಮಾಡುತ್ತೀರಿ? ಒಂದು ಕಡೆ ನಾವು ರಾಜ್ಯದ ಹಿತ ಕಾಪಾಡುವುದರಲ್ಲಿ ಬೇರೆಯವರಿಗಿಂತ ಹಿಂದೆ ಬೀಳುವುದಿಲ್ಲ ಎಂದು ಪದೇಪದೇ ಹೇಳುತ್ತೀರಿ. ಆದರೆ ನಿಮ್ಮ ನಡವಳಿಕೆ ಆರ್ಗುಮೆಂಟ್‌ಗಳನ್ನು ನೋಡಿದಾಗ ಅಥವಾ ಸುಪ್ರೀಂಕೋರ್ಟ್ ಮುಂದೆ ಹೇಳಿಕೆ ಕೊಟ್ಟಾಗ, ನೀವು ನಿಜವಾಗಲೂ ಇದರಲ್ಲಿ ಕೊಲ್ಯೂಡ್ ಆಗಿದ್ದೀರೇನೋ ಎಂಬ ಸಂಶಯ ಬರುತ್ತದೆ.

ಇಲ್ಲದಿದ್ದರೆ ಇಂತಹ ಕೆಟ್ಟ ಅಧಿಸೂಚನೆ ಬರಲು ಸಾಧ್ಯವೇ ಇಲ್ಲ. ಮತ್ತು ಇದು ಬಂದ ಮೇಲೂ 10-15 ದಿವಸ ಮುಚ್ಚಿಟ್ಟು ಅದಕ್ಕೆ ಪ್ರತಿಕ್ರಿಯಸದೆ ತರಾತುರಿಯಲ್ಲಿ ವಿದೇಶಕ್ಕೆ ಹೋಗುವುದು, ಅಲ್ಲಿಂದ ಬಂದ ಮೇಲೆ ಅಂತಹ ಅರ್ಜೆಂಟಿರಲಿಲ್ಲ, ನಾನು ಆಗ ರಿಯಾಕ್ಟ್ ಮಾಡಿರಲಿಲ್ಲ ಆದರೆ ಹೋಗುವಾಗ ನಾನು ಹೇಳಿ ಸಿಗ್ನೇಚರ್ ಮಾಡಿದ್ದೆ, ಉತ್ತರ ಕೊಡಿ ಅಂತ ಹೇಳಿದರೂ ಅದಕ್ಕೆ ಉತ್ತರವನ್ನು ಆಗಲೇ ಕೊಟ್ಟಿಲ್ಲ. ಪ್ರಭಾಕರ್ ಅವರು ಉತ್ತರ ಕೊಟ್ಟಿದ್ದು ಯಾವಾಗ ಅಂದರೆ 2-7-1997ರಂದು ಈ ಉತ್ತರವನ್ನು ತಾತ್ಪೂರ್ತಿಕವಾಗಿ ಕೊಟ್ಟರು, ಏನು ಅಂತ ಕೊಟ್ಟರು? ನಾವು ಕೆಲವು ಕಂಡಿಶನ್ಸ್‌ಗಳನ್ನು ಒಪ್ಪುವುದಿಲ್ಲ ಮಾಡುವುದಿಲ್ಲ ಎಂದು ಹೇಳಿಕೊಂಡು ತರಾತುರಿಯಲ್ಲಿ ನಮ್ಮ ಚೀಫ್ ಸೆಕ್ರೆಟರಿಯವರು ಡ್ರಾಫ್ಟ್‌ಲೆಟರ್‌ನ್ನು ಅವರು ಕಳಿಸಿದ್ದಾರೆ. ಅಂದರೆ ನೀವು ಅಧಿಸೂಚನೆ ನೋಡಿ, ಕಾನೂನು ಇಲಾಖೆ ಜೊತೆ ಕುಳಿತು ಚರ್ಚೆ ಮಾಡಿ ಕೂಲಂಕಷವಾಗಿ ಇದರ ಬಗ್ಗೆ ಚಿಂತನೆ ಮಾಡುವಷ್ಟು ಸಮಯ ಇಲ್ಲ, ಹಾಗಾದರೆ ಮತ್ತೆಂತಹ ಸಮಸ್ಯೆಗಳಿಗೆ ನೀವು ಸ್ಪಂದಿಸುತ್ತೀರಿ ಎಂದು ನಾನು ಕೇಳಬೇಕಾಗುತ್ತದೆ. ಇನ್ನೆಂತಹ ಸಮಸ್ಯೆಗಳಿಗೆ ಈ ಸರ್ಕಾರ ಗಂಭೀರವಾಗಿ ಪ್ರತಿಕ್ರಿಯಿಸುವುದು? ಈ ಲೆಟರ್‌ನಲ್ಲಿನ ಒಂದೇಒಂದು ಕಂಟೆಂಟ್‌ನ್ನು ತಮಗೆ ಓದುತ್ತೇನೆ:

"This is with reference to you letter No.3/5/97 B/M/588, dated 30th May 1977, forwarding a copy of the Draft scheme prepared by the Government of India for implementation of the interim award of the Cauvery Water Dispute Tribunal, in my letter No. ID/CSC/17-6-1997 I had informed you that we would be in a position to offer our comments by the end of July 1977``. ಅಂದರೆ ಎಂಡ್ ಆಫ್ ಜುಲೈ ಅಂದರೆ ಸೆಕೆಂಡ್ ಆಫ್ ಜುಲೈ ನಲ್ಲಿ ಈ ಪತ್ರವನ್ನೂ ಕಳಿಸುತ್ತಾರೆ. ಹಿಂದೆ ನೀವು 17.6.97ಕ್ಕೆ ಒಂದು ಲೆಟರ್ ಕಳಿಸಿದಿರಿ, ಆವಾಗ ನೀವು ಯಾರನ್ನು ಕನ್‌ಸಲ್ಟ್ ಮಾಡಿದಿರಿ? ಆ ಲೆಟರ್‌ನಲ್ಲಿ ಏನಿದೆ ಎಂದು ಕಳಿಸಿದಿರಿ? ನ್ಯಾಚುರಲಿ ಮುಖ್ಯ ಮಂತ್ರಿಗಳಂತೂ ಇಲ್ಲಿ ಇರಲಿಲ್ಲ. ಆ ಮೊದಲನೆ ಲೆಟರ್ ಕಳಿಸಿದಾಗ ನೀವು ಇದರ ಕಡೆ ಗಮನ ಕೊಡದೆ ನಿಮ್ಮ ವಕೀಲರು ಅಲ್ಲಿ ಏನು ಸುಪ್ರೀಮ್ ಕೋರ್ಟ್ ಮುಂದೆ ಬರುತ್ತದೆ, ಅದನ್ನು ಅಲ್ಲಿ ಅವರು ಒಪ್ಪಿಕೊಳ್ಳುವುದು. ನೀವು ಮಾತ್ರ ನಿಮಗೆ ಯಾವಾಗ ಸಮಯ ಸಿಗುತ್ತದೋ, ಯಾವಾಗ ಟೈಂ ಸಿಗುತ್ತದೋ ಆಗ ಪತ್ರಗಳಿಗೆ ಸಹಿ ಮಾಡಿ ಕಳಿಸಿಕೊಡುವುದು. ಇಂತಹ ಕೆಲಸಗಳನ್ನು ಮಾಡಿಕೊಂಡು ಇವತ್ತು ನಾವು ಏನು ಕಡೆಗಣಿಸಿಲ್ಲ, ನಾವು ಏನು ಹಿಂದೆ ಬಿದ್ದಿಲ್ಲ ಎಂದು ಬೇರೆಯವರಿಗೆ ಬುದ್ಧಿ ಹೇಳುವುದಕ್ಕೆ ಬರುತ್ತಾರೆ. ನೀವು ಹಿಂದೆ ಬಿದ್ದಿದ್ದಕ್ಕೆ ಇವತ್ತು ಇಷ್ಟೊಂದು ದೊಡ್ಡ ಅನಾಹುತ ಆಗಿದ್ದುದು. ಇವತ್ತು ಇದರ ಕಡೆ ನಿಮಗೆ ಗಮನ ಇಲ್ಲಾ ಎಂದು ತಿಳಿದುಕೊಂಡೇ ನಾವು ಇವತ್ತಿನ ದಿವಸ ಈ ಕೇಸ್‌ನ್ನು ಕಳೆದುಕೊಳ್ಳುತ್ತಾ ಇದ್ದೇವೆ. ನಾವು ಎಷ್ಟೇ ಇನ್‌ಟೇರಿಮ್ ಅಪ್ಲಿಕೇಷನ್ ಹಾಕಿದರೂ ಯಾವುದಕ್ಕೂ ಕೂಡ ಸೀರಿಯಸ್ ಆಗಿ ಕಂಟೆಂಟ್ ಮಾಡದೆ, ಸೀರಿಯಸ್ಸಾಗಿ ಫೈಟ್ ಮಾಡದೆ ಇವತ್ತು ಒಂದೊಂದಾಗಿ ಕಳೆದುಕೊಂಡು ಬಂದಿದ್ದೇವೆ. ಕೊನೆಗೆ ಏನಾಗಿದೆ ಎಂದರೆ ಈ ನೋಟಿಫಿಕೇಷನಿಗೂ ಕೂಡ ಆರು ವಾರಗಳ ಟೈಂ ಕೊಟ್ಟಿದ್ದರು. ಆ ಟೈಂ ಪ್ರಕಾರ ನಮ್ಮ ಅಬ್‌ಜೆಕ್ಷನ್ ಕೇಳುತ್ತಾರೆ. ಅದಕ್ಕೆ ನಾವು ಏನು ಕಾಮೆಂಟ್ ಕೊಡುತ್ತೇವೆ, ಅದನ್ನು

ಅವರು ಗಮನದಲ್ಲಿ ಇಟ್ಟುಕೊಳ್ಳಬಹುದು, ಇಲ್ಲದೇ ಇರಬಹುದು. ಮತ್ತೊಂದು ಫೈನಲ್ ನೋಟಿಫಿಕೇಷನ್ ಇಷ್ಯೂ ಮಾಡುತ್ತಾರೆ. ಅಧ್ಯಕ್ಷರೆ, ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಈಗ ನೋಟಿಫಿಕೇಷನ್ ಏನು ಇಷ್ಯೂ ಮಾಡಿದ್ದಾರೆ ಅದರಲ್ಲೂ ಕೂಡ ಡಿಫೆಕ್ಟೀವ್ ಇದೆ. ಏಕೆಂದರೆ ನಮ್ಮ ಇಂಟರ್ ಸ್ಟೇಟ್ ವಾಟರ್ ಡಿಸ್ಪ್ಯೂಟ್ ಆ್ಯಕ್ಟ್ 6ಎ (2)ರಲ್ಲಿ ಏನು ಇದೆ Power to make schemes to implement the decisions of the Tribunals - Clause 6A, Sub-clause (ii): A scheme framed under sub-section (i) may be provided for establishment of any authority where described as such or as the Committee of the Body for the implementation of the decisions directions of the Tribunals. ತಾವು ಏನು ಸಬ್ ಕ್ಲಾಸ್ 2 ಯಿಂದ (ಎ) ಟು (ಜೆ)ವರೆಗೂ, ಅಂದರೆ ಕಾಂಪೋಸಿಷನ್ ಹೇಗೆ ಇರಬೇಕು, ಹೋಲ್ಡಿಂಗ್ ಆಫ್ ಮೀಟಿಂಗ್ ಎಷ್ಟು ಇರಬೇಕು, ಅಪಾಯಿಂಟ್‌ಮೆಂಟ್ ಹೇಗೆ ಇರಬೇಕು, ಕಾನ್ಸ್ಟಿಟ್ಯುಯೆಂಟ್ ಫಂಡ್ ನಡೆಸುವುದಕ್ಕೆ ಹೇಗೆ ಇರಬೇಕು, ಪ್ರಾಧಿಕಾರ ನಡೆಸುವುದಕ್ಕೆ ಯಾವ ರೀತಿ ಅಕೌಂಟ್ ಇರಬೇಕು. ಇದರ ಬಗ್ಗೆ ಅಪ್ ಟು ಜೂನ್ ವರೆವಿಗೂ ನೋಟಿಫಿಕೇಷನ್‌ನಲ್ಲಿ ಇದೆ. ಆದರೆ they have acted beyond this. ಅಂದರೆ ಎ ಟು ಜೆ ವರೆವಿಗೆ ಇರತಕ್ಕಂತಹ ಕಂಡೀಷನ್ ಏನು ಇದೆ, ಅಷ್ಟೇ ಕಂಡೀಷನ್ ಸೀಮಿತವಾಗಿ ಉಳಿದಿಲ್ಲ. ಅವರು ನೀವು ರಿಪೇರಿ ಮಾಡಬಾರದು, ಹೊಸದಾಗಿ ಪ್ರಾಜೆಕ್ಟ್ ಕಟ್ಟಬಾರದು ಎಂದು ಈ ರೀತಿಯಾಗಿ ಹೇಳಿ ನಮಗೆ ಇರತಕ್ಕಂತಹ ಸ್ವಾತಂತ್ರ್ಯವನ್ನು ಕಸಿದು ಕೊಂಡಿದ್ದಾರೆ. ಏಕೆಂದರೆ 6ಎ ಕ್ಲಾಸ್ 2 (ಎ)ಯಿಂದ (ಜೆ) ತನಕ ಏನು ಹೇಳುತ್ತಾರೆ, ಆ ಫಂಕ್ಷನ್ಸ್ ಬಗ್ಗೆ ಮಾತ್ರ ಸೀಮಿತವಾಗಿ ಇಟ್ಟುಕೊಂಡು ಸ್ಕೀಂ ತಯಾರು ಮಾಡಬೇಕು. ಆದರೆ ಈ 7 ಅಥವಾ 8 ಕಂಡೀಷನ್ ಬಿಟ್ಟು ಅವರು ನೀವು ಹೊಸದಾಗಿ ಡ್ಯಾಂಗಳನ್ನು ಕಟ್ಟಬಾರದು 11 ಲಕ್ಷ ಎಕರೆಗಿಂತ ಜಾಸ್ತಿ ನೀರಾವರಿ ಮಾಡಬಾರದು ಎಂದು ಅವರು ಹೇಳುತ್ತಾರೆ. ಅಧ್ಯಕ್ಷರೇ, ಅವರು ಹೇಳುವುದಕ್ಕೆ ಯಾರು? ನಾಳೆ ನಾವು ಡ್ರೈ ಕಂ ವೆಟ್ ಮಾಡಿಕೊಳ್ಳುತ್ತೇವೆ. ಒಂದು ಏರಿಯಾದಲ್ಲಿ ಅಥವಾ ಒಂದು ಪ್ರಾಜೆಕ್ಟ್ ಕೆಳಗೆ ಎರಡು ಎಕರೆ ನೀರಾವರಿ ಆಗುತ್ತದೆಂದು ಇಟ್ಟುಕೊಳ್ಳಿ, ಆವಾಗ ನಾವು ಡ್ರೈ ಕಂ ವೆಟ್ 4-5 ಲಕ್ಷಕ್ಕೆ ಮಾಡಿಕೊಳ್ಳುತ್ತೇವೆ. ಅವರು ಕೇಳುವುದಕ್ಕೆ ಯಾರು ನಾವು ಡ್ರಿಪ್‌ಇರಿಗೇಷನ್ ಮಾಡುತ್ತೇವೆ. ನಾವು ಯಾವುದಾದರೂ ಒಂದು ಹೊಸ ರೀತಿಯಿಂದ ನೀರನ್ನು ಉಳಿಸಿಕೊಂಡು ಹೆಚ್ಚಿನ ನೀರಾವರಿ ಮಾಡುತ್ತೇವೆ ಎಂದರೆ ಅದಕ್ಕೆ ಅವಕಾಶ ಇಲ್ಲಾ ಮತ್ತು ಕಾನೂನಿನಲ್ಲಿ ಕೂಡ ಏನು ಹೇಳಿಲ್ಲ. ಅದಕ್ಕೆ ಕಾನೂನು ಬಾಹಿರವಾದ ನೋಟಿಫಿಕೇಷನ್ ಕೂಡ ಇದೆ. ಕಾನೂನಿನಲ್ಲಿ ಯಾವ ಮಾತು ಇಲ್ಲಾ. ಅದು ನೋಟಿಫಿಕೇಷನ್‌ನಲ್ಲಿ ತಂದಿದ್ದಾರೆ. ಅಂದರೆ ನೋಟಿಫಿಕೇಷನ್‌ನಲ್ಲಿ ತಂದಿದ್ದು ಇಲ್ಲೀಗಲ್ ಆಗುತ್ತದೆ. If it is contrary to Act, they cannot issue the notification. ಇದು ಒಂದು. ಎರಡನೆಯದಾಗಿ, ಹೊಸ ಪ್ರಾಜೆಕ್ಟ್ ನಾವು ತೆಗೆದುಕೊಳ್ಳತಕ್ಕಂಥದ್ದು, ಅದಕ್ಕೂ ಕೂಡ ನಮಗೆ ಅಲಾಟ್ ಆದಂತಹ ನೀರು ಅಥವಾ ಕೊಟ್ಟಂತಹ ನೀರು ಎಲ್ಲೆಲ್ಲಿ ನಾವು ಪಡೆದುಕೊಳ್ಳಬೇಕು ಅದಕ್ಕೂ ಕೂಡ ಅವಕಾಶ ಇಲ್ಲ. ಅದಕ್ಕೂ ಅವರ ಪರ್‌ಮಿಷನ್ನೇ ಬೇಕು. ತಮಿಳುನಾಡಿನ ಜನರಿಗೋಸ್ಕರ ಈ ನೋಟಿಫಿಕೇಷನ್ ಮಾಡಿರುವುದು. ನಮಗೆ ನೀರು ಇರಲಿ, ಇಲ್ಲದೆ ಇರಲಿ ನಾವು ಮಾತ್ರ 205

ಟಿಎಂಸಿ ನೀರು ಕೊಡಲೇ ಬೇಕು. ನಮಗೆ ಕುಡಿಯುವುದಕ್ಕೆ ನೀರು ಇಲ್ಲದೆ ಇದ್ದರೂ ಚಿಂತೆ ಇಲ್ಲಾ. ಒಂದು ಹನಿ ನೀರು ಯಾವುದೇ ಒಂದು ರಿಸರವಾಯರ್‌ನಲ್ಲಿ ಇಲ್ಲದೆ ಇದ್ದರೂ ಚಿಂತೆ ಇಲ್ಲಾ, ನೀವು ಮಾತ್ರ ಪ್ರತಿ ತಿಂಗಳು ಜೂನಿಂದ ನೆಕ್ಸ್ಟ್ ಮೇವರೆಗೆ ಅವರು ಹೇಳಿದ ಹಾಗೆ ಪ್ರತಿ ತಿಂಗಳು ಎಷ್ಟು ಎಷ್ಟು ನೀರನ್ನು ಬಿಡಬೇಕು ಎಂದು ಹೇಳಿದ್ದೀರೋ ಅಷ್ಟು ನೀರನ್ನು ನೀವು ಕೊಡಲೇ ಬೇಕು ಅಂದರೆ ಇದು ಒಂದು ರೀತಿಯ ಡಿಕ್‌ಟೇಟರ್‌ಶಿಫ್ ಆರ್ಡರ್ ಆಯಿತು. ಕೆಲವು ಸಮಯದಲ್ಲಿ ಅನೇಕ ಸಾರಿ ನೀರು ಹೆಚ್ಚಿಗೆ ಬರುತ್ತದೆ, ಕೆಲವು ಸಾರಿ ನೀರೇ ಬರುವುದಿಲ್ಲ. ಅಂದರೆ, ನಾವು ಪ್ರತೀ ಸಾರಿ ಕಮಿಟಿ ಮುಂದೆ ಹೋಗಿ ಬೇಡಿಕೊಳ್ಳಬೇಕು. ಅಧ್ಯಕ್ಷರೇ, ಆ ಕಮಿಟಿಗೂ ಸಹ ಯಾವ ಅಧಿಕಾರ ಇದೆ? ಏಕೆಂದರೆ ಅದು ಫೈನಲ್ ಅಲ್ಲ. ಇವತ್ತು ಟ್ರಿಬ್ಯೂನಲ್‌ರವರು ಇನ್‌ಟೀರಿಮ್ ಅವಾರ್ಡ್ ಕೊಟ್ಟಿದ್ದು. ಇನ್‌ಟೀರಿಯಮ್ ಅವಾರ್ಡೆ ಇವತ್ತು ಫೈನಲ್ ನೋಟಿಫಿಕೇಷನ್ ಎಂದು ತಿಳಿದುಕೊಂಡು ನೋಟಿಫಿಕೇಷನ್ ಇಷ್ಯೂ ಮಾಡಿದರೆ, ನಾಳೆ ಫೈನಲ್ ಆರ್ಡರ್‌ನಲ್ಲಿ 250 ಟಿಎಂಸಿ ಇದ್ದಿದ್ದು 180-190 ಆಯಿತು ಅಂತ ಇಟ್ಟುಕೊಳ್ಳಿ ಅಥವಾ ಹೆಚ್ಚಿಗೆ ಆಗುವುದಕ್ಕೂ ಸಾಧ್ಯತೆ ಇದೆ, ಕಡಿಮೆ ಆಗುವುದಕ್ಕೂ ಸಾಧ್ಯತೆ ಇದೆ. ಆದರೆ ಆವಾಗ ಪುನಃ ಮಾಡಿಫಿಕೇಷನ್ ಮಾಡಿದರೆ ಇನ್ನೊಂದು ಸ್ಕೀಂ ಇಷ್ಯೂ ಮಾಡಬೇಕಾಗುತ್ತದೆ. ಹೀಗೆ ಒಂದು ಗೊಂದಲಮಯವಾದ ವಾತಾವರಣ ಇವತ್ತು ಇದೆ. ಆದುದರಿಂದ ಈ ಒಂದು ನೋಟಿಫಿಕೇಷನ್ ನಾವು ಖಂಡಿತವಾಗಿ ಒಪ್ಪಬಾರದು. ಅದಕ್ಕೆ ಯಾವುದೇ ರೀತಿಯಿಂದ ಇಂಪ್ಲಿಮೆಂಟೇಷನ್ ಮಾಡುವುದಕ್ಕೆ ಅವರು ಎಷ್ಟೇ ಪ್ರಯತ್ನ ಪಟ್ಟರೂ ಕೂಡ ನಾವು ಇದನ್ನು ಪ್ರತಿಭಟಿಸಬೇಕಾಗುತ್ತದೆ. ಏಕೆಂದರೆ ಇದು ಒಂದು ಅನ್ ಡೆಮಾಕ್ರೆಟಿಕ್ ನೋಟಿಫಿಕೇಷನ್ ಇದು ಕರ್ನಾಟಕ ರಾಜ್ಯದ ಜನರ ಹಿತವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಮಾಡಿದಂತಹ ನೋಟಿಫಿಕೇಷನ್ ಅಲ್ಲ. ಕೇವಲ ತಮಿಳುನಾಡು ಜನರ ಸಲುವಾಗಿ, ತಮಿಳುನಾಡು ಜನರ ರೈತರ ಹಿತವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ನೋಟಿಫಿಕೇಷನ್ ಇಷ್ಯೂ ಮಾಡಿರುವಂಥದ್ದು. ಅದಕ್ಕೆ ನಮ್ಮ ಸರ್ಕಾರ ಬಲಿಯಾಗಿದೆ. ಕನ್‌ಸೆಂಟ್ ಕೊಟ್ಟಿದೆ, ಅದಕ್ಕಾಗಿ ಇಂತಹ ಕನ್‌ಸೆಂಟ್ ಕೊಟ್ಟಿದ್ದಕ್ಕಾಗಿ ನಿಮಗೂ ಕೂಡ ಶಿಕ್ಷೆ ಆಗಬೇಕು. ಏಕೆಂದರೆ ನಾವು ಕೊನೆಯವರೆಗೂ ಫೈಟ್ ಮಾಡಿ, ನಾವು ಸ್ಕೀಂ ತಯಾರು ಮಾಡುವುದಕ್ಕೆ ಒಪ್ಪಿರುವುದಿಲ್ಲ, ಇಂಟರನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್ ಇಷ್ಯೂ ಆಗಿಲ್ಲ, ಈ ಆಧಾರದ ಮೇಲೆ ಆಗಬೇಕು ಎಂದು ಕನ್‌ಸೆಂಟ್ ಕೊಡಬಾರದು. ಆಗಿದ್ದ ಆಟಾರ್ನಿ ಜನರಲ್ ಏನೇ ಹೇಳಲಿ ನಿಮ್ಮ ವಕೀಲರು ಏಕೆ ಕನ್‌ಸೆಂಟ್ ಕೊಟ್ಟರು? ನಿಮ್ಮವರು ಏಕೆ ಅದಕ್ಕೆ ಒಪ್ಪಿಗೆ ಕೊಟ್ಟರು? ಅಂದರೆ, ಇದರ ಅರ್ಥ ಏನೆಂದರೆ ಇದು ಮ್ಯೂಚ್ಯುಯಲ್ ಅಂಡರ್‌ಸ್ಟ್ಯಾಂಡಿಂಗ್. with the consent of the man who is at the helom of affairs ಇಲ್ಲದೇ ಇದ್ದರೆ ಇದು ಆಗುವುದಕ್ಕೆ ಸಾಧ್ಯವೇ ಇಲ್ಲ. ಇಲ್ಲಾ ಅಂದರೆ ಯಾವ ವಕೀಲರು ಧೈರ್ಯ ಮಾಡುತ್ತಾರೆ? ಅಡ್ವೋಕೇಟ್ ಜನರಲ್ ನಿಮ್ಮ ಮಾತು ಕೇಳದೆ ಹೋದರೆ, ಮುಖ್ಯಮಂತ್ರಿಗಳು ಮರು ದಿವಸ ಕರೆದು ಬಾರಯ್ಯ, ನಮ್ಮ ಹಿತವನ್ನು ನೀನು ರಕ್ಷಣೆ ಮಾಡುವುದಕ್ಕೆ ಸಾಧ್ಯ ಇಲ್ಲ, ನಾವು ಹೇಳಿದಂತಹ ನಮ್ಮ ಸರ್ಕಾರದ ಪಾಲಿಸಿ ಪ್ರೋಗ್ರಾಂ ಡಿಫೆಂಡ್ ಮಾಡುವುದಕ್ಕೆ ನಿನ್ನ ಕೈಯಲ್ಲಿ ಆಗುವುದಿಲ್ಲ. ಆದಕಾರಣ ನೀವು ರಾಜೀನಾಮೆ ಕೊಟ್ಟು ಹೋಗಿ ಎಂದು ಹೇಳಬೇಕಾಗಿತ್ತು. ಯಾವ ರೀತಿಯಾಗಿ ಅಡ್ವೋಕೇಟ್ ಜನರಲ್ ನಿಮ್ಮ ರಾಜ್ಯದ ಹಿತವನ್ನು

ಕಾಪಾಡಬೇಕೋ ಅದೇ ರೀತಿಯಾಗಿ ಅರ್ಟಾನಿ ಜನರಲ್ ಕೂಡ, ಪ್ರಧಾನ ಮಂತ್ರಿಗಳಾಗಲಿ, ನೀರಾವರಿ ಮಂತ್ರಿಗಳಾಗಲಿ ಅಥವಾ ಆ ಗೌರ್ನಮೆಂಟ್ ಪಾಲಿಸಿ ಪ್ರೋಗ್ರಾಂ ಏನು ಇರುತ್ತದೆ ಅದನ್ನು ಗಮನದಲ್ಲಿ ಇಟ್ಟುಕೊಂಡೇ ಸುಪ್ರೀಂ ಕೋರ್ಟಿನಲ್ಲಿ ಅವರೂ ಕೂಡ ವಾದವನ್ನು ಮಾಡುತ್ತಾರೆ. ಆಫ್ ಕೋರ್ಸ್ ಕಾನೂನಿನ ಅಡಿಯಲ್ಲಿ ಯಾವುದೂ ಕೂಡ ಪರ್ವ್ಯೂ ಅಫ್ ದಿ ಲಾನೇ ಮಾಡುವುದು. ಅದಕ್ಕೆ ನಾನು ಇಷ್ಟು ಸ್ಪಷ್ಟವಾಗಿ ಹೇಳಬೇಕಾಗಿದೆ. ಇದರಲ್ಲಿ ನೀವು ಸಂಪೂರ್ಣವಾಗಿ ವಿಫಲವಾಗಿದ್ದೀರಿ. ಯಾವುದೇ ರೀತಿಯಿಂದ ಕರ್ನಾಟಕ ರಾಜ್ಯದ ಕಾವೇರಿ ಬೇಸ್‌ನಲ್ಲಿ ಇರತಕ್ಕಂತಹ ರೈತರ ಹಿತವನ್ನು ಕಾಪಾಡುವಲ್ಲಿ ನೀವು ಯಶಸ್ವಿ ಆಗಿಲ್ಲ. ಮನಸ್ಸು ಮಾಡಿಲ್ಲ. ಅದಕ್ಕೆ ಸಂಪೂರ್ಣವಾದ ಜವಾಬ್ದಾರಿ ಹೊತ್ತುಕೊಳ್ಳಬೇಕಾಗುತ್ತದೆ. ಸ್ವಾಮಿ ಒಂದಲ್ಲ, ಅನೇಕ ತಪ್ಪುಗಳನ್ನು ಅವರು ಮಾಡಿದ್ದಾರೆ. ತಮಿಳು ನಾಡಿನವರು ಏನು ನೋಟಿಫಿಕೇಷನ್ ಕೇಂದ್ರಸರ್ಕಾರಕ್ಕೆ ಡ್ರಾಫ್ಟ್ ಮಾಡಿ ಕೊಟ್ಟಿದ್ದಾರೆಂದು ನಾನು ಏಕೆ ಹೇಳುತ್ತಾ ಇದ್ದೇನೆ ಎಂದರೆ, ಇದಕ್ಕೆ ಸಂಪೂರ್ಣವಾದ ಕೈವಾಡ ಮತ್ತು ಮನ್ನಣೆ ಕೇಂದ್ರಸರ್ಕಾರದವರು ಕೊಟ್ಟಿದ್ದಾರೆ. ಅದಕ್ಕೆ ನೀವು ಕೂಡ ಮನ್ನಣೆ ಕೊಟ್ಟಿದ್ದೀರಿ. ಅದಕ್ಕಾಗಿ ನೀವು ಹೊಣೆಗಾರರು. ನಿಜವಾಗಿಯೂ ನೋಡಿದರೆ ಇವತ್ತಿನ ದಿವಸ ಎಲ್ಲಕ್ಕಿಂತಲೂ ಹೆಚ್ಚಿನ ಪಶ್ಚಾತ್ತಾಪ ಪಟ್ಟು ನೀವು ರಾಜೀನಾಮೆ ಕೊಡಬೇಕಾಗಿತ್ತು. ಅವರೇ. ಯಾವ ಕಾವೇರಿ ಭಾಗದಿಂದ ತಾವು ಬರುತ್ತಾ ಇದ್ದೀರಿ, ನನ್ನ ಕಾಲದಲ್ಲಿ ಈ ಅಡ್ವೊಕೇಟ್ ಕನ್‌ಸೆಂಟ್ ಕೊಟ್ಟಿದ್ದಾನೆ, ಇಂತಹ ಅನ್ಯಾಯ ಆಯಿತಲ್ಲ ಎಂದು ನಾಗೇಗೌಡರು ಮೊದಲು ರಾಜೀನಾಮೆ ಕೊಡಬೇಕಾಗಿತ್ತು. ನಿಜವಾದ ಕಳಕಳಿ ನಿಮಗೆ ಇದ್ದರೆ, ಹೀಗೆ ಏಕೆ ಮಾಡಿದ್ದೀರಾ ಅಂತ ಹೇಳಿ ಅವರು ರಾಜೀನಾಮೆ ಕೊಡಬೇಕಾಗಿತ್ತು. ಆದರೆ ಏನು ಮಾಡುತ್ತೀರಿ, ಆಗ ದೇವೇಗೌಡರ ವಿರುದ್ಧ ಪ್ರೊಟೆಸ್ಟ್ ಮಾಡೋ ಧೈರ್ಯನೂ ಇಲ್ಲ, ಈಗ ಜೆ.ಹೆಚ್. ಪಟೇಲ್ ಅವರ ವಿರುದ್ಧ ಹೇಳುವ ಧೈರ್ಯನೂ ಇನ್ನೂ ಬಂದಿಲ್ಲ, ಏಕೆಂದರೆ ನಾವು ಕಾದು ನೋಡುತ್ತಾ ಇದ್ದೇವೆ. ಮುಂದೆ ಬರುತ್ತದೇನೋ ಕಾದು ನೋಡೋಣ. ಸಾರ್ವಜನಿಕರು ಹೇಗೆ ಅಭಿಪ್ರಾಯ ಪಡುತ್ತಾರೋ ಹಾಗೆಯೇ ನಾವು ಅನೇಕ ಶಾಸಕರುಗಳ ಅಭಿಪ್ರಾಯಗಳನ್ನು ಕೇಳುತ್ತಿದ್ದೇವೆ. ಇದಾದ ನಂತರ ಯಾವ್ಯಾವ ರೂಪಕ್ಕೆ ಬರುತ್ತದೆಯೇ ನೋಡೋಣ. ಆದರೆ, ಒಂದು ವಿಚಾರವೇನೆಂದರೆ, ಇವೊತ್ತು ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರಾದ ನಾಗೇಗೌಡರು ನಿಜವಾಗಿಯೂ ಲೀಡ್ ತೆಗೆದುಕೊಳ್ಳಬೇಕಾಗಿತ್ತು. ಬಳಿಕ ಇದನ್ನು ಪ್ರತಿಭಟಿಸಿ 'ಇದಕ್ಕೆ ನಾನು ಒಪ್ಪುವುದಿಲ್ಲ' ವೆಂದು ಹೇಳಬೇಕಾಗಿತ್ತು. ಏಕೆಂದರೆ, ಅವರಿಗೆ ಆ ಕುರ್ಚಿ ಬೇಕಾಗಿತ್ತಲ್ಲ, ಅದಕ್ಕೋಸ್ಕರ ಅವರು ಲೀಡ್ ತೆಗೆದುಕೊಂಡರು. ಕನಿಷ್ಠ ಇವರಿಗಾದರೂ ತನ್ನ ಒಂದು ಭಾಗದ ಅಥವಾ ರಾಜ್ಯದ ಹಿತ ಕಾಪಾಡುವುದಕ್ಕೋಸ್ಕರ ಇವೊತ್ತಿನ ದಿವಸ ಅವರು ಒಂದು ಸ್ಟೆಪ್ ತೆಗೆದುಕೊಂಡು ಯಾವ ದಿವಸ ನೋಟಿಫಿಕೇಷನ್ ಇಶ್ಯೂ ಆಗಿತ್ತೋ ಅದೇ ದಿವಸ ರಾಜೀನಾಮೆಯನ್ನು ಇವರು ಕೊಡಬೇಕಾಗಿತ್ತು. ಆದರೆ, ಇವರು ಎಷ್ಟು ಬಿಗಿಯಾಗಿ ಕುಳಿತಿದ್ದರೋ ಅವರು ಅಷ್ಟೇ ಬಿಗಿಯಾಗಿ ಕುಳಿತಿದ್ದಾರೆ. ನೀವೇನೇ ಹೇಳಿ, ನೀವೇನೇ ಕೇಳಿ, ನಾನು ಕೂರುವುದೇ ಗಟ್ಟಿ, ನೀವು ಹೇಳುವುದೆಲ್ಲಾ ಹೇಳಿಕೊಂಡು ಹೋಗಿ ಎನ್ನುವುದು ಅವರ ಮನೋಭಾವವಿದ್ದಂತೆ ತೋರುತ್ತದೆ. ಅದಕ್ಕೋಸ್ಕರ ಇವೊತ್ತು ಪುನಃ ನಾನು ತಮ್ಮ ಮುಖಾಂತರ ಕೇಳುತ್ತೇನೆ. ಇದನ್ನು ಯಾವತ್ತೂ ಕೂಡ ಒಪ್ಪಬಾರದು ಮತ್ತು ಇದರಲ್ಲಿ ಅನೇಕ

ದೋಷಗಳೇನಿವೆ, ಅದನ್ನು ಬಹಿರಂಗಪಡಿಸಬೇಕು. ಏಕೆ ನಿಮ್ಮ ವಕೀಲರು ಇದನ್ನು ಒಪ್ಪಿಕೊಂಡರು? ನೀವೇಕೇ ಸುಮ್ಮನೆ ಕುಳಿತುಕೊಂಡಿರಿ? ಎನ್ನುವುದು ತಿಳಿಯಬೇಕು. ನಿಯೋಗದಲ್ಲಿ ನಮ್ಮೆಲ್ಲರನ್ನೂ ದೆಹಲಿಗೆ ಕರೆದುಕೊಂಡು ಹೋದಿರಿ. ನಿಯೋಗ ಹೋಗಿ ಬಂದ ನಂತರ ಮುಂದೆ ಏನೇನು ಬೆಳವಣಿಗೆಗಳಾದವು? ಅದು ಯಾವ ಹಂತಕ್ಕೆ ಬಂತು? ಕೇಂದ್ರ ಸರ್ಕಾದವರೇನಾದರೂ ನೋಟಿಫಿಕೇಶನ್‌ಅನ್ನು ವಿತ್‌ಡ್ರಾ ಮಾಡಿಕೊಳ್ಳುತ್ತಿದ್ದಾರೆಯೇ? ಇದರ ಬಗ್ಗೆ ನಮ್ಮ ರಾಜ್ಯದ ಎಂ.ಪಿ. ಗಳೆಲ್ಲರೂ ಏಕೆ ಒತ್ತಾಯ ತರಲಿಲ್ಲವೆಂದು ಕೇಳುತ್ತೇನೆ. ಈ ವಿಷಯ ನಾಳೆ ಪಾರ್ಲಿಮೆಂಟ್‌ನಲ್ಲಿ ಕೂಡ ಬರುತ್ತದೆ. ಈ ಕೆಲಸಗಳನ್ನು ಅವರು ಮಾಡಿಲ್ಲ. ಅದಕ್ಕೋಸ್ಕರ ಕೆಲವು ವಿಚಾರಗಳನ್ನು ಇನ್ನೂ ಪ್ರಸ್ತಾಪಿಸಬೇಕಾಗಿದೆ. ಇದರ ಬಗ್ಗೆ ಚರ್ಚಿಸಲು ಎಲ್ಲಾ ಸದಸ್ಯರುಗಳಿಗೂ ತಾವು ಅವಕಾಶ ಕಲ್ಪಿಸಿಕೊಡುತ್ತೀರೆಂದು ತಿಳಿಯುತ್ತಾ ಇಷ್ಟು ಮಾತ್ರ ಈ ಸಂದರ್ಭದಲ್ಲಿ ಪ್ರಸ್ತಾಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಎನ್. ನಂಜೇಗೌಡ (ಬಸವನಗುಡಿ) : ಸನ್ಮಾನ್ಯ ಉಪಾಧ್ಯಕ್ಷರೆ, ಈ ಸಮಸ್ಯೆ ಕುರಿತು ಇದೇ ಸದನದಲ್ಲಿ ಬೇಕಾದಷ್ಟು ಬಾರಿ ಚರ್ಚೆಯಾಯಿತು. ಕೊನೆಗೆ ಯಾವ ಘಟ್ಟಕ್ಕೆ ತಲುಪಿದ್ದೇವೆಂದರೆ ಕೋರ್ಟು, ಕೇಂದ್ರ ಸರ್ಕಾರ ಸಮಸ್ಯೆಗಳನ್ನು ಗೋಜಲು ಮಾಡಿದೆ, ನಮಗೆ ಇದು ಕಗ್ಗಂಟಾಗಿದೆ. ನಮ್ಮ ರಾಷ್ಟ್ರದಲ್ಲಿ ಸಮಸ್ಯೆಯೇನೆಂದ್ರರೆ, Judges refuse to understand certain things. ಶೇರಿಂಗ್ ಎಂದರೇನು? ಡ್ಯಾಮ್ ಕಟ್ಟಿದ ನಂತರ ಹೊರಗಡೆ ಬಂದಿದ್ದು. 100% water was used by lower riparian States. ಶೇರಿಂಗ್ ಎಂದರೆ ಅವರು ಯೂಸ್ ಮಾಡಿದರೆ ಕಡಿಮೆಯಾಗಲೇಬೇಕು. This is the fundamental principle of sharing ಇದನ್ನು ಜಡ್ಜ್‌ಗಳು ಅರ್ಥ ಮಾಡಿಕೊಳ್ಳುವುದಿಲ್ಲ, ನಮ್ಮ ಲಾಯರುಗಳು ಅರ್ಥ ಮಾಡಿಸಲು ಪ್ರಯತ್ನ ಮಾಡುವುದಿಲ್ಲ. ಶೇರಿಂಗ್ ಬಗ್ಗೆ ನಾವು ಅನೇಕ ಸಲ ಪ್ರಸ್ತಾಪಿಸಿದ್ದೇವೆ. ನ್ಯಾಷನಲ್ ವಾಟರ್ ಪಾಲಿಸಿಯಲ್ಲಿ ಏನೇನು ಆಗಬೇಕು, ಮದ್ರಾಸ್‌ನವರಿಗೆ ಎಷ್ಟು ಪ್ರಮಾಣದ ನೀರು ಕೊಡಬೇಕು ಎಂದು ಅಸೆಸ್ ಮಾಡುವುದಕ್ಕೆ ಒಂದು ಟಿಎಂಸಿಎಫ್‌ಟಿಗೆ ಎಷ್ಟು ಎಕರೆ, ಇಷ್ಟು ಕ್ವಾಂಟಿಟಿಯಷ್ಟು ನೀರು ಇಂತಹ ಡಿಪೆಂಡಬಲಿಟಿಗೆ ಅಳೆಯುವುದಕ್ಕೆಂದು ನಮ್ಮ ಬಳಿ ಸ್ಟ್ಯಾಚುಟರಿ ಗೈಡ್‌ಲೈನ್ಸ್ ಇಲ್ಲ. ಅಲ್ಲದೆ ಒಂದು ಬೆಳೆಗೆ ಪ್ರಾಮುಖ್ಯತೆ ಕೊಡಬೇಕೋ, ಅಥವಾ ಮೂರು ಬೆಳೆಗೆ ನೀರು ಕೊಡಬೇಕೋ ಎನ್ನುವುದರ ಬಗ್ಗೆಯೂ ಗೈಡ್‌ಲೈನ್ಸ್ ಇಲ್ಲ. ಇದರ ಬಗ್ಗೆ ಅನೇಕ ರೀತಿಯಲ್ಲಿ ಪದೇ ಪದೇ ನಾವು ಹೇಳಿದ್ದೇವೆ. ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡುತ್ತಾ ಒಂದು ಮಾತನ್ನು ಹೇಳಿದರು. ಏನೆಂದರೆ, 1924 ರಲ್ಲಿದ್ದಂಥ ಪರಿಸ್ಥಿತಿಗೂ ಈಗಿನ ಪರಿಸ್ಥಿತಿಗೂ ವ್ಯತ್ಯಾಸವಿಲ್ಲವೆಂದು. ಇದನ್ನು ನಾನು ಒಪ್ಪುವುದಿಲ್ಲ. 1924 ರಲ್ಲಿದ್ದಕ್ಕಿಂತಲೂ ಈಗಿನ ಪರಿಸ್ಥಿತಿ ವರ್ಸ್ಟ್ ಆಗುತ್ತದೆ. 1924 ರಲ್ಲಿ ಏನು ಪರಿಸ್ಥಿತಿ ಇತ್ತೆಂದರೆ ಅವರು ಎಲ್ಲಾ ಪ್ರಾಜೆಕ್ಟ್‌ಗಳಿಗೂ ಬಂದು ಫೀಲ್ಡ್ ಆರ್ಗನೈಜೇಶನ್ ಮಾಡಿ ಸೂಪರ್‌ವೈಸ್ ಮಾಡುವುದಕ್ಕೆ ಪುರುಸೊತ್ತು ಇರಲಿಲ್ಲ. ಈಗ ಎಲ್ಲಾ ಕಡೆಗಳಿಗೂ ಬರತಕ್ಕಂಥ ಅವಕಾಶವಿದೆ. ಈಗಿನ ಪರಿಸ್ಥಿತಿ ನೋಡಿದರೆ, ನಾವು ಕತ್ತರಿಯ ಮಧ್ಯೆ ಸಿಲುಕಿಕೊಂಡ ಅಡಕೆಯಂತಾಗಿದ್ದೇವೆ. ಪರಿಹಾರ ಸಿಗುತ್ತದೆಯೆ ಎಂದರೆ ರಾಜಕೀಯ ಇಚ್ಛಾಶಕ್ತಿ ಇಟ್ಟುಕೊಂಡು ಸಮಸ್ಯೆ ಬಗೆಹರಿಸುವ ತಾಕತ್ತು

ಪ್ರಧಾನಮಂತ್ರಿಯಾವರಿಗಿಲ್ಲ. ಹಿಂದೆ ಪ್ರಧಾನಿಯಾಗಿದ್ದ ದೇವೇಗೌಡರಿಗೆ ಆ ತಾಕತ್ತು ಇಲ್ಲದೇ ಹೋಯಿತು, ಇನ್ನು ಈಗಿನ ಪ್ರಧಾನಿಗಳಾದ ಗುಜ್ರಾಲ್‌ರವರಿಗೆ ಆ ತಾಕತ್ತು ಎಲ್ಲಿಂದ ಬರುತ್ತದೆ? ಗ್ರಹಚಾರಕ್ಕೆ ಎಂ.ಪಿ.ಗಳು ಇಲ್ಲವೇ? ಲೋಕಸಭೆಗೆ ಕರ್ನಾಟಕ ರಾಜ್ಯದಿಂದ ಆಯ್ಕೆಯಾಗಿ ಹೋಗಿರುವ ಸಂಸತ್ ಸದಸ್ಯರುಗಳು ಜನತಾ ದಳದವರೇ ಆಗಿದ್ದು ಇವರುಗಳು ಹೆಚ್ಚು - ಕಡಮೆ ತಮ್ಮ ಪ್ರಧಾನ ಮಂತ್ರಿಗಳನ್ನು ಟಾಲ್‌ರೇಟ್ ಮಾಡಿಕೊಳ್ಳಾಬಹುದು. ಆದರೆ, ತಮಿಳು ಮನಿಲಾ ಕಾಂಗ್ರೆಸ್ ಹೇಗೆ ಟಾಲ್‌ರೇಟ್ ಮಾಡೀತು? ಡಿ.ಎಂ.ಕೆ ಪಕ್ಷ ಹೇಗೆ ಟಾಲ್‌ರೇಟ್ ಮಾಡೀತು? ಅವರುಗಳನ್ನು ತೃಪ್ತಿಪಡಿಸಲೇಬೇಕಾಗಿದೆ. ಅವರಿಗೋಸ್ಕರ ಪ್ರಿಯೆಮ್ಟ್ ಮಾಡಿ ಏನಾದರೂ ಮಾಡಬಹುದೆಂಬ ಭಾವನೆ ಕೇಂದ್ರ ಸರ್ಕಾರಕ್ಕೆ ಬರಬಹುದೆನ್ನುವ ಅನುಮಾನ ನನಗಿದೆ. ಏಕೆಂದರೆ, ನಾವೇನೇ ಹೇಳಿದರೂ ಮಾಡುವವರು ಅವರೇ ಅಲ್ಲವೆ? ಅನಂತರ ಕೇಂದ್ರ ಸರ್ಕಾರದ ಮಂತ್ರಿಮಂಡಲದಲ್ಲಿ ನಮ್ಮ ರಾಜ್ಯದ ಮೂವರು ಕ್ಯಾಬಿನೆಟ್‌ನಲ್ಲಿದ್ದು ಪ್ರಧಾನಮಂತ್ರಿಗಳು ನಮ್ಮವರೇ ಆಗಿದ್ದರು. ಈಗ ಮೂರು ಜನ ಕ್ಯಾಬಿನೆಟ್ ಮಂತ್ರಿಗಳು ಯಾರ್‍ಯಾರಿದ್ದಾರೋ ಅವರುಗಳು ಕಾವೇರಿ ನದಿ ನೀರಿನ ವಿಚಾರದಲ್ಲಿ ತಮಗೆ ಶ್ರದ್ಧೆ ಆಸಕ್ತಿ ಇದೆಯೆಂದು ತೋರಿಸಿದ ಸಂದರ್ಭ ಒಂದೂ ಇಲ್ಲ. ಅವರುಗಳು ತಮ್ಮ ಪಾಡಿಗೆ ರಾಜಕೀಯ ಮಾಡಿಕೊಂಡಿದ್ದು, ರಾಜ್ಯದ ಹಿತ ಯಾರಿಗೂ ಬೇಕಾಗಿಲ್ಲ ಎನ್ನುವಂಥ ಮಟ್ಟದಲ್ಲಿರುವುದು ಈಗ ಕಂಡುಬಂದಿರುವಂಥ ವಿಚಾರವಾಗಿದೆ. ಜೊತೆಗೆ ನಮ್ಮ ರಾಜ್ಯದ ಸಂಸತ್ ಸದಸ್ಯರುಗಳು ಚುರುಕಾಗಿಲ್ಲ. ಬಹುಶಃ ಸರ್ಕಾರದವರೇನಾದರೂ ಸಂಸತ್ ಸದಸ್ಯರುಗಳನ್ನು ಕರೆದು ಪದೇ ಪದೇ ಅವರಿಗೆ ಬ್ರೀಫ್ ಮಾಡಿದ್ದಾರೋ? ಇಲ್ಲವೋ? ಗೊತ್ತಿಲ್ಲ, ಇದನ್ನು ಮಾಡಬೇಕಾಗಿತ್ತು, ಇದು ಒಂದೆಡೆ ಇರಲಿ. ಆದರೆ, ತಮಿಳುನಾಡಿನಲ್ಲಿ ಈ ವಿಚಾರದಲ್ಲಿ ಎರಡು ತರಹದ ನಿಲುವುಗಳಿವೆ. ಕಾವೇರಿ ನದಿ ನೀರಿನ ವಿಚಾರವಾಗಿ ಅವರೊಂದಿಗೆ ಮಾತುಕತೆಗೆ ಹೋದಾಗ ಅಲ್ಲಿನ ತಜ್ಞರ ಜೊತೆ ನಾನೂ ಸಹ ಮಾತನಾಡಿದೆ. ನಾವೇನು ಹೇಳಿದೆವು ಎಂದರೆ, ನೋಡಿ, ಬೌಂಡ್ರಿ ಮತ್ತು ಡಿಸ್‌ಟ್ರೆಸ್ ಇವೆರಡನ್ನೂ ಹಂಚಿಕೊಳ್ಳಬೇಕಾಗಿದೆ, ನಮ್ಮ ಇನ್‌ಫ್ಲೋಸ್ ಎಲ್ಲವೂ ರೆಕಾರ್ಡ್ ಆಗುತ್ತದೆ, ನಮ್ಮ ರಿಸರ್‌ವಾಯರ್‌ಗೆ ಅಥವಾ ರಿಸರ್‌ವಾಯರ್ ಕೆಳಗಡೆ ಇರುವ ಇನ್‌ಫ್ಲೋಸ್ ಎಲ್ಲವೂ ರೆಕಾರ್ಡ್ ಆಗುತ್ತದೆ, ನಾವು ಆ ಇನ್‌ಫ್ಲೋಸ್ ಅನ್ನು ನೋಡಿದ್ದು, ನಿಮಗೆ ಬೌಂಡರಿಯಲ್ಲಿ ಔಟ್ ಫ್ಲೋ ಪರ್ಸೆಂಟೇಜ್‌ವೈಸ್ ನೀರನ್ನು ಬಿಟ್ಟು ಬಿಡಬೇಕು. ಎನ್ನುವ ವಿಚಾರವಾಗಿ ನಾವು ಪ್ರಸ್ತಾಪ ಮಾಡಿದ್ದೆವು. ಇದನ್ನು ಅಲ್ಲಿನ ತಜ್ಞರು ಒಪ್ಪಿಕೊಂಡಿದ್ದರು. ನಮ್ಮ ರಾಜ್ಯದಿಂದ ಅಧಿಕೃತವಾಗಿ ಹೋಗಿದ್ದಂಥ ತಜ್ಞರು ಮತ್ತು ಅಲ್ಲಿನ ಅಧಿಕೃತ ತಜ್ಞರೆಲ್ಲರೂ ಕುಳಿತುಕೊಂಡು ಮಾತನಾಡುವಾಗ ಒಂದು ಒಪ್ಪಂದಕ್ಕೆ ಬರುವಂಥ ಮಟ್ಟ ತಲುಪಿತ್ತು. ಕೊನೆಯ ಗಳಿಗೆಯಲ್ಲಿ ಏನಾಯಿತೆಂದರೆ, ಇದ್ದಕ್ಕಿದ್ದಂತೆ ಕರುಣಾನಿಧಿಯವರು ಕೈಕೊಟ್ಟರು. ಅದಕ್ಕೆ ಅವರ ರಾಜಕೀಯದ ಕಾರಣವೇ ಬೇರೆ, ಅಲ್ಲಿನ ತಜ್ಞರ ಅಭಿಪ್ರಾಯವೇ ಬೇರೆ. ಆದರೆ, ನಮ್ಮ ರಾಜ್ಯದ ತಜ್ಞರ, ಸರ್ಕಾರದ ರಾಜಕಾರಣಿಗಳ ಅಭಿಪ್ರಾಯ ಒಂದೇ ಇರುತ್ತದೆ. ಆ ರಾಜ್ಯದಲ್ಲಿ ಈ ರೀತಿ ಇರದೇ ಅಲ್ಲಿನ ತಜ್ಞರಿಗೆ ಕನ್‌ವಿನ್ಸ್ ಆದರೂ ಅದನ್ನು ಒಪ್ಪುವಂಥ ಪರಿಸ್ಥಿತಿ ಆ ರಾಜ್ಯದಲ್ಲಿಲ್ಲ. ಇಲ್ಲಿ ಇನ್ನೊಂದು ಸಂಗತಿ ಏನಾಗಿದೆಯೆಂದರೆ, ಮಾನ್ಯ ಮಂತ್ರಿಗಳು ಹೇಳಬೇಕು; ಮಧ್ಯಂತರ ಆದೇಶ ಬಂದನಂತರ ನನಗೆ ಗೊತ್ತಿರುವಂತೆ ಎರಡು ವರ್ಷ ಬಿಟ್ಟರೆ ಒಂದು ವರ್ಷ 195 ಟಿಎಂಸಿಯಷ್ಟು ಬಿಟ್ಟರೆ, ಇನ್ನೊಂದು

ವರ್ಷ 198 ಟಿಎಂಸಿ ನೀರು ಬಿಟ್ಟು, ಉಳಿದ ವರ್ಷಗಳಲ್ಲಿ 225 ಟಿಎಂಸಿ, 242 ಟಿಎಂಸಿ ಮತ್ತು 250 ಟಿಎಂಸಿ ನೀರು ಬಿಟ್ಟ ಭಂಡರು ಎಂದು ದೇಶದಲ್ಲಿ ಬೋರ್ಡ್ ಹಾಕಿಕೊಳ್ಳಬೇಕು ಏಕೆ? ಇಂತಿಷ್ಟು ಪ್ರಮಾಣದ ನೀರು ಬಿಡುಗಡೆ ಮಾಡಿದ್ದೇವೆಂದು ಕೋರ್ಟಿಗೆ ಮಾಹಿತಿ ಕೊಡುತ್ತೀರಿ? ಟ್ರಿಬ್ಯೂನಲ್‌ಗೆ ಮಾಹಿತಿ ಕೊಡುತ್ತೀರಿ, ತಮಿಳುನಾಡಿಗೆ ಇಷ್ಟು ಪ್ರಮಾಣದಲ್ಲಿ ನೀರು ಬಿಟ್ಟಿದ್ದೇವೆಂದು ಧೈರ್ಯವಾಗಿ ನಮ್ಮ ನಾಡಿನ ಜನರಿಗೆ ಏಕೆ ನಿಜ ಹೇಳುವುದಿಲ್ಲ? ಸರಿಯಾದ ಕಾರಣಕ್ಕೆ ನೀರು ಬಿಟ್ಟಿದ್ದರೆ ಬಿಟ್ಟಿದ್ದೇವೆಂದು ಹೇಳುವ ಧೈರ್ಯ ಸರ್ಕಾರ ಮಾಡಬೇಕಾಗುತ್ತದೆ. ನಾನು ಹೆಚ್ಚು ಮಾತನಾಡದೆ ಮೂರು ಸಲಹೆಗಳನ್ನು ಕೊಡುತ್ತೇನೆ. ಸರ್ಕಾರ ಯಾವ ರೀತಿಯ ಸಾಧನೆ ಮಾಡುತ್ತದೆಯೋ ಗೊತ್ತಿಲ್ಲ. ನೀವು ಸಾಧಿಸಬೇಕಾಗಿರುವುದು ಮೂರು ವಿಚಾರಗಳು. ಮೊದಲನೆಯದಾಗಿ, ಇದಕ್ಕಾಗಿ ಪ್ರಾಧಿಕಾರ ರಚಿಸಬಾರದು. ರಚಿಸಿದರೆ ರಾಷ್ಟ್ರದಲ್ಲಿ ಇದೊಂದು ಕೆಟ್ಟ ಸಂಪ್ರದಾಯವಾಗುತ್ತದೆ. ರಾಜ್ಯದಿಂದ ರಾಜ್ಯಕ್ಕೆ ಬಂದು ಕಾವೇರಿ ಜಲಾನಯನ ಪ್ರದೇಶದಲ್ಲಿರುವ ನಮ್ಮ ಎಲ್ಲಾ ಪ್ರಾಜೆಕ್ಟ್‌ಗಳನ್ನೂ ನಾವೇ ಸೂಪರ್ ವೈಸ್ ಮಾಡಿಕೊಂಡು ಹೋಗಬಹುದು. ಈ ಪ್ರಾಧಿಕಾರವನ್ನು ಎಲ್ಲಿಯೇ ಮಾಡಲಿ, ಇದು ಒಂದು ರೈಪೇರಿಯನ್ ಸ್ಟೇಟ್‌ಗೆ ಮೂಗುದಾರ ಹಾಕುವುದಕ್ಕೆ ಮಾಡುವುದೇ ವಿನ: ಕೆಳಗಡೆ ಇರುವವರಿಗಲ್ಲ, ಇದರ ಪ್ರಯೋಜನವಿರುವುದು ರೈಪೇರಿಯನ್ ಸ್ಟೇಟ್‌ಗೆ. In principle we have to oppose, as a policy we have to oppose. ಅದ್ಯಾವ ರೀತಿ ಸಾಧ್ಯ ಮಾಡುತ್ತಾರೋ ಗೊತ್ತಿಲ್ಲ. ರಾಷ್ಟ್ರದಲ್ಲಿ ಇದು ಎಲ್ಲಿಯೂ ಆಗಬಾರದು. ಮತ್ತೇನು ಆಗಬೇಕಾಗುತ್ತದೆಂದರೆ, ಬೌಂಡರಿಯಲ್ಲಿ ಎಷ್ಟು ಬಿಡಬೇಕಾಗುತ್ತದೋ ಅಷ್ಟನ್ನು ಬೌಂಡರಿಯಲ್ಲಿ ಹಾಕಿಕೊಳ್ಳಲಿ. They should not meddle with our projects or with our area. ಏನೇ ಇದ್ದರೂ ಬೌಂಡರಿ ಇರುತ್ತದೆ, ಬೌಂಡರಿಯಲ್ಲಿ ಬೇಕಾದರೆ ಅವರು ಇಟ್ಟುಕೊಳ್ಳಲಿ, ಕೇಂದ್ರ ಸರ್ಕಾರದವರು ಇಟ್ಟುಕೊಳ್ಳಲಿ ಅಥವಾ ಜಂಟಿಯಾಗಿ ಆ ರಾಜ್ಯ ಸರ್ಕಾರ ಈ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಎಲ್ಲಾ ಸೇರಬೇಕಾದರೂ ಇಷ್ಟು ನೀರು ಬಿಟ್ಟರು. ಈಗ ಕೆ.ಆರ್.ಎಸ್ ಗೆ 1ನೇ ತಾರೀಖಿನಂದು ಇಂತಿಷ್ಟು ಪ್ರಮಾಣದಲ್ಲಿ ನೀರು ಬರುತ್ತದೆಂದು ಇಟ್ಟುಕೊಳ್ಳೋಣ, ಅದು ಗಡಿ ತಲುಪಬೇಕಾದರೆ 48-50 ಗಂಟೆಗಳು ಬೇಕಾಗುತ್ತದೆ. ಎರಡು ದಿವಸ ಬಿಟ್ಟು ಅದರ ಪರ್ಸೆಂಟೇಜ್ ಬಿಡಿ. ಉದಾಹರಣೆಗೆ, ಈಗ ಶೇಕಡ 30ರಷ್ಟು ಕೊಡುವುದಕ್ಕೆ ಒಪ್ಪಿಕೊಳ್ಳುತ್ತೇವೆಂದು ಇಟ್ಟುಕೊಳ್ಳೋಣ. ಒಂದು ಲಕ್ಷ ಕ್ಯೂಸೆಕ್ಸ್‌ನಷ್ಟು ನೀರು ಬಂದರೆ 36 ಕ್ಯೂಸೆಕ್ಸ್‌ನಷ್ಟು ನೀರು ಕೊಡೋಣ, ಅದೇ ರೀತಿ 100 ಕ್ಯೂಸೆಕ್ಸ್‌ನಷ್ಟು ನೀರು ಬಂದರೆ 30 ಕ್ಯೂಸೆಕ್ಸ್ ನೀರು ಕೊಡೋಣ. ಒಟ್ಟಿನಲ್ಲಿ ಇನ್ ಪ್ರಿನ್ಸಿಪಲ್ ಪರ್ಸೆಂಟೇಜ್ ಶೇರಿಂಗ್ ಆಗಬೇಕು, ಅದು ಬೌಂಡರಿಯಲ್ಲಿ ಆಗಬೇಕು, ಯಾವುದು ಸಾಧ್ಯವಾಗುತ್ತದೆಯೋ ನೋಡಿ. ನಾನು ಮೊದಲೇ ಹೇಳಿದಂತೆ 250ರಷ್ಟು ಪ್ರಮಾಣದಲ್ಲಿ ಬಿಡಬೇಕೆಂದಿದ್ದರೂ ಕೂಡ ಅನಿವಾರ್ಯವಾಗಿ 250-260 ಪ್ರಮಾಣದಷ್ಟು ನೀರು ಹೋಗಿದೆ, ಈ ವರ್ಷ ಇನ್ನೂ ಜಾಸ್ತಿ ಪ್ರಮಾಣದಲ್ಲಿ ಹೋಗುವ ತರಹ ಕಾಣುತ್ತದೆ ಏಕೆ? ಸರ್‌ಪ್ಲಸ್ ಅನ್ನು ನಾವು ಅಕೌಂಟ್ ಮಾಡಿಕೊಳ್ಳುವಂತಿಲ್ಲ, ಡಿಫಿಸಿಟ್ ಇದ್ದರೆ ಬಿಡಬೇಕು. ಈಗ ನದಿಯಲ್ಲಿ ನೀರು ಬಂದಿರುವುದರಿಂದ ನೀವು ತಡೆದಿಟ್ಟುಕೊಳ್ಳುವುದಕ್ಕಾಗುವುದಿಲ್ಲ. You have to allow 15 Cusecs downstream, whether you want it or not. ಅದಕ್ಕೆ ಏನು

ಮಾಡಬೇಕೆಂದರೆ, ಮೇಕೆದಾಟುವಿನಲ್ಲಿ ಬ್ಯಾಲೆನ್ಸಿಂಗ್ ರಿಸರ್‌ವಾಯರ್ ಆಗಲೇಬೇಕು. ಅಂದರೆ, ನಾನು ಕೊಡತಕ್ಕಂಥ ಸಲಹೆಗಳು ಮೂರು ಇದ್ದು, ಇವುಗಳನ್ನು ಸಾಧಿಸಬೇಕಾಗಿರುವುದು ಸರ್ಕಾರವಾಗಿದ್ದು, ಈ ದಿಸೆಯಲ್ಲಿ ನೀವು ಯಾರನ್ನೂ ಉಪಯೋಗಿಸಿಕೊಳ್ಳುತ್ತೀರೋ? ದೇವೇಗೌಡರನ್ನು ಉಪಯೋಗಿಸಿಕೊಳ್ಳುತ್ತೀರೋ? ಗುಜ್ರಾಲ್‌ರವರನ್ನು ಉಪಯೋಗಿಸಿಕೊಳ್ಳುತ್ತೀರೋ? ಇಲ್ಲವೇ ಕೇಂದ್ರ ಸರ್ಕಾರದ ಕ್ಯಾಬಿನೆಟ್‌ನಲ್ಲಿ ನಿದ್ರೆ ಮಾಡುತ್ತಿರುವ ನಿಮ್ಮ ಮಂತ್ರಿಗಳನ್ನು ಎಚ್ಚರ ಮಾಡಿಸುತ್ತೀರೋ ನನಗೆ ಗೊತ್ತಿಲ್ಲ. ಪ್ರಾಧಿಕಾರ ಆಗಲೇಕೂಡದು. ನೀರು ಬಿಡುವ ಕಾರ್ಯ ಬೌಂಡರಿಯಲ್ಲಿ ಆಗಬೇಕು, ಬಿಡುವ ನೀರು ಶೇಕಡಾವಾರು ಹಂಚಿಕೆಯಾಗಬೇಕು. ನಮ್ಮ ಪ್ರಾಜೆಕ್ಟ್‌ನಲ್ಲಿ ನಾವು ಎಷ್ಟಾದರೂ ಇಟ್ಟುಕೊಳ್ಳುತ್ತೇವೆ, ಎಷ್ಟಾದರೂ ಬಿಟ್ಟುಕೊಳ್ಳುತ್ತೇವೆ, ನಮ್ಮ ಜಮೀನಿನಲ್ಲಿ ನಾವು ಎಷ್ಟಾದರೂ ಬೆಳೆದುಕೊಳ್ಳುತ್ತೇವೆ, ಬೇಕಾದರೆ ಪಾಳು ಬಿಡುತ್ತೇವೆ ಇದು ಅವರಿಗೆ ಸಂಬಂಧಪಟ್ಟಿದ್ದಲ್ಲ. ಮೇಕೆದಾಟುವಿನಲ್ಲಿ ಬ್ಯಾಲೆನ್ಸಿಂಗ್ ರಿಸರ್‌ವಾಯರ್ ಆಗಲೇಬೇಕು, ಜೊತೆಗೆ ವಿದ್ಯುತ್ ಉತ್ಪಾದನೆ. ಈ ಮೂರನ್ನು ಯಾವ ರೀತಿ ಸಾಧ್ಯ ಮಾಡುತ್ತೀರೋ ಮಾಡಿ, ಇಷ್ಟನ್ನು ಹೇಳಿ ಹೆಚ್ಚಿಗೆ ಇನ್ನೇನೂ ಹೇಳದೆ ನನ್ನ ಮಾತುಗಳನ್ನು ಮುಗಿಸುತ್ತೇನೆ.

12.30 ಪಿ.ಎಂ

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಉಪಾಧ್ಯಕ್ಷರೆ, ಕಾವೇರಿ ನ್ಯಾಯ ಮಂಡಳಿಯ ರಚನೆಯನ್ನು ನಾನು ಮೊದಲಿನಿಂದಲೂ ವಿರೋಧ ಮಾಡಿಕೊಂಡು ಬಂದಿದ್ದೇನೆ. ಈ ಸದನದಲ್ಲಿ ಕಾವೇರಿ ನ್ಯಾಯ ಮಂಡಳಿಯ ರಚನೆಯ ಬಗ್ಗೆ ಮಾನ್ಯ ವೀರೇಂದ್ರಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ನಿರ್ಣಯವನ್ನು ಮಂಡಿಸಿದಾಗ ನಾನು ಅದನ್ನು ಸ್ಪಷ್ಟವಾಗಿ ವಿರೋಧ ಮಾಡಿದೆ. ಅಲ್ಲಿಂದ ಇಲ್ಲಿಯವರೆಗೂ ನನ್ನ ಆ ನಿಲುವಿನಲ್ಲಿ ಸ್ವಲ್ಪವೂ ಬದಲಾವಣೆಯಾಗಿಲ್ಲ. ಈ ನ್ಯಾಯಮಂಡಳಿಯ ರಚನೆ ಅಪಾಯಕಾರಿಯಾದ ಬೆಳವಣಿಗೆ, ಕರ್ನಾಟಕ ರಾಜ್ಯದ ಜನರಿಗೆ ಭಾರಿ ಮೋಸವನ್ನು ಮಾಡಲು ಹೊರಟಿದ್ದಾರೆಂದು ನನ್ನ ಸ್ಪಷ್ಟವಾದ ನಿಲುವು. ಎಲ್ಲಾ ಮುಖ್ಯಮಂತ್ರಿಗಳು ಕರೆದಂಥ ಸರ್ವಪಕ್ಷಗಳ ಸಭೆಯಲ್ಲೂ ನಾನು ನ್ಯಾಯಮಂಡಳಿಯನ್ನು ಭಹಿಷ್ಕರಿಸಬೇಕು, ನ್ಯಾಯಮಂಡಳಿಯಲ್ಲಿ ನಮಗೆ ನಂಬಿಕೆಯಿಲ್ಲವೆಂಬ ಸ್ಪಷ್ಟವಾಗಿ ಹೇಳಿದ್ದೇನೆ. ಅನೇಕ ಸಾರಿ ಇದರ ಬಗ್ಗೆ ಸರ್ವಪಕ್ಷಗಳ ನಿಯೋಗವು ದೆಹಲಿಗೆ ಹೋದಾಗ ಅವರ ಮನವಿಗೆ ನಾನು ಸಹಿ ಹಾಕಲಿಲ್ಲ, ಯಾವುದೇ ರಾಜಿಗೆ ನಾನು ಸಿದ್ದನಿಲ್ಲ, ನ್ಯಾಯಮಂಡಳಿಗೆ ನಾವು ಸಂಪೂರ್ಣವಾಗಿ ಬಹಿಷ್ಕಾರ ಹಾಕಬೇಕೆಂದು ನಾನು ಹೇಳಿದ್ದೇನೆ. ಈ ಮಧ್ಯದಲ್ಲಿ ಶ್ರೀಮಾನ್ ವೀರೇಂದ್ರಪಾಟೀಲರ ನಂತರ ಬಂದಂಥ ಶ್ರೀಮಾನ್ ಬಂಗಾರಪ್ಪನವರ ಸರ್ಕಾರವಾಗಲಿ, ಶ್ರೀಮಾನ್ ವೀರಪ್ಪಮೊಯಲಿಯವರ ಸರ್ಕಾರ, ಶ್ರೀಮಾನ್ ದೇವೇಗೌಡರ ಸರ್ಕಾರ ಈ ಶಾಸನ ಸಭೆಯಲ್ಲಿ ನ್ಯಾಯ ಮಂಡಳಿಯ ಮಧ್ಯಾಂತರ ಆದೇಶವನ್ನು ಜಾರಿಗೊಳಿಸಬಾರದು, ನ್ಯಾಯ ಮಂಡಳಿಯ ಕಾರ್ಯಕಲಾಪಗಳನ್ನು ಸ್ಥಗಿತಗೊಳಿಸಬೇಕೆಂದು ಆಗಾಗ್ಗೆ ನಿರ್ಣಯಗಳಾಗಿವೆ. ಈ ರಾಜ್ಯದ ಅತ್ಯುನ್ನತವಾದಂಥ ಸಬೆ ಶಾಸನ ಸಭೆ. ಒಂದು ಸಲ ಶಾಸನಸಭೆಯಲ್ಲಿ ಸರ್ವಾನುಮತದ ನಿರ್ಣಯವಾದಮೇಲೆ ಅದಕ್ಕೆ ಸರ್ಕಾರ ಭದ್ದವಾಗಿರಬೇಕು. ಆ ಒಂದು ನಿರ್ಣಯದ

ಬಗ್ಗೆ ತಮ್ಮ ಗಮನಕ್ಕೆ ತರುತ್ತಿದ್ದೇನೆ. 25-6-91ರಂದು ಕಾವೇರಿ ಜಲವಿವಾದದ ಬಗ್ಗೆ ಕಾವೇರಿ ನ್ಯಾಯಾಧಿಕರಣ ನೀಡಿರುವ ಮಧ್ಯಂತರ ಆಜ್ಞೆಯು ಕರ್ನಾಟಕ ರಾಜ್ಯದ ಹಿತಕ್ಕೆ ಮಾರಕವಾಗಿರುವುದರಿಂದ ಮತ್ತು ಟ್ರಿಬ್ಯುನಲ್ ಕಾರ್ಯವ್ಯಾಪ್ತಿಗೆ ಅದು ಹೊರತಾಗಿದ್ದು ವಾಸ್ತವಿಕವಾಗಿ ಕಾನೂನುಮತ್ತು ವ್ಯವಹಾರಿಕತೆಗೆ ಬಹಳ ದೂರವಾಗಿರುವುದರಿಂದ ಈ ಸಭೆಯು ಮಧ್ಯಂತರ ಆಜ್ಞೆಯನ್ನು ತಿರಸ್ಕರಿಸಬೇಕೆಂದು ಸರ್ವಾನುಮತದಿಂದ ಸರ್ಕಾರವನ್ನು ಒತ್ತಾಯಿಸುತ್ತದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಜಲನೀತಿಯನ್ನು ರೂಪಿಸಿ ಅಂತರ್‌ರಾಜ್ಯ ಜಲವಿವಾದ 1956ರ ಶಾಸನಕ್ಕೆ ತಕ್ಕ ತಿದ್ದುಪಡಿಯಾಗುವವರೆಗೆ, ನ್ಯಾಯಾಧೀಕರಣ ಸ್ಪಷ್ಟ ಮಾರ್ಗವನ್ನು ಸೂಚಿಸುವವರೆಗೆ ಕಾವೇರಿ ಜಲವಿವಾದಕ್ಕೆ ಸಂಬಂಧಪಟ್ಟಂತೆ ರಚಿತವಾಗಿರುವ ಕಾವೇರಿ ನ್ಯಾಯಾಧೀಕರಣದ ಟ್ರಿಬ್ಯುನಲ್‌ನ ಮುಂದಿರುವ ಎಲ್ಲಾ ಕಾರ್ಯಕಲಾಪಗಳನ್ನು ಸ್ಥಗಿತಗೊಳಿಸುವಂತೆ ಕೇಂದ್ರ ಸರ್ಕಾರವು ಈ ಸಭೆಯು ಸರ್ವಾನುಮತದಿಂದ ಒತ್ತಾಯಿಸುತ್ತದೆ. ಆದರೆ ಈ ನಿರ್ಣಯಕ್ಕೆ ಯಾರೂ ಬದ್ಧರಾಗಿಲ್ಲ. ಇಲ್ಲಿ ಸರ್ವಾನುಮತದಿಂದ ನಿರ್ಣಯವನ್ನು ಮಾಡುತ್ತಿದ್ದೇವೆ. ಆ ನ್ಯಾಯಮಂಡಳಿಯ ಕಾರ್ಯಕಲಾಪಗಳನ್ನು ಸ್ಥಗಿತಗೊಳಿಸಬೇಕೆಂದು ಇಲ್ಲಿನಾವು ನಿರ್ಣಯ ಮಾಡುತ್ತೇವೆ, ಪುನಃ ನಮ್ಮ ವಕೀಲರು ನ್ಯಾಯಮಂಡಳಿಯ ಮುಂದೆ ಭಾಗವಹಿಸಿ ನಮ್ಮ ರಾಜ್ಯದ ವಾದವನ್ನು ಮಂಡಿಸುತ್ತಾರೆ. ಇದು ಬಹಳ ದ್ವಂದದಿಂದ ಕೂಡಿರುತ್ತದೆ. ಈ ಸಭೆಗೆ ಮಾಡಿದಂಥ ಅಪಚಾರವಾಗುತ್ತದೆ. ಈ ಸರ್ವೋಚ್ಚ ಸಭೆಗೆ ನೀಡಿದಂಥ ಅಗೌರವ, ಹಾಗಾದರೆ ನಾವೇಕೆ ಈ ಸದನದಲ್ಲಿ ನಿರ್ಣಯ ಮಾಡಿದೆವು, ಹುಡುಗಾಟಕ್ಕೆ ಮಾಡಿದ್ದೇವೆಯೇ? ಈ ಸದನದಲ್ಲಿ ಎಲ್ಲರೂ ಸೇರಿ ನಮ್ಮ ರಾಜ್ಯದ ಹಿತಕ್ಕೆ ಧಕ್ಕೆಯಾಗುತ್ತದೆಂಬ ನಿರ್ಣಯವನ್ನು ಮಾಡಿದಾಗ, ಈ ನಿರ್ಣಯ ಒಂದು ಕಡೆ ಇದ್ದು ಮತ್ತೊಂದು ಕಡೆ ಈ ನಿರ್ಣಯಕ್ಕೆ ವಿರುದ್ಧವಾಗಿ ರಾಜ್ಯ ಸರ್ಕಾರವೇ ನಮ್ಮ ವಕೀಲರನ್ನು ಕಳಿಸತಕ್ಕದ್ದು, ರಾಜ್ಯದ ಮುಖ್ಯಮಂತ್ರಿಗಳು, ನೀರಾವರಿ ಮಂತ್ರಿಗಳು ದೆಹಲಿಗೆ ಹೋಗತಕ್ಕದ್ದು, ಅಲ್ಲಿ ನಮ್ಮ ವಕೀಲರ ಜೊತೆ ಮಾತುಕತೆಯಾಡತಕ್ಕದ್ದು, ನ್ಯಾಯ ಮಂಡಳಿಯ ಮುಂದೆ ನಮ್ಮ ವಾದವನ್ನು ಮಂಡಿಸತಕ್ಕದ್ದು; ಮತ್ತೊಂದು ನಿರ್ಣಯ ಶ್ರೀಮಾನ್ ದೇವೇಗೌಡರ ಕಾಲದಲ್ಲಾಯಿತು. ಆಗಲೂ ಇದೇ ರೀತಿಯಾದ ನಿರ್ಣಯವಾಯಿತು. ಮೂರು ಮುಖ್ಯಮಂತ್ರಿಗಳ ಕಾಲದಲ್ಲೂ ಇಲ್ಲಿ ಒಂದು ನಿರ್ಣಯವನ್ನು ಮಾಡಿದ್ದೇವೆ. ಆ ನಿರ್ಣಯವನ್ನೇನಾದರೂ ತಾವು ಮೂಲೆಗುಂಪು ಮಾಡಿದ್ದೀರಾ? ಆ ನಿರ್ಣಯಕ್ಕೆ ಏನಾದರೂ ಬೆಲೆ ಕೊಟ್ಟಿದ್ದೀರಾ? ಆ ನಿರ್ಣಯಕ್ಕೆ ಗೌರವವೇನಾದರೂ ಇದೆಯೇ? ಈ ನಿರ್ಣಯಕ್ಕೆ ತಾವು ಗೌರವವನ್ನು ಕೊಡದಿದ್ದಮೇಲೆ ಈ ಸರ್ವೋಚ್ಚ ಸಭೆಯ ನಿರ್ಧಾರವನ್ನು ಕಡೆಗಣಿಸಿ ನಿಮ್ಮದೇ ಆದಂಥ ನಿರ್ಧಾರಕ್ಕೆ ನೀವು ಬರುವುದಾದರೆ, ಈ ಸದನದ ಹಕ್ಕಿಗೆ ಚ್ಯುತಿಯಾಗುತ್ತದೆ ಮತ್ತು ಈ ಸದನಕ್ಕೆ ಅಪಚಾರವಾಗುತ್ತದೆಂದು ತಮಗೆ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇತ್ತೀಚಿನ ದಿವಸಗಳಲ್ಲಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಮತ್ತು ನೀರಾವರಿ ಸಚಿವರು ಏಳು ಬಾರಿ ತಮಿಳುನಾಡಿನ ಮುಖ್ಯಮಂತ್ರಿಗಳಾದ ಕರುಣಾನಿಧಿಯವರೊಂದಿಗೆ ಮಾತುಕತೆ ಮಾಡಿದ್ದಾರೆ. 5-8-96 ಮದ್ರಾಸ್‌ನಲ್ಲಿ, 4-9-96 ಬೆಂಗಳೂರಿನಲ್ಲಿ, 21-9-96 ನವದೆಹಲಿಯಲ್ಲಿ, 22-9-96 ನವದೆಹಲಿಯಲ್ಲಿ, 15-10-96 ನವದೆಹಲಿಯಲ್ಲಿ 16-10-96 ನವದೆಹಲಿಯಲ್ಲಿ, 5-1-1997 ಚೆನ್ನೈನಲ್ಲಿ ಈ ರೀತಿ ಏಳು ಬಾರಿ ಮಾತುಕತೆಯಾಡಿದ್ದಾರೆ. ತಾವು

ಇದರ ಬಗ್ಗೆ ವಿರೋಧಪಕ್ಷದವರೊಬ್ಬರಿಗೂ ಹೇಳಲಿಲ್ಲ. ಅವರ ಜೊತೆ ಏನು ಮಾತನಾಡುತ್ತೇವೆ, ಯಾವ ಸೂತ್ರದ ಮೇಲೆ ಮಾತನಾಡುತ್ತೇವೆ ಎಂಬ ಬಗ್ಗೆ ಯಾವ ಸೂಚನೆಯನ್ನು ಸಹ ವಿರೋಧ ಪಕ್ಷದವರಿಗೆ ಕೊಡಲಿಲ್ಲ. ವಿರೋಧ ಪಕ್ಷದ ಮುಖಂಡರನ್ನು, ಈ ರಾಜ್ಯದ ಜನತೆಯನ್ನು ಕತ್ತಲೆಯಲ್ಲಿಟ್ಟು ಕೇವಲ ಇದು ನಿಮ್ಮ ಮನೆಯ ಸ್ವಂತ ಆಸ್ತಿಯ ರೀತಿಯಲ್ಲಿ ನಡೆದುಕೊಂಡಿರಿ. ಮುಖ್ಯಮಂತ್ರಿಗಳು ಇದು ನಮ್ಮ ಸ್ವಂತ ಆಸ್ತಿ, ಈ ಸಭೆಗೆ, ಈ ರಾಜ್ಯಕ್ಕೆ ಇದು ಸಂಬಂಧಪಡುವುದಿಲ್ಲವೆನ್ನುವಂತಹ ರೀತಿಯಲ್ಲಿ ನಡೆದುಕೊಂಡರು. ಒಂದೊಂದು ಸಭೆಗೆ ಹೋದಾಗ ಪಂಚತಾರಾ ಹೋಟೆಲ್‌ನಲ್ಲಿ ಒಂದು ಸಭೆ ಅಧಿಕೃತವಾಗಿ ಮತ್ತೊಂದು ಸಭೆ. ಈ ರೀತಿಯ ಎರಡೆರಡು ಸಭೆ. ನೀರಾವರಿ ಸಚಿವರಾದ ನಾಗೇಗೌಡರು ಪತ್ರಕರ್ತರ ಮುಂದೆ ಈ ಮಾತುಕತೆ ಚರಿತ್ರಾರ್ಹವಾದುದು, ಇತಿಹಾಸ ಪ್ರಸಿದ್ಧವಾದುದು, ಶತಮಾನಗಳಿಂದ ಕೂಡಿರುವಂಥ ಕಾವೇರಿ ಜಲವಿವಾದ ಕರ್ನಾಟಕದಲ್ಲಿ ಇವರು ಮಾತನಾಡಿರುವುದನ್ನು ನೋಡಿದರೆ ಇನ್ನೇನು ನಮಗೂ ಇವರಿಗೂ ಒಪ್ಪಂದವಾಗಿಬಿಡುತ್ತದೆ, ಒಂದು ಹೊಸ ಅಧ್ಯಾಯವನ್ನು ಪ್ರಾರಂಭ ಮಾಡುತ್ತಿದ್ದೇನೆ ಎನ್ನುವಂತೆ ತಿಳಿದುಕೊಳ್ಳಬೇಕು ಆ ರೀತಿ ಹೇಳಿದ್ದರು. ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಸಂಸದೀಯ ವ್ಯವಹಾರಗಳ ಸಚಿವರು, ನೀರಾವರಿ ಸಚಿವರು ಮಾತುಕತೆಗೆ ಹೋಗಿದ್ದೇ ಹೋಗಿದ್ದುದು, ಕರುಣಾನಿಧಿಯವರಿಗೆ ಎಲ್ಲಿಲ್ಲದ ಸ್ವಾಗತ. ತಾವು ವಿಧಾನಸೌಧದ ಸುತ್ತಲು ನೋಡಬೇಕಿತ್ತು, ಇನ್ನೇನು ಎಲ್ಲವೂ ಮುಗಿಯಿತು, ನ್ಯಾಯಾಧೀಕರಣವೂ ಇಲ್ಲ, ಯಾವ ವಕೀಲರೂ ಇಲ್ಲ, ನೀವು ಐದು ಜನರು ಕರ್ನಾಟಕ ರಾಜ್ಯದ ಜನರಿಗೆ ಆಕಾಶದಿಂದ ಏನೋ ತಂದಿದ್ದೀರಿ ಎಂದು ನಾವು, ಹೊರಗಿನ ಪ್ರಧಾನಮಂತ್ರಿಯವರು ನಮ್ಮ ದೇಶವನ್ನು ನೋಡಲು ಬಂದಾಗ ಮಾಡುವಂತೆ, ಕರುಣಾನಿಧಿಯವರು ಬೆಂಗಳೂರನ್ನು ನೋಡಲಿಕ್ಕೆ ಬಂದಾಗ, ಅವರನ್ನು ಸ್ವಾಗತಿಸಲು ಕೆಂಪು ಹಾಸಿನ ವ್ಯವಸ್ಥೆ ಮಾಡಲಾಗಿತ್ತು. ಆದರೆ ಕರುಣಾನಿಧಿಯವರು ಇಲ್ಲಿಗೆ ಬಂದಾಗ ತಮಿಳಿನಲ್ಲೇ ಪತ್ರಿಕಾ ಸಭೆಗಳನ್ನು ನಡೆಸಿದರು. ನಮ್ಮವರೂ ಕೂಡ ಇಂಗ್ಲೀಷ್‌ನಲ್ಲಿ ಪತ್ರಿಕಾ ಸಭೆಗಳನ್ನು ನಡೆಸಿದರು. ಅವರು ಅದನ್ನಾದರೂ ಕನ್ನಡದಲ್ಲಿ ನಡೆಸಬಹುದಿತ್ತು. ಆದರೆ ಕರುಣಾನಿಧಿಯವರು ತಮಿಳು ಬಿಟ್ಟು ಬೇರೆ ಮಾತನಾಡಲಿಲ್ಲ. ನಂತರ ಅವರ ಭಾಷಣವನ್ನು ಅವರ ಕಾರ್ಯದರ್ಶಿಗಳು ಇಂಗ್ಲೀಷ್‌ಗೆ ತರ್ಜುಮೆ ಮಾಡಿದರು. ಅವರು ಇಲ್ಲಿಗೆ ಬಂದಿದ್ದಾಗ 'ಇಲ್ಲಿ ಕಹಳೆ, ತಮಟೆ ಎಲ್ಲಾ ವಾದ್ಯಗಳನ್ನು ಬಾರಿಸಿಕೊಂಡು ಅವರನ್ನು ಕರೆದುಕೊಂಡು ಹೋದರು. ಆದರೆ ದಿನಾಂಕ 5-1-97 ರಂದು ತಮಿಳು ನಾಡಿನಲ್ಲಿ ಕೊನೆಯ ಸಭೆ ನಡೆದಾಗ ಕರುಣಾನಿಧಿಯವರ ಸರ್ಕಾರ ನಮ್ಮ ಮುಖ್ಯಮಂತ್ರಿಗಳನ್ನು ಹಾಗೂ ನಾಗೇಗೌಡರನ್ನು ಹೇಳದೆ ಕೇಳದೆ ಹಿಗ್ಗಾಮುಗ್ಗಾ ಕತ್ತು ಹಿಡಿದು ಹೊರ ನೂಕಿದರು. ನೀವು ಸಭೆ ಸೇರಿದ್ದಾಗ ಅವರು ನೀವು ಏನು ಮಾತನಾಡಿದ್ದೀರಿ ಅದನ್ನು ಸಭೆಯ ಮುಂದೆ ಮಂಡಿಸಬೇಕು. ಇದೊಂದು ಇತಿಹಾಸ ಪ್ರಸಿದ್ಧವಾದುದು. ಶತಮಾನಗಳಿಂದ ಆಗದೆ ಇರತಕ್ಕಂಥದ್ದನ್ನು ನಾವು ಮಾಡುತ್ತಿದ್ದೇವೆ ಎಂದು ನಾಗೇಗೌಡರು ಪತ್ರಿಕೆಗಳಲ್ಲಿ ಹೇಳಿದರು. ಎಲ್ಲಾ ಆಗಿ ಹೋಯಿತು, ನ್ಯಾಯಾಲಯ ಏನೂ ಇಲ್ಲದೆ ಎಲ್ಲಾ ಮುಗಿದುಹೋಯಿತು, ಇಲ್ಲ ಅಂದಿದ್ದರೆ ಎಷ್ಟು ವರ್ಷಗಳಾದರೂ ಬಗೆಹರಿಯುತ್ತಿರಲಿಲ್ಲ ಎಂದಿರಿ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಿಮಗೆ ಕರುಣಾನಿಧಿ ರಾಜಕಾರಣ ಗೊತ್ತಿಲ್ಲ. ಅವರ 50 ವರ್ಷದ ರಾಜಕಾರಣದಲ್ಲಿ ನಿಮ್ಮಂಥ ಎಷ್ಟೋ ಜನರನ್ನು ನೋಡಿದ್ದಾರೆ. ನೀವು ಅವರನ್ನು

ನಂಬಬಾರದಾಗಿತ್ತು, ನೀವು ಅವರನ್ನು ನಂಬಿ ತಪ್ಪು ಮಾಡಿದ್ದೀರಿ. ಕೊನೆಯಲ್ಲಿ ಮಾತುಕತೆ ವಿಫಲ. ಈ ಮಾತುಕತೆ ವಿಫಲ ಎನ್ನತಕ್ಕಂಥದ್ದನ್ನು ನಮ್ಮ ಇತಿಹಾಸದಲ್ಲಿ ಬರೆಯತಕ್ಕ ವಿಚಾರ. ಪಂಚತಾರಾ ಹೋಟೆಲ್‌ಗಳಲ್ಲಿ ನಡೆದಂಥ ಮತ್ತು ಹೊರಗಡೆ ನಡೆದಂಥ ನಿಮ್ಮ ಮಾತುಕತೆಯ ಸಾರಾಂಶ ನಮಗೆ ಬೇಕು ಎಂದು ಕೇಳುತ್ತಿದ್ದೇನೆ. ಅದನ್ನೆಲ್ಲಾ ನೀವು ಈ ಸಭೆಯ ಮುಂದೆ ಮಂಡಿಸಬೇಕು. ಮತ್ತು ನಿಮ್ಮ ಮಾತುಕತೆ ವಿಫಲ ಆಗುವುದಕ್ಕೆ ಕಾರಣ ಏನು ಎನ್ನುವುದನ್ನು ಸಭೆಯ ಮುಂದೆ ಒಂದಕ್ಷರವನ್ನು ಬಿಡದಂತೆ ಮಂಡಿಸಬೇಕು. ನೀವು ಗೌಪ್ಯವಾಗಿ ಮಾತನಾಡಿದ್ದು, ಹೊರಗಡೆ ಮಾತನಾಡಿದ್ದು ಎಲ್ಲಾವನ್ನೂ ಸಹಿತ ಸಭೆಯ ಮುಂದೆ ಮಂಡಿಸಬೇಕು. ನಾಗೇಗೌಡರು ಕಾವೇರಿಯಿಂದ 205 ಟಿಎಂಸಿ ನೀರನ್ನು ಬಿಡುಗಡೆ ಮಾಡುವ ಬಗ್ಗೆ ಗೆಜೆಟ್‌ನಲ್ಲಿ ಪ್ರಕಟಣೆ ಮಾಡುತ್ತೇವೆ ಎಂದಾಗಲೂ, ಬೇಡ ನಮ್ಮ ರಾಜ್ಯಕ್ಕೆ ಅನ್ಯಾಯ ಆಗುತ್ತದೆ, ದ್ರೋಹ ಆಗುತ್ತದೆ ಎನ್ನತಕ್ಕಂಥ ಮಾತುಗಳನ್ನು ಹೇಳಿದೀರಿ. ತದನಂತರ ದೇವೇಗೌಡರು ಪ್ರಧಾನಮಂತ್ರಿಗಳಾದ ನಂತರ ನರಸಿಂಹರಾಯರ ಹತ್ತಿರ ಮಾತುಕತೆ ನಡೆಸಿ 6 ಟಿಎಂಸಿ ನೀರನ್ನು ಬಿಟ್ಟಾಗ, ನೀವು ನಮಗೆ ಬಹಳ ಅನ್ಯಾಯ ಆಗಿದೆ, ನಾವು ಯಾರು ಇಲ್ಲಿ ಇರುವ ಹಾಗೆ ಇಲ್ಲ, ನಾವು ರಾಜೀನಾಮೆಯನ್ನು ಕೊಟ್ಟು ಹೋಗಬೇಕಾಗುತ್ತದೆ ಎಂದೆಲ್ಲಾ ಹೇಳುತ್ತಿದ್ದೀರಿ. ಆ ಮಾತುಗಳೆಲ್ಲಾ ಈಗ ಎಲ್ಲಿ ಹೋದವು? ನಿಮ್ಮ ಶೌರ್ಯ ಎಲ್ಲಿ ಅಡಗಿ ಹೋಯಿತು? ನಾಗೇಗೌಡರೇ, ಆ ನಿಮ್ಮ ಮಾತುಗಳೆಲ್ಲಾ ಎಲ್ಲಿ ಹೋದವು? ಪರಿಸ್ಥಿತಿಗೆ ಹೊಂದಿಕೊಂಡು ಬಿಟ್ಟಿರಾ? ಅಥವಾ ಪರಿಸ್ಥಿತಿಗೆ ಶರಣಾಗತರಾದಿರಾ? ಆ ನಿಮ್ಮ ಶೌರ್ಯ ಎಲ್ಲಾ ಎಲ್ಲಿ ಹೋಯಿತು? ನೀವು ತೆಗೆದುಕೊಂಡ ನಿರ್ಧಾರ ಒಳ್ಳೆಯದಲ್ಲ ಎಂದು ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ. ಮಾನ್ಯ ದೇವೇಗೌಡರು ಪ್ರಧಾನಿಗಳಾದಾಗ ನಮ್ಮ ಕರ್ನಾಟಕ ರಾಜ್ಯದಿಂದ ಒಬ್ಬರಾದರೂ ಪ್ರಧಾನಿಗಳಾದರಲ್ಲ ಎಂದು ನನಗೆ ಪ್ರಾಮಾಣಿಕವಾಗಿ ಸಂತೋಷವಾಯಿತು. ನಮ್ಮಲ್ಲಿ ವಾದವಿವಾದ ಇರಬಹುದು ಆದರೂ ಅವರು ಪ್ರಧಾನಿಗಳಾದಾಗ ನಮಗೆಲ್ಲಾ ಸಂತೋಷವಾಯಿತು. ಅವರು ರಾಜ್ಯಸಭೆ ಚುನಾವಣೆಗೆ ನಿಂತಾಗಲೂ ಸಹಿತ ನಾನು ಅವರ ಜೊತೆಯಲ್ಲಿ ಮಾತನಾಡಿ, ನಮ್ಮ ಇಡೀ ರಾಜ್ಯದ ಬೆಂಬಲ ನಿಮಗಿದೆ ಎಂದು ಹೇಳಿದ್ದೆ. ಅವರು ಹಿಂದೆ ಮುಖ್ಯಮಂತ್ರಿಗಳಾಗಿದ್ದರು. ಆಗ ಅವರು ಮೈಸೂರಿನಲ್ಲಿ ಮಂಡ್ಯದಲ್ಲಿ ಬೆಂಗಳೂರಿನ ಪ್ರೆಸ್ ಕ್ಲಬ್‌ನಲ್ಲಿ ಮಾಡಿದಂಥ ಭಾಷಣ ಏನು? "ಕಾವೇರಿಗಾಗಿ ಕಣ್ಣೀರು" ಎಂದು ಕಣ್ಣಿಗೆ ಖರ್ಚೀಪನ್ನು ಹೆಚ್ಚಿದರು. ನಮಗೆಲ್ಲಾ ಇದ್ದಕ್ಕಿದ್ದ ಹಾಗೆ ಕಣ್ಣೀರು ಎಲ್ಲಿಂದ ಬಂತು ಎಂದು ಆಶ್ಚರ್ಯವಾಯಿತು. ನ್ಯಾಯಮಂಡಳಿ ರದ್ದಾಗಬೇಕು ಎಂದು ಮೈಸೂರಿನಲ್ಲಿ ಒಂದು ಸಭೆ ನಡೆಸಿದರು. ನ್ಯಾಯ ಮಂಡಳಿಯ ಸದಸ್ಯರು ಆಶೆಆಮಿಷಗಳಿಗೆ ಒಳಗಾಗಿದ್ದಾರೆ ಅವರು ಸದಸ್ಯರಾಗಿ ಮುಂದುವರೆಯುವುದು ಬೇಡ ಎಂದು ನ್ಯಾಯಲಯಕ್ಕೆ ಅರ್ಜಿ ಸಲ್ಲಿಸಿದರು. ಸಾರ್ವಜನಿಕ ಸಭೆ, ಪತ್ರಿಕಾ ಹೇಳಿಕೆ ಇವೆಲ್ಲಾ ಕಾವೇರಿ ನಾಟಕದಲ್ಲಿ ಒಂದು ಪಾತ್ರ. ಕಾವೇರಿಗಾಗಿ ಕಣ್ಣೀರು ಇದು ಇನ್ನೊಂದು ಪಾತ್ರ. ಆಗ ಮುಖ್ಯಮಂತ್ರಿಗಳು ನಮಗೆ ನೀರಿಲ್ಲ ಅವರಿಗೆ ಎಲ್ಲಿಂದ ನೀರು ಕೊಡುವುದು ಎಂದು ಹೇಳಿದಾಗ ರಾಜ್ಯದಲ್ಲಿ ದೊಡ್ಡ ಗದ್ದಲ. ಮಂಡ್ಯ ಮೈಸೂರು ಮತ್ತು ಬೆಂಗಳೂರಿನ ಪ್ರೆಸ್ ಕ್ಲಬ್‌ಗಳಲ್ಲಿ ಏನು ಮಾತನಾಡಿದೀರಿ, ಆದರೆ ಈಗ ತಾವು ಮಾಡಿದ್ದು ಏನು ಎಂದು ನಾನು ಮುಖ್ಯಮಂತ್ರಿಗಳನ್ನು ಕೇಳಿದೆ. ನ್ಯಾಯಮಂಡಳಿ ರದ್ದಾಗಬೇಕೆಂದು ಮೈಸೂರಿನಲ್ಲಿ ವ ಸ್ತು ಮಂಡ್ಯದಲ್ಲಿ ಹೇಳಿದೀರಿ, ಆದರೆ ನೀವು ಮಾಡಿದ್ದು ಏನು ಎಂದು ನಾನು ಕೇಳಿದೆ.

ಆಗಿನ ಒಂದು ದೃಶ್ಯ ನೀವು ನೋಡಲಿಲ್ಲ. ಶ್ರೀಮಾನ್ ನಿಜಲಿಂಗಪ್ಪನವರು ಕುರ್ಚಿಯಲ್ಲಿ ಇವರು ನೆಲದ ಮೇಲೆ ಕುಳಿತಿದ್ದರು. ಎಂತಹ ಆದರ್ಶ ವ್ಯಕ್ತಿತ್ವ ನಮ್ಮ ರಾಜ್ಯದ ಕಾವೇರಿ ಬಗ್ಗೆ ಅಷ್ಟು ದೊಡ್ಡ ಜನಸ್ತೋಮದ ಮಧ್ಯೆ ರಾಜ್ಯದ ಹಿರಿಯರಾದ ನಿಜಲಿಂಗಪ್ಪನವರು ಕುರ್ಚಿಯಲ್ಲಿ ಕುಳುತಿದ್ದರೆ, ಇವರು ನಮ್ಮ ರಾಜ್ಯಕ್ಕೆ ಅನ್ಯಾಯ ಆಗಿದೆ ಎನ್ನುವ ವ್ಯಥೆಯಲ್ಲಿ ಅವರ ಕೆಳಗಡೆ ಇವರು ಕುಳಿತಿದ್ದರು. ಅದೆಲ್ಲಾ ಎಲ್ಲಿ ಹೋಯಿತು ಸ್ವಾಮಿ ಎಂದು ಇದೇ ಸದನದಲ್ಲಿ ಅವರನ್ನು ಕೇಳಿದೆ. ಬೇಕಾದರೆ ಕಡತ ತೆಗೆಸಿ ಈ ಮಾತುಗಳು ಅದರಲ್ಲಿವೆ. ಆಗ ಅವರು ನೀವು ಒಂದು ದಿವಸ ಅಧಿಕಾರ ನಡೆಸುತ್ತೀರಿ ಆಗ ನಿಮಗೆ ಗೊತ್ತಾಗುತ್ತದೆ ಎಂದು ಹೇಳಿದರು. ಅಂದರೆ ಅಧಿಕಾರ ಇಲ್ಲದೆ ಇದ್ದಾಗ ಏನು ಬೇಕಾದರೂ ಹೇಳಬಹುದು ಆದರೆ ಅಧಿಕಾರ ಬಂದ ಮೇಲೆ ಹೇಳುವ ವಿಚಾರವೇ ಬೇರೆ. ಇದು ಎರಡನೆಯ ಪಾತ್ರ. ಮೊದಲನೆಯ ಪಾತ್ರ ಕಾವೇರಿಗಾಗಿ ಕಣ್ಣೀರು, ಎರಡನೆಯದು ಅಧಿಕಾರಕ್ಕೆ ಬಂದ ಮೇಲೆ ನ್ಯಾಯ ಮಂಡಳಿಯ ಮುಂದೆ ವಾದ ಮಂಡಿಸತಕ್ಕದ್ದು. ನ್ಯಾಯ ಮಂಡಳಿಯನ್ನು ಬೇಡ ಎಂದು ಹೇಳಿದಂತಹ ಶ್ರೀಮಾನ್ ದೇವೇಗೌಡರು ನ್ಯಾಯಮಂಡಳಿಯ ಮುಂದೆ ಕರ್ನಾಟಕದ ವಾದವನ್ನು ಮಂಡಿಸಿದರು. ಮೂರನೆಯದು ಎಂದರೆ ಇವರು ಮುಖ್ಯಮಂತ್ರಿಗಳಾಗಿದ್ದಾಗ ಸರ್ವೋಚ್ಚ ನ್ಯಾಯಲಯದ ತೀರ್ಪು ಬರುತ್ತದೆ ಎಂದು ನಮ್ಮನ್ನೆಲ್ಲಾ ದೆಹಲಿಗೆ ಕರೆದುಕೊಂಡು ಹೋದರು. ವಿರೋಧ ಪಕ್ಷದ ಮುಖಂಡರನ್ನೆಲ್ಲಾ ಸೇರಿಸಿ ನಮ್ಮಲ್ಲಿ ಒಂದು ಸ್ವಲ್ಪ ಕೂಡ ನೀರು ಇಲ್ಲ ಎಂದು ಒಣಗಿರುವ ಭತ್ತದ ಹುಲನ್ನು ಪ್ರಧಾನಿಯವರಿಗೆ ತೋರಿಸಲು ತೆಗೆದುಕೊಂಡು ಹೋದರು.

ಶ್ರೀ ಕೆ.ಎನ್. ನಾಗೇಗೌಡ : ಕಾವೇರಿ ಬಗ್ಗೆ ಮಾತನಾಡಿ,

ಶ್ರೀ ವಾಟಾಳ್ ನಾಗರಾಜ್ : ಕಾವೇರಿ ಬಗ್ಗೆಯೇ ಮಾತನಾಡುತ್ತಿರುವುದು, ಕಬಿನಿ ಬಗ್ಗೆ ಮಾತನಾಡುತ್ತಿಲ್ಲ. ನಿಮಗೆ ಒಂದು ಇತಿಹಾಸವನ್ನು ಹೇಳಬೇಕು. ಏಕೆಂದರೆ ಎಲ್ಲವನ್ನೂ ಮರೆಸಿ ನಮಗೆ ಮಂಕುಬೂದಿ ಹಾಕಿದ್ದಾರೆ. ಎಲ್ಲಾರಿಗೂ ದಾರಿ ತಪ್ಪಿಸಿದ್ದಾರೆ. ಕಾವೇರಿ ಬಗ್ಗೆ ಏನು ಮಾಡಬೇಕು ಎನ್ನತಕ್ಕಂಥದ್ದನ್ನು ನೀವು ಮಾಡಿಲ್ಲ, ಕಾವೇರಿಯನ್ನು ಛೀದ್ರ ಮಾಡಿದ್ದೀರಿ. ಅದು ಯಾವ ಯಾವ ಮೂಲೆಗೆ ಹೋಗುತ್ತದೋ ಗೊತ್ತಿಲ್ಲ. ಮುಂದಿನ ಸರ್ಕಾರ ಬಂದರೆ ಅವರ ಹಣೆಬರಹವನ್ನು ಅವರೇ ಕಾಪಾಡಿಕೊಳ್ಳಬೇಕು. ನಿಮ್ಮ ಕಾಲದಲ್ಲಿ ಇದು ಆಗಲಿಲ್ಲ. ಮುಂದೆ ಬರತಕ್ಕ ಸರ್ಕಾರ ಇದರ ಬಗ್ಗೆ ತಲೆಕೆಡಿಸಿಕೊಳ್ಳಬೇಕು. ಮುಂದೆ ಹೊಸ ಸರ್ಕಾರ ಬಂದು ಈ ಕಾವೇರಿ ಬಗ್ಗೆ ಕ್ರಮ ಕೈಗೊಂಡರೆ ಅವರಿಗೆ ನೇರವಾಗಿ ಹುಚ್ಚು ಹಿಡಿಯುತ್ತದೆ, ಅಂತಹ ಪರಿಸ್ಥಿತಿಯನ್ನು ನೀವು ನಿರ್ಮಾಣ ಮಾಡಿದ್ದೀರಿ.

ಶ್ರೀ ಎಂ. ಪಿ. ಪ್ರಕಾಶ್ : ತಾವೆಲ್ಲಾ ಒಪ್ಪಿಕೊಳ್ಳುವುದಾದರೆ ನಾನೇ ಮುಖ್ಯಮಂತ್ರಿಯಾಗುತ್ತೇನೆಂದು ಹೇಳಿದ್ದೀರಿ, ನೀವು ಮುಖ್ಯಮಂತ್ರಿಯಾದರೆ ಏನು ಮಾಡುತ್ತೀರಿ?

ಶ್ರೀ ವಾಟಾಳ್ ನಾಗರಾಜ್ : ಈಗ ನನ್ನನ್ನು ಮುಖ್ಯಮಂತ್ರಿಗಳನ್ನಾಗಿ ಮಾಡುವುದಾದರೆ ಮಾಡಿ, ಆಗ ಹೇಳುತ್ತೇನೆ ನಾನು ಏನು ಮಾಡುತ್ತೇನೆ ಎಂದು. ಅವರು ನನ್ನ ಮೇಲಿನ ಅಭಿಮಾನದಿಂದ ಈ ತೀರ್ಮಾನವನ್ನು ತೆಗೆದುಕೊಂಡಿರುವ ಹಾಗೆ ಕಾಣುತ್ತದೆ. ಆದುದರಿಂದ ಮಾನ್ಯ ಪ್ರಕಾಶ್‌ರವರಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ ಮತ್ತು ಅವರ ತೀರ್ಮಾನದಂತೆ ಮಾಡುವುದಾದರೆ ನಾಳೆಯೇ

ನಾನು ಮುಖ್ಯಮಂತ್ರಿಯಾಗಲು ಒಪ್ಪಿಕೊಳ್ಳುತ್ತೇನೆ. ಮತ್ತು ಅವಕಾಶ ಕೊಡುವುದಾದರೆ ಕಾವೇರಿ ಬಗೆಗಿನ ವಿವಾದವನ್ನು ಎರಡು ದಿವಸಗಳಲ್ಲಿ ಬಗೆಹರಿಸುತ್ತೇನೆ. ಬಿಜೆಪಿಯವರು ಮತ್ತು ಕಾಂಗ್ರೆಸ್ಸಿನವರು ನನಗೆ ಸಹಕಾರ ಕೊಡಲಿಕ್ಕೆ ತಯಾರಿರುವುದು ಒಂದು ಶುಭೋದಯದ ಸೂಚನೆ ಎನಿಸುತ್ತದೆ. ಅವರಿಗೂ ಸಹ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮಗೆ ಬೇಗ ಹುಚ್ಚು ಹಿಡಿಸುವುದಕ್ಕೆ ಅವರು ಕರೆಯುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನನಗೆ ಖಂಡಿತ ಹುಚ್ಚು ಹಿಡಿಯುವುದಿಲ್ಲ. ಕಾವೇರಿ ವಿವಾದವನ್ನು ಎರಡು ದಿವಸಗಳಲ್ಲಿ ಬಗೆಹರಿಸುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಈ ಸದನದಲ್ಲಿ ಗುಪ್ತವಾಗಿ ಮತದಾನ ನಡೆಸಿದರೆ ಅವರೊಂದೇ ಓಟು ಅವರಿಗೆ ಬೀಳುವುದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಪ್ರಕಾಶ್‌ರವರು ಯಾವುದೋ ಒಂದು ಸಂದರ್ಭದಲ್ಲಿ ಈ ಮಾತನ್ನು ಹೇಳಿದ್ದಾರೆ. ಆದರೆ ನನಗೆ ಆಸೆ ಇಲ್ಲ ಎಂದು ಅಲ್ಲ ನನಗೂ ಆಸೆ ಇದೆ. ಮನುಷ್ಯರಾದ ಮೇಲೆ ಎಲ್ಲಾರಿಗೂ ಆಸೆ ಇರುತ್ತದೆ. ಆದರೆ ನಿಮ್ಮಲ್ಲಿಯೇ ಅನೇಕರು ಮುಖ್ಯಮಂತ್ರಿಗಳಾಗಬೇಕೆಂದು ಗುದ್ದಾಡುತ್ತಿದ್ದಾರೆ, ಆದುದರಿಂದ ಏನೇನು ಆಗುತ್ತದೆಯೋ ಆಗಲಿ, ಅದರ ಬಗ್ಗೆ ಚಿಂತೆ ಪಡಬೇಕಾಗಿಲ್ಲ.

ಶ್ರೀ ಹೆಚ್. ಎನ್. ನಂಜೇಗೌಡ : ವಾಟಾಳ್ ರು ಗುದ್ದಾಡಿದರೆ ಅವರೊಬ್ಬರ ಗುದ್ದಾಡಿಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ಹಾಗೇನು ಇಲ್ಲ, ನಾನು ಹೊರಗಡೆ ಇದ್ದರೂ ಕೂಡ ಅವರನ್ನು ಮುಖ್ಯಮಂತ್ರಿಗಳನ್ನಾಗಿ ಮಾಡಲಿಕ್ಕೆ ಹೇಳಿದ್ದೆ, ಆದರೆ ಅವರ ಅದೃಷ್ಟ ಸರಿ ಇರಲಿಲ್ಲ. ಅವರು ಆಗಲಿಲ್ಲ ಎಂದರೆ ನಾನು ಏನು ಮಾಡಲಿಕ್ಕೆ ಆಗುತ್ತದೆ? ಆದರೆ ನನಗಿನ್ನು ಅದೃಷ್ಟ ಇದೆ, ಇಲ್ಲ ಎಂದು ಹೇಳಬೇಡಿ, ಮತ್ತು ಆಗಲ್ಲ ಎಂದು ಅಲ್ಲಗೆಳೆಯುವುದಕ್ಕೆ ಹೋಗಬೇಡಿ ನಾನು ಮುಖ್ಯಮಂತ್ರಿ ಆಗಿಯೇ ಆಗುತ್ತೇನೆ ಇದು ಸತ್ಯ. ನನಗೆ ಆ ಭರವಸೆ ಇದೆ. ಅದನ್ನು ಕಾಯುವುದಕ್ಕಿಂತ ಹೆಚ್ಚಾಗಿ ಅದು ಯಾವುದೋ ಒಂದು ಸಂದರ್ಭದಲ್ಲಿ ಬರುತ್ತದೆ, ಈಗ ಅದರ ಬಗ್ಗೆ ಚರ್ಚೆ ಬೇಡ. ಮಾನ್ಯ ಮುಖ್ಯಮಂತ್ರಿಗಳಾಗಿದ್ದಾಗ 6 ಟಿಎಂಸಿ ನೀರು ಬಿಡುವ ಬಗ್ಗೆ ಎಲ್ಲಾ ವಿರೋಧ ಪಕ್ಷಗಳ ನಾಯಕರ ಸಭೆಯೊಂದನ್ನು ಕರೆಯಲಾಯಿತು. ಆ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ನಮಗೆ ನೀರು ಇಲ್ಲ, ಒಂದು ಹನಿ ನೀರೂ ಕೂಡ ನಮ್ಮಲ್ಲಿ ಇಲ್ಲವೆಂದು ಹೇಳಿದರು. ನಂತರ ಅವರು ದೆಹಲಿಗೆ ಹೋದರು. ದೆಹಲಿಯಲ್ಲಿ ಆಗ ಪ್ರಧಾನ ಮಂತ್ರಿಗಳಾಗಿದ್ದ ಈ ಶ್ರೀ ಪಿ.ವಿ. ನರಸಿಂಹರಾಯರ ಜೊತೆಗೆ ಅವರು ಮಾತುಕತೆ ನಡೆಸಿದರು, ಇಬ್ಬರಿಗೂ ಹೊಂದಾಣಿಕೆ ಆಯಿತು. ಅವರಿಬ್ಬರ ನಡುವೆ ಏನು ಮಾತುಕತೆ ಆಯಿತು? ಯಾವ ರೀತಿಯ ಹೊಂದಾಣಿಕೆ ಆಯಿತು? ಏಕಾಯಿತು ಎಂಬುದರ ಚಿತ್ರಣ ನಮಗೆ ಬೇಕಾಗಿಲ್ಲ. ಅಂತೂ ಹೊಂದಾಣಿಕೆ ಆಯಿತು. ಹೊಂದಾಣಿಕೆ ಆದಮೇಲೆ, ಇಲ್ಲಿ ಒಂದು ಹನಿ ನೀರೂ ಇಲ್ಲ ಎಂದು ಹೇಳುವಂತಹ ಶೌರ್ಯ ಹೊರಟು ಹೋಯಿತು. ನಮ್ಮ ರಾಜ್ಯದ ರೈತರಿಗೇ ನೀರಿಲ್ಲ, ನಮ್ಮ ಪೈರು ಒಣಗಿ ಹೋಗುತ್ತಿದ್ದೆ ಎಂದು ಹೇಳುತ್ತಿದ್ದ ಶೌರ್ಯ ಹೊರಟು ಹೋಯಿತು. ಆಗ ಅವರು

ಎಲ್ಲಾ ವಿರೋಧ ಪಕ್ಷಗಳ ನಿಯೋಗವೊಂದನ್ನು ಪ್ರಧಾನಮಂತ್ರಿಗಳ ಬಳಿಗೆ ಕರೆದುಕೊಂಡು ಹೋದರು. ಆಗ ನಾನೂ ಹೋಗಿದ್ದೆ. ಅಲ್ಲಿ ಮಾನ್ಯ ಪ್ರಧಾನ್ಯ ಮಂತ್ರಿಗಳು ಇದ್ದರು, ನಾವೆಲ್ಲಾ ಕೆಳಗೆ ಕುಳಿತಿದ್ದೆವು. ಆಗ ಅವರು ಚೆನ್ನಾಗಿ ಮಾತನಾಡಿದರು. ಅದಕ್ಕಾಗಿ ನಾವು ಕೆಳಗೆ ಕುಳಿತಿದ್ದೆವು. ಆಗ ಅವರು ಚೆನ್ನಾಗಿ ಮಾತನಾಡಿದರು. ಆದಕ್ಕಾಗಿ ನಾವು ಅವರಿಗೆ ಶಭಾಷ್‌ಗಿರಿ ಕೊಟ್ಟೆವು. ಆಗ ಅವರು ನಮ್ಮ ರಾಜ್ಯದ ರೈತರು ಬೆಳೆದಂತಹ ಭತ್ತ ಎಲ್ಲಾ ಕಡೆ ಒಣಗಿ ಹೋಗಿದೆ ಎಂದು ಒಣಗಿದ ಪೈರೊಂದನ್ನು ಅವರ ಕೈಗೆ ಕೊಟ್ಟರು. ಆದರೆ ಮಾನ್ಯ ಪ್ರಧಾನ ಮಂತ್ರಿಗಳು ಯಾವುದಕ್ಕೂ ಆಗ ಮಣಿಯಲಿಲ್ಲ. 6 ಟಿ.ಎಂ.ಸಿ. ನೀರು ಬಿಡಲೇಬೇಕೆಂಬ ಸೂಚನೆ ಬಂದಿತು. ಅವರಿಗೆ ಮಂಕು ಹಿಡಿಯಿತು. 6 ಟಿ.ಎಂಸಿ. ನೀರು ಬಿಡದಿದ್ದರೆ ಅಧಿಕಾರ ಹೋಗುತ್ತದೆ ಎಂಬ ಸೂಚನೆ ಬಂತು. ಕೊನೆಗೆ ನೀರು ಬಿಡುವುದಿಲ್ಲ ಎಂಬ ಮೊದಲಿದ್ದಂತಹ ಅವರ ನಿಲುವಿನಲ್ಲಿ ಬದಲಾವಣೆ ಆಯಿತು. ನಂತರ ಅವರು ತರಾತುರಿಯಲ್ಲಿ ಬೆಂಗಳೂರಿಗೆ ಬಂದರು. ನಮ್ಮೆಲ್ಲರನ್ನೂ ಸಭೆಗೆ ಕರೆದರು 6 ಟಿಎಂ.ಸಿ. ನೀರು ಬಿಡಬೇಕಾಗುತ್ತದೆ ಎಂದ ಹೇಳಿ ಎಲ್ಲರ ಮನಸ್ಸನ್ನು ಒಲಿಸಿಕೊಳ್ಳುವುದಕ್ಕೆ ರಾಜ್ಯದ ಕನ್ನಡ ಸಂಘ ಸಂಸ್ಥೆಗಳು, ಶಾಸಕರು, ವಿರೋಧಪಕ್ಷ ನಾಯಕರುಗಳು, ಹೀಗೆ ಎಲ್ಲರ ಸಭೆಯನ್ನು ಒಂದಲ್ಲ ಒಂದು ರೀತೀಯಲ್ಲಿ ಕರೆದರು. ನೀರನ್ನು ನಾವು ಬಿಡಲೇಬೇಕು, ನೀರನ್ನು ಬಿಡದಿದ್ದರೆ ಸರ್ಕಾರ ವಜಾ ಮಾಡುತ್ತಾರೆ ಎಂದು ಅವರು ಅವತ್ತು ಸಭೆಯಲ್ಲಿ ಹೇಳಿದರು. ಕೃಷ್ಣರಾಜನ ಸಾಗರದ ಹತ್ತಿರ ಬಂದೂಕ ಹಿಡಿದು ನಿಂತುಕೊಳ್ಳುತ್ತಾರೆ, ಎಲ್ಲವನ್ನೂ ಒಡೆದು ಹಾಕುತ್ತಾರೆ ಎಂದೆಲ್ಲಾ ಹೇಳಿದರು. ಸಣ್ಣ ಮಕ್ಕಳಿಗೆ ಪೆಪ್ಪರ್‌ಮೆಂಟ್ ಕೊಟ್ಟು ಅಳಬೇಡ ಎಂದು ಗದರಿಸುವಂತೆ ಹೇಳಿದರು, ಆ ಒಂದು ಪರಿಸ್ಥಿತಿಗೆ ಅವರು ಅವತ್ತು ನಮ್ಮನ್ನು ತಂದರು. ಒಂದು ಹನಿ ನೀರನ್ನೂ ಕೂಡ ಬಿಡಬಾರದು ಎಂದು ನಾನೊಬ್ಬನೇ ಸ್ಪಷ್ಟವಾಗಿ ಆ ಸಭೆಯಲ್ಲಿ ಹೇಳಿ ನೀರು ಬಿಡುವುದನ್ನು ವಿರೋಧಿಸಿ ಆ ಸಭೆಯಿಂದ ಹೊರಗೆ ಬಂದೆ. 'ಬೆಂಗಳೂರು ಬಂದ್ ನಡೆಸಲು ಕರೆ ನೀಡಿದೆ.6 ಟಿ.ಎಂ.ಸಿ. ನೀರು ಬಿಡಲು ಒಂದು ಕುಂಟು ನೆಪ ಮಾಡಿಕೊಂಡರು. ಕಾವೇರಿ ಸಮಸ್ಯೆ ಬಗೆಹರಿಯಬೇಕಾದರೆ ರಾಷ್ಟ್ರೀಯ ಜಲ ನೀತಿ ರೂಪಿಸಬೇಕೆಂದು ಅಭಿಪ್ರಾಯ ಪಡಲಾಯಿತು. ಮಾನ್ಯ ಪ್ರಧಾನ ಮಂತ್ರಿಗಳು ಪತ್ರ ಬರೆದು ನಾವು ರಾಷ್ಟ್ರೀಯ ಜಲ ನೀತಿಯನ್ನು ರೂಪಿಸುತ್ತೇವೆ, ಕಾವೇರಿ ನೀರು ಹಂಚಿಕೆ ಬಗ್ಗೆ ಅದರ ಆಧಾರದ ಮೇಲೆ ನಾವು ಮುಂದೆ ಮಾತುಕತೆ ಆಡೋಣ ಎಂಬ ಒಂದು ಭರವಸೆಯನ್ನು ಅವರು ಕೊಟ್ಟರು. ಆ ಭರವಸೆಯನ್ನು ನಂಬಿ, ಮುಂದೆ ರಾಷ್ಟ್ರೀಯ ಜಲ ನೀತಿ ರೂಪಿಸಲಾಗುವುದು ಎಂದು ನಿರೀಕ್ಷೆಯಿಂದ 6 ಟಿಎಂಸಿ ನೀರು ಬಿಡಲಾಯಿತು. ಹಾಗೆ ನೀರನ್ನು ಬಿಟ್ಟು ನಾವು ಅಪಾಯಕ್ಕೆ ಸಿಕ್ಕಿದೆವು. ನಂತರ ಸುದೈವದಿಂದ ಇವರೇ ಪ್ರಧಾನ ಮಂತ್ರಿಗಳಾದರು. ಆಗ ರಾಷ್ಟ್ರೀಯ ಜಲ ನೀತಿ ರೂಪಿಸುವುದಕ್ಕೆ ಇವರನ್ನು ಯಾರು ಅಡ್ಡಿಪಡಿಸಿದರು ? ಮಾನ್ಯ ನರಸಿಂಹರಾಯರು ರಾಷ್ಟ್ರೀಯ ಜಲ ನೀತಿ ರೂಪಿಸಲಾಗುವುದು ಎಂದು ಕೊಟ್ಟ ಭರವಸೆಯನ್ನು ಇವರ ಕಾಲದಲ್ಲಾದರೂ ಮಾಡಬಹುದಿತ್ತು. ಇಡೀ ಅವರ ಅಧಿಕಾರಾವಧಿಯ ಒಂದು ವರ್ಷದಲ್ಲಿ ಜಲ ನೀತಿ ರೂಪಿಸುವ ಬಗ್ಗೆ ಅವರು ಚಕಾರ ಎತ್ತಲಿಲ್ಲ. ಬೇರೆ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಕರೆಯಲಿಲ್ಲ. ಯಾವುದೇ ಕರಡು ಸೂತ್ರ, ಯೋಜನೆ ತಯಾರಾಗಲಿಲ್ಲ. ಆಗ ಅವರು ಮಂಡ್ಯ ಬಿಟ್ಟರು, ಬೆಂಗಳೂರು ಬಿಟ್ಟರು, ಕರ್ನಾಟಕ ಬಿಟ್ಟರು, ಎಲ್ಲಾ ಬಿಟ್ಟು ರಾಷ್ಟ್ರೀಯ ನಾಯಕರಾದರು. ನಮಗೂ ನಿಮಗೂ ಸಂಬಂಧ ಇಲ್ಲ,

ಕಾವೇರಿ ಬಗ್ಗೆ ನೀವು ನೀವೇ ಅಂದರೆ ಕರ್ನಾಟಕ ಮತ್ತು ತಮಿಳುನಾಡಿನವರೇ ಮಾತುಕತೆ ಆಡಿಕೊಳ್ಳಿ, ನಮ್ಮದೇನೂ ಇಲ್ಲ ಎಂದು ಅವರು ಹೇಳಿದರು. ಇದು ಅವರ ಮೂರನೇ ಪಾತ್ರ. ಹೀಗೆ ಒಟ್ಟು ಅವರ ಮೂರು ಪಾತ್ರಗಳಾಯಿತು. ನಂತರ ಅವರು ಪ್ರಧಾನಿ ಪಟ್ಟದಿಂದ ಕೆಳಗಿಳಿದರು. ಮೊನ್ನೆ ಪತ್ರಕರ್ತರು ಅವರಿಗೆ ಕಾವೇರಿ ಬಗ್ಗೆ ಪ್ರಶ್ನೆಯೊಂದನ್ನು ಕೇಳಿದಾಗ, ನಾನು ಆ ಬಗ್ಗೆ ಏನೂ ಮಾತನಾಡುವುದಿಲ್ಲ ಎಂದು ಹೇಳಿದ್ದಾರೆ. ಇದು ಅವರ 4ನೇ ಪಾತ್ರ. ಈ ನಾಲ್ಕು ಪಾತ್ರಗಳನ್ನು ತೋರಿಸಿ, ಕರ್ನಾಟಕದ ಜನರನ್ನು ಕಗ್ಗತ್ತಲ್ಲಿನಲ್ಲಿಟ್ಟು, ಕರ್ನಾಟಕದ ಜನರು ಕಣ್ಣೀರಿನಲ್ಲಿ ಕೈ ತೊಳೆಯುತಕ್ಕ ಚಿಂತನೆಯನ್ನು ಮಾಡಿ ಇವತ್ತು ಕೊನೆಗೆ ಈ ರೀತಿ ಪ್ರಾಧಿಕಾರ ರಚಿಸಬೇಕೆನ್ನುವ ಸ್ಥಿತಿಗೆ ತಂದಿದ್ದೀರಿ. ಈ ಕರಡು ಯೋಜನೆ ದಿನಾಂಕ 30.5.97ರಂದೇ ರಾಜ್ಯ ಸರ್ಕಾರಕ್ಕೆ ತಲುಪಿತ್ತು. ಆದರೆ ನೀವು ನಮ್ಮನ್ನು ಆರನೇ ತಿಂಗಳಿನಲ್ಲಿ ಸಭೆಗೆ ಕರೆದಿರಿ. ಕರಡು ನಿಮಗೆ ಐದನೇ ತಿಂಗಳಲ್ಲೇ ಬರುತ್ತದೆ, ಆದರೆ ನೀವು ನಮ್ಮನ್ನು ಆರನೇ ತಿಂಗಳಿನಲ್ಲಿ ಕರೆಯುತ್ತೀರಿ. ಏಕೆ ಈ ಕರಡು ಯೋಜನೆಯನ್ನು ತಾವು ಗೋಪ್ಯವಾಗಿ ಇಟ್ಟಿರಿ. ಏನು ನಡೆದಿದೆ ಎಂಬುದನ್ನು ಏಕೆ ನೀವು ಎಲ್ಲರ ಗಮನಕ್ಕೆ ತರಲಿಲ್ಲ? ಈ ಕರಡು ಯೋಜನೆ ನೂರಕ್ಕೆ ನೂರರಷ್ಟು ತಮಿಳುನಾಡಿನ ಕರುಣಾನಿಧಿಯವರೇ ತಯಾರು ಮಾಡಿರುವಂತಹ ಯೋಜನೆಯಾಗಿದೆ.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಬೇರೆ ಯಾರೂ ಇದನ್ನು ತಯಾರು ಮಾಡಿಲ್ಲ. ಸಮಗ್ರವಾಗಿ ಮಾನ್ಯ ಕರುಣಾನಿಧಿಯವರೇ ತಮ್ಮ ಹಿತಕ್ಕೆ ಎಷ್ಟು ಅನುಕೂಲ ಆಗಬೇಕಾಗಿತ್ತೋ ಆ ರೀತಿಯಲ್ಲಿ ತಯಾರು ಮಾಡಿದಂತಹ ಕರಡು ಯೋಜನೆ ಇದಾಗಿದೆ. ತಮಿಳುನಾಡಿಗೆ ಇದು ವರ, ಆಧರೆ ಕರ್ನಾಟಕಕ್ಕೆ ಇದು ಮರಣ ಶಾಸನ. ಮೊದಲಿನಿಂದಲೂ ಅಂದರೆ ಮಾನ್ಯ ವಿ.ಪಿ. ಸಿಂಗ್‌ರವರು, ಮಾನ್ಯ ನರಸಿಂಹರಾಯರು ಮತ್ತು ಮಾನ್ಯ ದೇವೇಗೌಡರು ಎಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಕರ್ನಾಟಕವನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ, ಕಾವೇರಿಯನ್ನು ನಮ್ಮಿಂದ ಕಿತ್ತು ಅವರಿಗೆ ಒಪ್ಪಿಸಿದ್ದಾರೆ. ಕರ್ನಾಟಕದ ಜನರನ್ನು ಸಂಪೂರ್ಣವಾಗಿ ಕಗ್ಗತ್ತಲೆಯನ್ನು ಇಟ್ಟಿದ್ದಾರೆ. ಕರ್ನಾಟಕ ಸರ್ಕಾರಗಳ ಮೇಲೆ ಜನರಲ್ಲಿ ನಂಬಿಕೆ ಹೋಗಿದೆ. ಕಾವೇರಿ ಮೇಲಿನ ನಮ್ಮ ಹಕ್ಕಿಗಾಗಿ ಕರ್ನಾಟಕದ 5 ಕೋಟಿ ಕನ್ನಡಿಗರು ಇವತ್ತು ಬೀದಿಗೆ ಇಳಿದು ಚಳುವಳಿಯನ್ನು ನಡೆಸಿ ಹೋರಾಟ ಮಾಡಬೇಕೆಂದು ಕರೆ ನೀಡುತ್ತೇನೆ. ಈ ಕರಡು ಯೋಜನೆ ಏನಿದೆ ಅದನ್ನು ನಾನು ತಿರಸ್ಕರಿಸಿ ಈ ಯೋಜನೆಗೆ ಈ ಸದನದಲ್ಲಿ ಈ ಅಗೌರವ ಸೂಚಿಸಿ ಈ ಕರಡು ಯೋಜನೆಯ ಪ್ರತಿಯನ್ನು ಹರಿದು ಹಾಕುತ್ತಿದ್ದೇನೆ. ಈ ಕರಡು ಯೋಜನೆ ನೂರಕ್ಕೆ ನೂರಷ್ಟು ನಮಗೆ ಅಪಾಯಕಾರಿಯಾಗಿದೆ ಮತ್ತು ಕೆಟ್ಟ ಯೋಜನೆಯಾಗಿದೆ. ಇದು ನಿಜವಾಗಿಯೂ ನಮಗೆ ಒಳ್ಳೆಯದು ಆಗತಕ್ಕ ರೀತಿಯಲ್ಲಿಲ್ಲ, ಆದ್ದರಿಂದ ಇದು ನಮಗೆ ಬೇಡ ಎನ್ನತಕ್ಕಂತಹ ಮಾತನ್ನು ನಾನಿಲ್ಲಿ ಹೇಳುತ್ತಿದ್ದೇನೆ. ಈಗಲೂ ಈ ಯೋಜನೆ ಬೇಕು ಎಂದು ನಿಮ್ಮ ಕೇಂದ್ರದ ವಕೀಲರುಗಳುಗಳು ಹೇಳುತ್ತಿರಬಹುದು. ಈ ಬಾರಿಯೂ ಕೇಂದ್ರದ ಬಳಿ ಒಂದು ಸರ್ವ ಪಕ್ಷಗಳ ನಿಯೋಗವೊಂದನ್ನು ರಾಜ್ಯದಿಂದ ಕರೆದುಕೊಂಡು ಹೋಗಲಾಗಿತ್ತು. ನಾನು ಅದಕ್ಕೆ ವಿರೋಧ ಮಾಡಿ ಅದರಲ್ಲಿ ಭಾಗವಹಿಸಿರಲಿಲ್ಲ. ಪ್ರತಿ ಸಾರಿಯೂ ಈ ರೀತಿ ನಿಯೋಗವನ್ನು ಕರೆದುಕೊಂಡು ಹೋಗುವಲ್ಲಿ

ಪ್ರಯೋಜನ ಇಲ್ಲ, ಅನ್ಯಾಯ ಮಾಡುತ್ತಿದ್ದೀರಿ ಎಂಬ ಮಾತನ್ನು ಹೇಳಿ ನಾನು ಅದನ್ನು ವಿರೋಧಿಸಿದ್ದೆ. ಆ ದೃಷ್ಟಿಯಿಂದ ನಾನು ತಮಗೆ ಹೇಳುತ್ತಿದ್ದೇನೆ, ನೀವು ಕರ್ನಾಟಕದ ಜನತೆಯನ್ನು ಕಗ್ಗತ್ತಲೆಯಲ್ಲಿ ಇಡಬೇಡಿ, ಕರ್ನಾಟಕದ ಜನತೆಗೆ ಮೋಸ ಮಾಡಬೇಡಿ ಎಂಬ ಮಾತನ್ನು ಹೇಳುತ್ತೇನೆ. ಕಾವೇರಿಯನ್ನು ಉಳಿಸುವುದಕ್ಕೆ ಈ ನಾಡಿನ ಜನ ನಿರಂತರವಾಗಿ ಹೋರಾಟ ಮಾಡಬೇಕೆಂದು ನಾನು ಈ ಸದನದಲ್ಲಿ ಕರೆ ನೀಡಿ ಈ ಕರಡು ಯೋಜನೆಗೆ ಅಗೌರವ ಸೂಚಿಸಿ ಅದನ್ನು ಹರಿದು ಹಾಕುತ್ತಾ ಅದನ್ನು ತಿರಸ್ಕರಿಸಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಕಾವೇರಿ ಪ್ರಾಧಿಕಾರ ರಚನೆ ಕುರಿತು ಕರಡು ಯೋಜನೆಯ ಪ್ರತಿಯನ್ನು ಹರಿದು ಹಾಕಿದರು)

+ ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಸಭಾಧ್ಯಕ್ಷರೇ, ಕಾವೇರಿ ವಿಷಯದ ಬಗ್ಗೆ ಮಾನ್ಯ ನಂಜೇಗೌಡರು ಆಗಲೇ ಹೇಳಿದಂತೆ ಈ ಸಭೆಯಲ್ಲಿ ಸಾಕಷ್ಟು ಚರ್ಚೆಯಾಗಿದೆ. ಎಷ್ಟು ಚರ್ಚೆ ಮಾಡಬೇಕಾಗಿತ್ತೋ ಅದಕ್ಕಿಂತ ಹಚ್ಚೇ ಆಗಿದೆ. ಆದರೆ ಸಮಸ್ಯೆ ಮಾತ್ರ ಪರಿಹಾರ ಆಗಲಿಲ್ಲ. 1924ನೇ ಇಸವಿಯಲ್ಲಿ ಅದಂತಹ ಒಪ್ಪಂದದಿಂದ ಹಿಡಿದು ಇಲ್ಲಿಯವರೆವಿಗೂ ಕರ್ನಾಟಕಕ್ಕೆ ಅನ್ಯಾಯವಾಗಿದೆ ಎಂಬುದು ಯಾರೂ ಅಲ್ಲಗೆಳೆಯತಕ್ಕ ವಿಷಯ ಅಲ್ಲ. ಆದರೆ ಈ ಅನ್ಯಾಯವನ್ನು ಹೇಗೆ ಸರಿಪಡಿಸಬೇಕು ಎಂಬುದು ಬಹಳ ಮುಖ್ಯವಾದಂತಹ ಪ್ರಶ್ನೆ. ಆದರೆ ದುರಾದೃಷ್ಟವಶಾತ್ ಏನಾಗಿದೆ ಎಂದರೆ, ಕರ್ನಾಟಕಕ್ಕೆ ಆಗಿರತಕ್ಕ ಅನ್ಯಾಯವನ್ನು ಸರಿಪಡಿಸತಕ್ಕ ದೃಷ್ಟಿಯಲ್ಲಿ ಒಂದು ಪ್ರಾಮಾಣಿಕವಾದ ಪ್ರಯತ್ನ ಇದುವರೆವಿಗೂ ನಡೆದಿಲ್ಲವೆಂದು ಹೇಳತಕ್ಕದ್ದು ನನ್ನ ಸ್ಪಷ್ಟವಾದಂತಹ ಅಭಿಪ್ರಾಯವಾಗಿದೆ. ಕರ್ನಾಟಕಕ್ಕೆ ಆಗಿರತಕ್ಕ ಈ ಅನ್ಯಾಯ ಮತ್ತು ನದಿ ನೀರಿನ ಹಂಚಿಕೆಯ ಬಗ್ಗೆ ಎರಡೂ ರಾಜ್ಯಗಳಲ್ಲೂ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕಿಂತ ಹೆಚ್ಚಾಗಿ ಈ ನೀರಿನ ಹೆಸರಿನಲ್ಲಿ ಮಾಡಿಕೊಂಡು ಬಂದಿರತಕ್ಕ ರಾಜಕಾರಣವೇ ಹೆಚ್ಚು ಎಂದು ಹೇಳತಕ್ಕದ್ದು ನನ್ನ ಸ್ಪಷ್ಟವಾದಂತಹ ಅಭಿಪ್ರಾಯ. ನೀರಿನ ಸಮಸ್ಯೆಯನ್ನು ಪರಿಹಾರ ಮಾಡುವುದರ ಬದಲು ಆ ಸಮಸ್ಯೆಯನ್ನು ತೆಗೆದುಕೊಂಡು ಎರಡೂ ರಾಜ್ಯಗಳಲ್ಲೂ ಕೂಡ ರಾಜಕಾರಣ ಮಾಡಿಕೊಂಡು ಬಂದಿರುವುದರಿಂದ ಈ ಸಮಸ್ಯೆ ಇವತ್ತು ಈ ಸ್ಥಿತಿಗೆ ಬಂದಿದೆ. ಯಾವ ಸ್ಥಿತಿಗೆ ನಾವು ಇವತ್ತು ತಲುಪಿಸಿದ್ದೇವೆ ಎಂದರೆ ಈ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಏನೂ ಮಾರ್ಗವೇ ಇಲ್ಲವೇನೋ ಎಂಬ ಪರಿಸ್ಥಿತಿಗೆ ನಾವು ತಲುಪಿಸಿದ್ದೇವೆ.

1.00 ಪಿ.ಎಂ

ಈ ಸದನದಲ್ಲಿ ನಾವು ಒಂದು ನಿರ್ಣಯವನ್ನು ಕೂಡ ಮಾಡಿದ್ದೇವೆ. ಆ ನಿರ್ಣಯದಲ್ಲಿ ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ ಈ ಕಾವೇರಿ ನದಿ ನೀರಿನ ವಿಷಯ ಕಾನೂನಿನ ಚೌಕಟ್ಟಿನಲ್ಲಿ ಪರಿಹಾರ ಮಾಡಲಿಕ್ಕೆ ಸಾಧ್ಯವಿಲ್ಲ. ನಾವು ಕಾನೂನಿನ ಚೌಕಟ್ಟಿನ ಹೊರಗೆ ಇದನ್ನು ಪರಿಹಾರ ಮಾಡಬೇಕಾಗುತ್ತದೆ ಎನ್ನತಕ್ಕಂಥದ್ದನ್ನು ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಅಂದರೆ ಇದರ ಅರ್ಥ ಇದು ಕೋರ್ಟು ಕಾನೂನುಗಳಿಂದ ಪರಿಹಾರ ಆಗುವುದಿಲ್ಲ. ಇದು ಮಾತುಕತೆಯ ಮುಖಾಂತರವೇ ಪರಿಹಾರ ಆಗುವುದು ಎನ್ನತಕ್ಕಂಥದ್ದನ್ನು ಸ್ಪಷ್ಟವಾಗಿ ಈ ಸದನ ಹೇಳಿರತಕ್ಕಂಥ ಅಭಿಪ್ರಾಯ. ಆದರೆ ಇದರ ಬಗ್ಗೆ ಒಂದು ಪ್ರಾಮಾಣಿಕವಾದ ಪ್ರಯತ್ನ ಆಗುತ್ತಿಲ್ಲ.

ಹಲವಾರು ಸಂದರ್ಭಗಳಲ್ಲಿ ಇದು ವಿಫಲವಾಗಿದೆ ನಿಜ. ಆದರೆ ವಿಫಲವಾಗಿದೆ ಎಂದು ಹೇಳಿ ರಾಜಕೀಯ ಮಾಡತಕ್ಕಂಥ ಅವಶ್ಯಕತೆ ಏನೂ ಇದ್ದಿರಲಿಲ್ಲ. ಇವೊತ್ತು ಪ್ರಾಧಿಕಾರ ರಚನೆ ಆಗತಕ್ಕಂಥ ಒಂದು ಪ್ರಶ್ನೆಯನ್ನು ಕೇಂದ್ರ ಸರ್ಕಾರ ನಮ್ಮ ಮುಂದೆ ಪ್ರಸ್ತಾಪ ಮಾಡಿದೆ. ಇದರ ಬಗ್ಗೆ ಹಲವಾರು ಭಿನ್ನಾಭಿಪ್ರಾಯಗಳು, ಚರ್ಚೆಗಳು ಇವೆ. ನನ್ನ ಅಭಿಪ್ರಾಯ ಇಷ್ಟೆ. ಈಗ ಮಾತುಕತೆ ಮುಖಾಂತರವೇ ಬಗೆಹರಿಸಿಕೊಳ್ಳತಕ್ಕಂಥ ಒಂದೇ ಒಂದು ವಿಚಾರ ಬಹಳ ಪ್ರಮುಖವಾಗಿರತಕ್ಕಂಥದ್ದು. ಇದೊಂದೇ ದಾರಿ ನಮಗೆ ಉಳಿದಿರತಕ್ಕಂಥದ್ದು. ಅದು ಬಿಟ್ಟು ಬೇರೆ ಯಾವುದೇ ರೀತಿಯಲ್ಲಿ ಈ ಸಮಸ್ಯೆ ಪರಿಹಾರ ಮಾಡುವುದಕ್ಕೆ ಆಗುವುದಿಲ್ಲ. ಕಾವೇರಿ ಜಲ ವಿವಾದವನ್ನು ಬೀದಿ ಜಗಳದಲ್ಲಿ ಪರಿಹಾರ ಮಾಡುವುದಕ್ಕೆ ಸಾಧ್ಯವಿಲ್ಲ. ಈಗಾಗಲೇ ಒಂದು ಪ್ರಾಧಿಕಾರದ ರಚನೆ ಆಗಿದೆ. ಆ ಪ್ರಾಧಿಕಾರದ ರಚನೆಯನ್ನು ವಿರೋಧ ಮಾಡತಕ್ಕಂಥ ಅವಶ್ಯಕತೆ ಇಲ್ಲ. ಆದರೆ ಪ್ರಾಧಿಕಾರದ ರಚನೆಯಲ್ಲಿ ಅವರು ಕೆಲವು ಅಂಶಗಳನ್ನು ತೋರಿಸಿದ್ದಾರೆ. ಆ ಅಂಶಗಳನ್ನು ನಾವು ನಿರಾಕರಿಸಬೇಕಾಗುತ್ತದೆ. ಏಕೆಂದರೆ ಪ್ರಾಧಿಕಾರದಲ್ಲಿ ಏನು ಅವರು ಅಂಶಗಳನ್ನು ನಮೂದಿಸಿದ್ದಾರೆ, ಆ ಅಂಶಗಳು ಕರ್ನಾಟಕದ ಹಿತಕ್ಕೆ ಧಕ್ಕೆ ತರುವಂಥದ್ದು ಆಗಿರುವುದರಿಂದ ಆ ಪ್ರಾಧಿಕಾರದ ಕರಡು ಸೂಚನೆಗಳು ಏನು ಇವೆ ಅವುಗಳನ್ನು ನಾವು ತಿರಸ್ಕರಿಸಬೇಕಾಗುತ್ತದೆ. ಆದರೆ ಪ್ರಾಧಿಕಾರವನ್ನು ತಿರಸ್ಕರಿಸುವುದು ಈ ಹಂತದ್ಲಿಲ ಸರಿಯಿಲ್ಲ. ಏಕೆಂದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ನಾವೆಲ್ಲರೂ ಸೇರಿ ಸಂವಿಧಾನದ ಚೌಕಟ್ಟಿನಲ್ಲಿ ಕೆಲಸ ಮಾಡತಕ್ಕಂಥ ಸಂದರ್ಭದಲ್ಲಿ, ಪಾರ್ಲಿಮೆಂಟರಿ ವ್ಯವಸ್ಥೆಯಲ್ಲಿ, ಪಾರ್ಲಿಮೆಂಟರಿ ಪ್ರಜಾಪ್ರಭುತ್ವದಲ್ಲಿ ಕೆಲಸ ಮಾಡತಕ್ಕಂಥ ಸಂದರ್ಭದಲ್ಲಿ, ಈ ದೇಶದ ಕಾನೂನನ್ನು, ಈ ನೆಲದ ಕಾನೂನನ್ನು ಉಲ್ಲಂಘನೆ ಮಾಡಲಿಕ್ಕೆ ಪ್ರಜಾಪ್ರಭುತ್ವದಲ್ಲಿ ಜನತೆಯಿಂದ ಆಯ್ಕೆಯಾದಂಥವರು ನಾವು ಅದಕ್ಕೆ ಎಡೆ ಮಾಡಿಕೊಡಬಾರದು. ಆದರೆ ಪ್ರಾಧಿಕಾರದಲ್ಲಿರತಕ್ಕಂಥ ಯಾವ ಯಾವ ಅಂಶಗಳು ಕರ್ನಾಟಕಕ್ಕೆ ವಿರೋಧವಾಗಿದೆ ಆ ಎಲ್ಲಾ ಅಂಶಗಳನ್ನು ತಿರಸ್ಕಾರ ಮಾಡಲೇಬೇಕಾಗುತ್ತದೆ. ಇಲ್ಲದಿದ್ದರೆ ಕರ್ನಾಟಕದ ಹಿತವನ್ನು ಕಾಪಾಡಲಿಕ್ಕೆ ಸಾಧ್ಯವಿಲ್ಲ. ಹೀಗಾಗಿ ಇದು ಮಾತುಕತೆ ಮೂಲಕವೇ ಪರಿಹಾರವಾಗಬೇಕು. ಬೇರೆ ಯಾವುದೇ ರೀತಿಯಲ್ಲಿ ಎಷ್ಟು ವರ್ಷಗಳು ನಡೆದರೂ ಪರಿಹಾರ ಆಗುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ 1924ನೇ ಇಸ್ವಿಯಲ್ಲಿ ಆದಂಥ ಒಪ್ಪಂದ ಆನಂತರ 1974ನೇ ಇಸ್ವಿಯಲ್ಲಿ ಒಪ್ಪಂದವಾಗಿ 23 ವರ್ಷಗಳಾದರೂ ಒಂದು ಹೊಸ ಒಪ್ಪಂದ ಮಾಡಿಕೊಳ್ಳಲಿಕ್ಕೆ ಯಾರಿಂದಲೂ ಸಾಧ್ಯವಾಗಲಿಲ್ಲ. ಯಾರೂ ಆ ದಿಕ್ಕಿನಲ್ಲಿ ಪ್ರಯತ್ನ ಮಾಡಲಿಲ್ಲ. ಹೀಗಾಗಿ ಮಾತುಕತೆ ಮುಖಾಂತರ ಪರಿಹಾರ ಆಗಬೇಕು. ಹಾಗೂ ಪ್ರಾಧಿಕಾರದಲ್ಲಿರತಕ್ಕಂಥ ಅಂಶಗಳನ್ನು ನಾವು ತಿರಸ್ಕರಿಸಬೇಕಾಗುತ್ತದೆ. ಎರಡೂ ರಾಜ್ಯದಲ್ಲಿರತಕ್ಕಂಥ ಎಲ್ಲಾ ರಾಜಕೀಯ ಪಕ್ಷಗಳು ನೀರಿನ ವಿಷಯದಲ್ಲಿ ರಾಜಕಾರಣವನ್ನು ಮಾಡುವುದನ್ನು ಬಿಟ್ಟು ಪ್ರಾಮಾಣಿಕವಾಗಿ ನೀರಿನ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಮತ್ತೊಮ್ಮೆ ಈ ಸದನದ ಮುಖಾಂತರ ಮನವಿ ಮಾಡಿಕೊಳ್ಳುತ್ತ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ ಕ್ಷೇತ್ರ) : ಸನ್ಮಾನ್ಯ ಸಭಾಧ್ಯಕ್ಷರೆ, ಕಾವೇರಿ ವಿಷಯ ಪದೇ ಪದೇ ಕಾವು ಏರುತ್ತಿರುತ್ತದೆ, ತಣ್ಣಗೆ ಆಗುತ್ತಿರುತ್ತದೆ. ನಮ್ಮ ಹಳ್ಳಿಕಡೆ ಒಂದು ಗಾದೆ ಹೇಳುತ್ತಾರೆ

"ನಿನಗೆ ದೇವರು ಇರೋದು ಏಕೆ ಅಂದರೆ ನನ್ನ ಗಂಡನೆ ಎದೆ ಕೆರಕೊಂಡು ತಿನ್ನೋದಕ್ಕೆ ಅಂತ ಹೇಳುತ್ತಾರೆ. ಅಂದರೆ ಅವರಲ್ಲಿ ದೇವರು ಇರೋದು ಏಕೆ ಎಂದರೆ ಕಾವೇರಿ ಪ್ರದೇಶದ ಸೆರೆ ಕೆರಕೊಂಡು ತಿನ್ನೋಕೆ" ಈ ಪರಿಸ್ಥಿತಿ ಸೃಷ್ಟಿಯಾಗಿದೆ. ಯಾವುದೇ ಪಕ್ಷಗಳು, ಯಾವುದೇ ಕಾರಣಕ್ಕೂ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗಿಲ್ಲ, ಆಯಾಯ ಕಾಲಕ್ಕೆ ಆಯಾಯ ರಾಜಕೀಯ ಪಕ್ಷಗಳು ಅಧಿಕಾರಕ್ಕೆ ಬಂದಾಗ ತಮ್ಮ ಖರ್ಚಿಯ ಉಳಿವಿಗಾಗಿ, ತಮ್ಮ ಪಕ್ಷದ ಉಳಿವಿಗಾಗಿ ಪದೇ ಪದೇ ಆಯಾ ಸಮಯಕ್ಕೆ ತಕ್ಕಂತೆ ತೀರ್ಮಾನಗಳನ್ನು ತೆಗೆದುಕೊಂಡು ಬಂದಿವೆ. ಆದರೂ ಆಕಸ್ಮಾತ್ ಈ ಸಮಸ್ಯೆ ತೀರ್ಮಾನವಾದರೆ, ಇಷ್ಟು ಟಿ.ಎಂ.ಸಿ. ನೀರು ಕರ್ನಾಟಕದವರು ಬಿಡಲೇಬೇಕು ಎಂದು ತೀರ್ಮಾನವಾದರೆ ನಾವು ಅದನ್ನು ಅನುಷ್ಠಾನಕ್ಕೆ ತರುವುದಕ್ಕೆ ಸಾಧ್ಯವಿಲ್ಲ. ಈಗ ಉಳಿದುಕೊಂಡಿರುವುದು ಒಂದೇ ದಾರಿ ಅದು ಮಾತುಕತೆ ಮಾತ್ರ. ಎರಡೂ ರಾಜ್ಯದ ರೈತರು ಸೇರಿ ಮಾತುಕತೆಗಳನ್ನು ಆಡಿ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕು. ಈಗಾಗಲೇ ಮಾನ್ಯ ನಂಜೇಗೌಡರು ಒಂದು ಸಾರಿ ಮಾತುಕತೆಯನ್ನು ಆಡಿದ್ದರು ಎಂದು ಕಾಣಿಸುತ್ತದೆ. ಡಿಸ್ಟ್ರೆಸ್ ಫಾರ್ಮ್ಯೂಲಾ ಮೂಲಕ ಇದನ್ನು ಬಗೆಹರಿಸುವುದು ಎಂದು ಒಂದು ಮಾತನ್ನು ಹಿರಿಯರು ಹೇಳಿದರು. ಆದರೆ ಅದು ಕೂಡ ಅಪಾಯದ ಸಂಕೇತ ಎಂದು ನನ್ನ ವೈಯಕ್ತಿಕ ಅನಿಸಿಕೆ. ನಮಗೆ ಎಷ್ಟು ನೀರು ಬರುತ್ತದೆ ಅಷ್ಟು ಭಾಗವನ್ನು ಅವರು ನಮಗೆ ಬಿಟ್ಟುಕೊಟ್ಟರೆ, ಅವರಿಗೂ ಬೆಳೆ ಇಲ್ಲ, ನಮಗೂ ಬೆಳೆ ಇಲ್ಲ. ಉದಾಹರಣೆಗೆ ನಮ್ಮೂರಿನಲ್ಲಿ ಇಬ್ಬರು ಇದ್ದರು, ತೆಂಗಿನ ಮರ ಹತ್ತೋಣ ಎಂದು ಮಾತನಾಡಿಕೊಂಡು ಹೋದರು. ಇದು ಬಹಳ ದೊಡ್ಡ ಮರ, ಇದನ್ನು ಒಬ್ಬನಿಂದ ಹತ್ತಲು ಸಾಧ್ಯವಿಲ್ಲ, ನೀನು ಅರ್ಧ ಮರ ಹತ್ತು ನಾನು ಅರ್ಧ ಮರ ಹತ್ತುತ್ತೇನೆ ಎಂದು ಹೇಳಿದ. ತೆಂಗಿನ ಮರವನ್ನು ಇಬ್ಬರೂ ಅರ್ಧ ಅರ್ಧ ಹತ್ತುವುದಕ್ಕೆ ಸಾಧ್ಯವೇ ಇಲ್ಲ. ಹಾಗೆ ಈ ಡಿಸ್ಟ್ರೆಸ್ ಫಾರ್ಮ್ಯುಲ . ಡಿಸ್ಟ್ರೆಸ್ ಫಾರ್ಮ್ಯುಲದಲ್ಲಿ ಏನಾಗುತ್ತದೆ ಎಂದರೆ ಮೂರು ಟಿ.ಎಂ.ಸಿ. ನೀರು ನೀನು ಮಡಗಿಕೊ, ನಾನು ಮೂರು ಟಿಎಂ.ಸಿ ನೀರನ್ನು ಮಡಗಿಕೊಳ್ಳುತ್ತೇನೆ ಎಂದರೆ ಅವನಿಗೆ ಎರಡು ತಿಂಗಳು ಬೆಳೆ, ನನಗೆ ಎರಡು ತಿಂಗಳು ಬೆಳೆ ಎಂದರೆ ಬೆಳೆಯೇ ಹೊರಟು ಹೋಗುತ್ತದೆ. ಆದಕಾರಣ ಡಿಸ್ಟ್ರೆಸ್ ಫಾರ್ಮ್ಯುಲಾ ಕೂಡ ಅತ್ಯಂತ ಅಪಾಯಕಾರಿಯಾದ ಪರಿಸ್ಥಿತಿ. ಆ ಮೇಲೆ ಇನ್ನೊಂದು ಬಹಳ ಮುಖ್ಯವಾದ ವಿಷಯ. ಯಾವ ಯಾವ ಮಣ್ಣುಗಳಿಗೆ ಎಷ್ಟೆಷ್ಟು ನೀರಿನ ಅಂಶಬೇಕು ಎಂದು ನಾವು ಯೋಚನೆ ಮಾಡಿದ್ದೇವೆ. ತಮಿಳುನಾಡಿನಲ್ಲಿ ಒಂದು ಮುಕ್ಕಾಲು ಅಡಿ ನೀರು ನಿಂತಿರುತ್ತದೆ. ನಾನು ನೋಡಿದ್ದೇನೆ ಕೆಲವು ಸಿನೆಮಾಗಳಲ್ಲಿ ಮುಕ್ಕಾಲು ಅಡಿ ನೀರು ನಿಂತಿರುತ್ತದೆ, ಒಂದು ಅಡಿ ಪೈರು ಇರುತ್ತದೆ. ಒಂದು ಅಡಿ ಭತ್ತವನ್ನು ಒಂದು ತಿಂಗಳಲ್ಲಿ ನಾಟಿ ಮಾಡುತ್ತಾರೆ. ನಮ್ಮಲ್ಲಿ 20-25ದಿವಸದ ಭತ್ತದ ಪೈರನ್ನು ಇಷ್ಟಿಷ್ಟು ಉದ್ದರ ಪೈರನ್ನು ನಾವು ನಾಟಿ ಮಾಡುತ್ತೇವೆ. ಅಂದರೆ ಸಮದಟ್ಟಾದ ಜಮೀನಿಗೆ ಹೆಚ್ಚು ನೀರು ಬಂದು ಎಲ್ಲಾ ಜೌಗಾಗಿದೆ. ನಿಜವಾಗಿ ತಮಿಳುನಾಡಿಗೂ ಬಹಳ ಜವಾಬ್ದಾರಿ ಇದೆ, ಆ ಜೌಗಿನ ಅಂಶವನ್ನು ಜಾಸ್ತಿ ಮಾಡಿದರೆ ಇಡೀ ತಮಿಳುನಾಡಿನ ಏನು ಯೋಜನೆ ಇದೆ ಅದೆಲ್ಲಾ ನಾಶವಾಗಿಹೋಗುತ್ತದೆ. ನಾವು ಈಗಾಗಲೇ ರಾಯಚೂರಿನಲ್ಲಿ ಮಾಡಿಕೊಂಡಿದ್ದೇವೆ. ಹನ್ನೆರಡು ಮೂಟೆ ರಸಾಯನಿಕ ಗೊಬ್ಬರ ಉಪಯೋಗಿಸಿ ಒಂದು ಎಕರೆಯಲ್ಲಿ ಭತ್ತ ಬೆಳೆಯುತ್ತಾರೆ. ಆ ಭತ್ತವನ್ನು ಊಟ ಮಾಡಿದರೆ ಏನಾಗಬಹುದು ಎಂದು ತಾವು ಯೋಚನೆ

ಮಾಡಬಹುದು. ಆ ಮಟ್ಟದ ಪರಿಸ್ಥಿತಿ ಸೃಷ್ಟಿಯಾಗಿದೆ. ಆ ಮೇಲೆ ಕರ್ನಾಟಕದಲ್ಲಿ ಯಾವುದೇ ಡ್ಯಾಮ್ ಮಾಡಿದರೆ ಹೆಚ್ಚುವರಿ ನೀರು ತಮಿಳುನಾಡಿಗೆ ಹೋಗುತ್ತದೆ. ತಮಿಳುನಾಡಿನ ಹೆಚ್ಚುವರಿ ನೀರು ಎಲ್ಲಿಗೆ ಹೋಗುತ್ತದೆ? ಅದು ಬಂಗಾಳಕೊಲ್ಲಿಗೆ ಹೋಗುತ್ತದೆ. ಆದ್ದರಿಂದ ಇದು ಏನಾಗಿದೆ ಎಲ್ಲಾ ರೀತಿಯಲ್ಲಿ ರಾಜಕಾರಣ ಆಗಿದೆ. ಮೊನ್ನೆ ಮಾನ್ಯ ಪ್ರಧಾನ ಮಂತ್ರಿಗಳು ಮಾತನಾಡುವಾಗ ಕರ್ನಾಟಕದ ಜನರು ಬಹಳ ಶಾಂತಿಪ್ರಿಯರು, ಭಾರೀ ಗುಣವಂತರು, ಯಾವುದೇ ಚಳವಳಿಯನ್ನು ಮಾಡುವುದಿಲ್ಲ, ಎಲ್ಲದಕ್ಕೂ ಹೂಂ ಎನ್ನುತ್ತಾರೆ ಎಂದು ಹೇಳಿದರು. ಅದೇ ತಮಿಳುನಾಡು ಮೇಲೆ ಇದ್ದಿದ್ದರೆ ಇವೊತ್ತು ಇಬ್ಬರೂ ತಿಪ್ಪರಲಾಗ ಹಾಕಿದರೂ ಅರ್ಧ ಟಿಎಂ.ಸಿ ನೀರು ಬಿಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಸರ್ಕಾರದವರು ಹಾಗೂ ನಾವೆಲ್ಲರೂ ರಾಜಕಾರಣವನ್ನು ಮಾಡದೆ ಈ ಒಂದು ಸಮಸ್ಯೆಯನ್ನು ಪರಿಹರ ಮಾಡಬೇಕು ಅದು ಮಾತುಕತೆಯಿಂದ ಮಾತ್ರ ಸಾಧ್ಯ. ನೀವು ಆಡಳಿತ ಪಕ್ಷದವರು ಎಲ್ಲವನ್ನು ಗೋಪ್ಯವಾಗಿಟ್ಟು ನಾವೇ ಎಲ್ಲವನ್ನು ಮಾಡುತ್ತೇವೆ ಎಂದು ಬಹಳ ಪ್ರಯತ್ನ ಪಟ್ಟಿದ್ದೀರಿ. ಆದರೆ ಏನು ಮಾಡುವುದಕ್ಕೆ ಆಗಲಿಲ್ಲ ವಾಪಸ್ಸು ಬಂದಿದ್ದೀರಿ. ಆದ್ದರಿಂದ ಇಡೀ ವಿಚಾರ ಸೌಹಾರ್ದಯುತವಾಗಿ, ಶಾಂತಿಯುತವಾಗಿ ಮಾಡಬೇಕಾದರೆ ಅದು ಮಾತುಕತೆ ಮೂಲಕ ಬಗೆಹರಿಸಲಿಕ್ಕೆ ಸಾಧ್ಯ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ) : ಮಾನ್ಯ ಅಧ್ಯಕ್ಷರೆ, ಕಾವೇರಿ ನದಿ ನೀರಿನ ಪ್ರಶ್ನೆ ಈ ಸದನದಲ್ಲಿ ಅನೇಕ ವರ್ಷಗಳಿಂದ ಚರ್ಚೆಯಾಗುತ್ತಿದೆ. ಈಗ ಈ ವಿಚಾರ ಟ್ರಿಬ್ಯೂನಲ್‌ನಲ್ಲಿ ಕೂಡ ಇದೆ. ಆದ್ದರಿಂದ ಅದರ ಇತಿ ಮಿತಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಕೆಲವು ವಿಚಾರಗಳನ್ನು ಮಾತ್ರ ತಮ್ಮ ಮುಖಾಂತರ ಈ ಸದನದ ಗಮನಕ್ಕೆ ತರಲು ನಾನು ಅಪೇಕ್ಷೆ ಪಡುತ್ತೇನೆ. ನಮ್ಮ ನಾಯಕರು ಮತ್ತು ಬೇರೆ ಬೇರೆ ಪಕ್ಷದ ಮುಖಂಡರು ಈ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಕೂಡ ಪ್ರಾಧಿಕಾರದ ಸ್ಥಾಪನೆಯ ಬಗ್ಗೆ ವಿರೋಧ ಸೂಚನೆ ಮಾಡಲಿಕ್ಕೆ ನಮ್ಮನ್ನೆಲ್ಲಾ ಕರೆದುಕೊಂಡು ದೆಹಲಿಗೆ ಒಂದು ನಿಯೋಗವನ್ನು ತೆಗೆದುಕೊಂಡು ಹೋಗಿದ್ದಾರೆ. ಇವೊತ್ತು ತಾತ್ಕಾಲಿಕವಾಗಿ ಟ್ರಿಬ್ಯೂನಲ್‌ನ ಅಧಿಸೂಚನೆಯ ಆಧಾರದ ಮೇಲೆ ಕರಡು ಅಧಿಸೂಚನೆ ಹೊರಡಿಸಲಿಕ್ಕೆ ಕೇಂದ್ರ ಸರ್ಕಾರ ಪ್ರಯತ್ನ ಮಾಡಿದೆ ಎಂದು ಏಪ್ರಿಲ್ 97ರಂದು ಸುಪ್ರೀಂ ಕೋರ್ಟ್‌ನಲ್ಲಿ ತಮಿಳುನಾಡಿನ ಒಂದು ಏನು ದಾವೆ ಬಂತು, ಆ ದಿವಸ ಕೇಂದ್ರ ಸರ್ಕಾರವನ್ನು ಪ್ರತಿನಿಧಿ ಮಾಡತಕ್ಕಂಥ ಅಟಾರ್ನಿ ಜನರಲ್ ಇವರ ಒಂದು ಮುಚ್ಚಳಿಕೆ, ಒಂದು ಅಂಡರ್ ಟೇಕಿಂಗ್ ಕೊಟ್ಟರೆ, ನಾವು ಸ್ಕೀಮ್ ಅಂಡರ್ ಸೆಕ್ಷನ್ 6(ಎ) ಪ್ರಕಾರ ನಾವು ಈ ಬಗ್ಗೆ ಒಂದು ಯೋಚನೆಯನ್ನು ಮಾಡುತ್ತೇವೆ ಅಥವಾ ಒಂದು ಸ್ಕೀಮ್ ಮಾಡುತ್ತೇವೆ. ಅದನ್ನು ಎಂಟು ವಾರದೊಳಗೆ ಸಂಬಂಧಪಟ್ಟ ಎಲ್ಲಾ ರಾಜ್ಯಗಳಿಗೆ ಕಳುಹಿಸಿ, ಅದಕ್ಕೆ ಅಂತಿಮ ಸ್ವರೂಪವನ್ನು ಕೊಡುತ್ತೇವೆ ಎಂದು ಹೇಳಿಕೆ ಕೊಟ್ಟಿರು. ಈಗಾಗಲೇ ಈ ವಿಚಾರ ಇಲ್ಲಿ ಪ್ರಸ್ತಾಪ ಆಗಿದೆ. ರಾಜ್ಯಗಳು ಇದಕ್ಕೆ ಹೇಗೆ ಸ್ಪಂದಿಸಿದ್ದವು ಎಂದು ಹೇಳಿದ್ದಾರೆ. ಅನಿಲ್ ದಿವಾನ್ ಇವರು ನಮ್ಮ ಕರ್ನಾಟಕ ರಾಜ್ಯದ ಪರ ಸುಪ್ರೀಂ ಕೋರ್ಟ್‌ನಲ್ಲಿ ವಾದ ಮಾಡುವಂತಹ ವಕೀಲರು, ಇವರು ಮತ್ತು ತಮಿಳುನಾಡಿನ ವಕೀಲರು ಇಬ್ಬರೂ ಕೂಡ ಈಗಿನ ಪರಿಸ್ಥಿತಿಯಲ್ಲಿ ಅಟಾರ್ನಿ ಜನರಲ್ ಏನು ಸೂಚನೆ ಕೊಟ್ಟಿದ್ದಾರೆ, ಅದನ್ನು ಸ್ವೀಕಾರ ಮಾಡುವುದು ಮತ್ತು ಆ ದಿಸೆಯಲ್ಲಿ

ಕಾರ್ಯೋನ್ಮುಖ ಆಗುವುದು ಒಳ್ಳೆಯದು ಎಂದು ತಮ್ಮ ಸಂಪೂರ್ಣವಾದ ಒಪ್ಪಿಗೆ ಕೊಟ್ಟಿದ್ದಾರೆ. ಅದರಲ್ಲಿ ಏನು ಕರಾರುಗಳು ಇಲ್ಲ. Operational portion of the Order - It would be appropriate to defer further hearing of the case to enable the Union Government to try and resolve the controversy between the two States. ಇದರಲ್ಲಿ ಪ್ರಮುಖವಾಗಿ ಒಂದೆರಡು ಅಂಶಗಳು ಇವೆ. ಒಂದನೆಯದು ಅಟಾರ್ನಿ ಜನರಲ್‌ರವರು ಇವತ್ತು ಒಂದು ಸ್ಕೀಮ್ ಮಾಡುತ್ತೇವೆಂದು ಏನು ಹೇಳಿದ್ದಾರೆ, ಅದು 1991ರಲ್ಲಿ ಫಸ್ಟ್ ಆರ್ಡರ್ ಇಂಟೆರಿಂ ಆರ್ಡರ್ ಕೊಟ್ಟ ಒಂದು ದಿವಸದಿಂದ ಏಪ್ರಿಲ್ 97ರವರೆ ಏನು ಘಟನೆಗಳು ನಡೆದಿದ್ದವು, ಈ ಘಟನೆಗಳು ಒಂದು ರೀತಿಯಲ್ಲಿ ನಿಸ್ತೇಜ್ ಮಾಡತಕ್ಕಂಥ ಘಟನೆಗಳು ಕೇಂದ್ರ ಸರ್ಕಾರ ಆ ಘಟನೆಗಳ ಲಾಭವನ್ನು ಪಡೆದುಕೊಳ್ಳಲಿಲ್ಲ, ಆ ಘಟನೆಗಳ ಲಾಭವನ್ನು ಯಾವ ರಾಜ್ಯಸರ್ಕಾರಗಳು ಪಡೆಯದ ರೀತಿಯಲ್ಲಿ In a vacuum the Attorney General has acted, in a vacuum these Advocates have acted. There is absolutely no continuity on the part of Government of India, there is absolutely no continuity on the part of Karnataka Government which should have been more concerned about it. ಯಾವ ರೀತಿಯಲ್ಲಿ, ಕೋರ್ಟ್‌ನಲ್ಲಿ ಒಂದು ಕೇಸ್ ಡೆವಲಪ್ ಮಾಡುವಾಗ, ಅದೂ ಕೂಡ ಇಂಥ ಸೂಕ್ಷ್ಮವಾದ ವಿವಾದವನ್ನು ಮಾಡುವಾಗ, ಇವರು ವ್ಯವಹಾರ ಮಾಡುವಾಗ 1991 ರಿಂದ 97ರ ಏಪ್ರಿಲ್‌ವರೆಗೆ ನಡೆದಂಥ ಈ ಎಲ್ಲಾ ಘಟನೆಗಳನ್ನು ಮರೆತು ಒಂದು ಹೊಸದಾದಂಥ ಪ್ರಕ್ರಿಯೆಯನ್ನು ಪ್ರಾರಂಭಮಾಡುವಂಥ ರೀತಿಯಲ್ಲಿ ಇವತ್ತು ಕೇಂದ್ರ ಸರ್ಕಾರ ಹೋಗಿದೆ, ರಾಜ್ಯ ಸರ್ಕಾರವು ಹೋಗಿದೆ. ಇದರ ಬಗ್ಗೆ ನಮ್ಮದು ವಿಶೇಷವಾದ ಆಕ್ಷೇಪ. ಇಲ್ಲಿ ಸದನದಲ್ಲಿ ಒಂದು resolution ಆಗಿದೆ, interim order ಬಗ್ಗೆ ಸಾಕಷ್ಟು ಚರ್ಚೆ ಆಗಿದೆ. ಮಾನ್ಯ ದೇವೇಗೌಡರು ಇಲ್ಲಿ ಮಂತ್ರಿಗಳಾಗಿದ್ದಾಗ, ಸುಪ್ರೀಂ ಕೋರ್ಟ್‌ನಲ್ಲಿ ಈ ಕೇಸ್ ಬಂದಿತ್ತು. ಸುಪ್ರೀಂ ಕೋರ್ಟ್‌ನಲ್ಲಿ ಈ ಕೇಸ್ ಬಂದಾಗ, ಅವರು ಇದು ಕೋರ್ಟ್‌ನಲ್ಲಿ ತೀರ್ಮಾನ ಆಗತಕ್ಕಂತಹ ವಿಚಾರ ಅಲ್ಲ ಎಂಬ ಒಂದು ಸೈದ್ಧಾಂತಿಕವಾದ ನಿಲುವನ್ನು ತಾಳಿ, ಇದು ಮಾತುಕತೆ ಮೂಲಕ ಮಾಡಬೇಕೆಂದು ಹೇಳಿದ್ದರು. No. less than a person like Prime Minister of the country ಇದರ ಬಗ್ಗೆ ಹಸ್ತಕ್ಷೇಪ ಮಾಡಬೇಕು, ಅವರಿಗೆ ನಾವು ಜವಾಬ್ದಾರಿಯನ್ನು ಕೊಟ್ಟಿದ್ದೇವೆಂದು ಹೇಳಿ, ಸುಪ್ರೀಂ ಕೋರ್ಟ್‌ನವರು ಒಂದು ಜವಾಬ್ದಾರಿಯನ್ನು ಕೊಟ್ಟಿದ್ದಾರೆ. ಆ ಜವಾಬ್ದಾರಿಯಿಂದ ಸುಪ್ರೀಂ ಕೋರ್ಟ್ ನುಣುಚಿಕೊಳ್ಳುವ ಹಾಗೆ ಇಲ್ಲ. ಆ ಜವಾಬ್ದಾರಿಯಿಂದ ಯಾವುದೇ ಸಂದರ್ಭದಲ್ಲಿ, ಯಾರೇ ಪ್ರಧಾನ ಮಂತ್ರಿಗಳಾಗಿರಲಿ, ನುಣುಚಿಕೊಳ್ಳುವಂತೆ ಇಲ್ಲ. ಕೇಂದ್ರ ಸರ್ಕಾರ ಅದರ ಬಗ್ಗೆ ಒಂದು permanent entity. Process should continue. ಎಂದು ಪತ್ರ ಬರೆದರು. ಅದರ ಬಗ್ಗೆ ಬಹಳ ವಿವರವಾಗಿ ಹೇಳುವುದಿಲ್ಲ. ಸೂಕ್ಷ್ಮವಾಗಿ ಹೇಳುತ್ತೇನೆ. ಪ್ರಧಾನಮಂತ್ರಿಗಳು ಪತ್ರ ಬರೆದರು, ಈ ರೀತಿಯಲ್ಲಿ ತೀರ್ಮಾನ ಆಗುವುದಿಲ್ಲ, ತೀರ್ಮಾನ ಆಗಬೇಕಾದರೆ ನಿಸ್ಸಂದೇಹವಾಗಿ ಕೇಂದ್ರ ಜಲಸಂಪನ್ಮೂಲ ಮಾರ್ಗದರ್ಶನ, ಗೈಡ್‌ಲೈನ್ಸ್ ರೂಪಿಸಿದರೆ ಮಾತ್ರ ಅದು ತೀರ್ಮಾನ ಆಗುವುದಕ್ಕೆ ಸಾಧ್ಯ. "ನಿಸ್ಸಂದೇಹವಾಗಿ" This is the word used by the Prime Minister of the country, Mr. P.V. Narasimha Rao. ಇವತ್ತು ನಿಸ್ಸಂದೇಹವಾದಂಥ ನಿರ್ಣಯಾತ್ಮಕವಾದಂಥ

ವಿಚಾರವನ್ನು ಕೇಂದ್ರಸರ್ಕಾರ ಪಡೆದುಕೊಂಡ ಮೇಲೆ ಆ ಆಧಾರದಮೇಲೆ ಅವರು ಕೊಟ್ಟಿರತಕ್ಕಂತಹ ವಚನದ ಪ್ರಕಾರ, ನೀರು ಬಿಡುಗಡೆಯಾಯಿತು. That is the assurance given to the entire State.

It is not given to the State Government only. Today, the State Government is accountable to the people of the State, to implement it. As per law, Government of India is estopped from giving an undertaking to the Supreme Court in contravention of the assurance held out to the basin States. ಇದು ವಚನದ, ಪದ್ಧತಿಯ ಪ್ರಶ್ನೆ ಇದೆ. ಒಂದು ನಿಲುವಿನ ಪ್ರಶ್ನೆ, ಇದಕ್ಕೆ ಇಡೀ ಕರ್ನಾಟಕದ ಐದು ಕೋಟಿ ಜನರಿಗೆ ಕೊಟ್ಟಂತಹ ವಚನದಿಂದ ಕೇಂದ್ರ ಸರ್ಕಾರ ಹಿಂದಕ್ಕೆ ಹೋಗಲಿಕ್ಕಿಲ್ಲ, ಹೋಗುವುದಕ್ಕೆ ಸಾಧ್ಯವಿಲ್ಲ. ಅದರ ಆಧಾರದ ಮೇಲೆ ಕೇಂದ್ರ ಸರ್ಕಾರ The Prme Minister has gone a step forward. ಅಲಗ್ ಸಮಿತಿ ನೇಮಕ ಮಾಡಿದ್ದರು. Crop assessment ಮಾಡಲಿಕ್ಕೆ ಈ ರಾಜ್ಯದಲ್ಲಿ ಮತ್ತು ತಮಿಳುನಾಡಿನಲ್ಲಿ ಸಂಚಾರ ಮಾಡಿದರು. A voluminous report was produced. ಆ ರಿಪೋರ್ಟ್‌ನ್ನು ಮೂಲೆಗೆ ತಳ್ಳಿದರು, ಕೇಂದ್ರ ಸರ್ಕಾರ ಕೊಟ್ಟಿರತಕ್ಕಂತಹ ವಚನವನ್ನು ಮೂಲೆಗೆ ತಳ್ಳಿದರು. ಪ್ರಧಾನ ಮಂತ್ರಿಗಳು ವಚನವನ್ನು ಕೊಟ್ಟಿದ್ದಾರೆ. ಇದನ್ನು ತೀರ್ಮಾನ ಮಾಡಲು ಗೈಡ್‌ಲೈನ್ಸ್ ಮಾಡುತ್ತೇವೆಂದು ವಚನವನ್ನು ಕೊಟ್ಟಿದ್ದಾರೆ, ಆ ವಚನದ ವಿಚಾರವಾಗಿ ಒಂದೆರಡು ಮೂರು ಪಾಯಿಂಟ್‌ಗಳನ್ನು ಅಟಾರ್ನಿ ಜನರಲ್ ಹೇಳಲಿಲ್ಲ, ಅಟಾರ್ನಿ ಜನರಲ್ ಇವತ್ತು ಯಾವುದೇ ವಾದ ಮಾಡಬೇಕಾದರೆ, a matter like this, he has to take a brief from the Ministry of Irrigation and inturn from the Prime Minister. ಆಗ ಸನ್ಮಾನ್ಯ ದೇವೇಗೌಡರು ಪ್ರಧಾನಮಂತ್ರಿಗಳಾಗಿದ್ದರು. ಈ ವಿಚಾರದಲ್ಲಿ ನೇರವಾಗಿ ಅಲ್ಲಿ ಹೋಗಿ ಇಲ್ಲ ನಾವು ಸ್ಕೀಮ್ ಮಾಡುತ್ತೇವೆ That is the ultimate weapon. Scheme is an ultimate weapon. ಇದೆಲ್ಲ ಬೆಳವಣಿಗೆಯನ್ನು ಮರೆತು ಇವತ್ತು ಕೇಂದ್ರ ಸರ್ಕಾರ ಕುರುಡು ನೀತಿಯನ್ನು ತೆಗೆದುಕೊಳ್ಳುತ್ತಿದೆ. ಏಕಮುಖವಾಗಿ, arbitraryಯಾಗಿ ಇವತ್ತು ತೆಗೆದುಕೊಳ್ಳುವುದಿದ್ದರೆ, Where is the federalism? I would rather say it is a serious assault on the federalism? Central Government should have been the Arbiter of this dispute. They failed to do as an Arbiter in this. Arbitraryಯಾಗಿ ಏಕೆ ಕೆಲಸ ಇವತ್ತು ಮಾಡಿದ್ದಾರೆ. ಇದರ ಬಗ್ಗೆ ಈಗ ಅಟಾರ್ನಿ ಜನರಲ್‌ಗೆ ಸಂಪೂರ್ಣವಾದ ಮಾಹಿತಿಯನ್ನು ನಾವು ಕೊಡಿಲಿಲ್ಲವೇ? ನಾವು ವಕೀಲರು, I have lot of respect for the Advocates. ನಾವು ವಕೀಲ ವೃತ್ತಿಯಿಂದ ಬಂದವರು ಇದನ್ನು ಪ್ರಾಕ್ಟೀಸ್ ಮಾಡುತ್ತೇವೆ. ಹಿಂದೆ ನಾವು ಮುಖ್ಯಮಂತ್ರಿಗಳಾಗಿದ್ದಾಗ, ಅದಕ್ಕಿಂತಲೂ ಹಿಂದೆ ಮುಖ್ಯಮಂತ್ರಿಗಳಾಗಿ ಇದ್ದವರು ಏನೊಂದು ನಿಲುವನ್ನು ಅನುಸರಿಸಿಕೊಂಡು ಬರುತ್ತಿದ್ದರು, ಅದರ ಬಗ್ಗೆ ಒಂದು ವಾಕ್ಯವನ್ನು ನಮ್ಮ ವಕೀಲರು Even a person like Sri F.S. Nariman whenever he use to submit to the Supreme Court any submission/ crucial submission he will send the same over fax and it will be placed before the Cabinet and Sometimes before the Chief

Minister, word to word it was scrutinised. And then the Advocate places the same before the Hon'ble Supreme Court. This has been the matter. ಈಗ ಅದನ್ನು ಅನುಸರಿಸುತ್ತಿದ್ದೀರೋ ಅಥವಾ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ.

ಶ್ರೀ ಹೆಚ್. ಎನ್. ನಂಜೇಗೌಡ : ಈ ಹಿಂದೆ ನರಸಿಂಹರಾಯರು ಪ್ರಧಾನಮಂತ್ರಿಗಳಾಗಿದ್ದಾಗ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಪ್ರಧಾನಮಂತ್ರಿಗಳಿಗೆ ಪತ್ರ ಬರೆದಿದ್ದರು. ಆಗಲಾದರೂ ಇದನ್ನು ಎಕ್ಸಿಬಿಟ್ ಹಾಕಿ ಎಂದು ಸುಪ್ರೀಂಕೋರ್ಟ್‌ನವರಿಗೆ ಹೇಳಬಹುದಿತ್ತಲ್ಲ ನಮ್ಮವರು, ಈ ಅಶ್ಯುರೆನ್ಸ್ ಗೌವರ್ನಮೆಂಟ್ ಆಫ್ ಇಂಡಿಯಾ ಕೊಟ್ಟಿದೆ, ನ್ಯಾಶನಲ್ ವಾಟರ್ ಪಾಲಿಸಿ ಮಾಡುತ್ತೇವೆಂದು ಭಾರತ ಸರ್ಕಾರ ಭರವಸೆ ಕೊಟ್ಟಿದೆ ಎಂದು ಹೇಳಬಹುದಿತ್ತಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಎಕ್ಸಿಬಿಟ್ ಮಾಡಬಹುದಿತ್ತು. ಡಾ : ಅಲಗ್ ಸಮಿತಿ ವರದಿಯನ್ನು ಎಕ್ಸಿಬಿಟ್ ಮಾಡಬಹುದಿತ್ತು. ಆದರೆ ಇವೊತ್ತು ಇವ್ಯಾವುದನ್ನೂ ಮಾಡುವುದಕ್ಕೆ ಹೋಗಲಿಲ್ಲ. If they have not done it. we should have been more vigilant. We could have attached it as an exhibit. ಅಲಗ್ ರಿಪೋರ್ಟ್‌ನ್ನು ಏಕೆ ನೀವು ಎಕ್ಸಿಬಿಟ್ ಮಾಡುವುದಕ್ಕೆ ಹೋಗಲಿಲ್ಲ? ಇವತ್ತು ಎಲ್ಲೋ ಕೊಂಡಿ ಕಳಚಿಕೊಂಡಿದೆ. ನಿಮ್ಮ ಕಾನೂನಿನ ಒಂದು ಪ್ರಯೋಗದ ಕೊಂಡಿ ಕಳಚಿಕೊಂಡು ಹೋಗಿದೆ. ನಿಮ್ಮ ನೀರಾವರಿ ತಜ್ಞರ ಅಭಿಪ್ರಾಯದ ಕೊಂಡಿ ಕಳಚಿಹೋಗಿದೆ. ಒಂದು ರೀತಿಯಲ್ಲಿ casual in a vacuum, just loyally submitting to the Supreme Court-just imagine. ಇವೊತ್ತು ಪ್ರಮೀಳಾ ನೇಸರ್ಗಿಯವರು ಇದ್ದಾರೆ Can you give a brief on behalf of five crores of people? ಇದರ ಬಗ್ಗೆ ರಕ್ತದ ಕೋಡಿ ಕೂಡ ಹರಿದಿದೆ ಮತ್ತು ಸಾಕಷ್ಟು ವಾದ ವಿವಾದಗಳು ನಡೆದಿವೆ, ಇವುಗಳ ಬಗ್ಗೆ ನಿಮ್ಮ ಅಡ್ವೊಕೇಟ್‌ಗೆ ಯಾವ ಲಕ್ಷ್ಯವೂ ಇಲ್ಲವೇ? ಇವೊತ್ತು ಯಾವ ಮುಖವನ್ನು ಹೊತ್ತುಕೊಂಡು ಪುನಃ ಸುಪ್ರೀಂ ಕೋರ್ಟ್‌ನ ನೆಕ್ಸ್ಟ್ ಅಡ್ಜೆರ್ನ್‌ಮೆಂಟ್‌ನಲ್ಲಿ ಹೋಗುತ್ತೀರಿ. ನೀವು ಈ ವರದಿಯನ್ನು ಕೊಡಬೇಕು, ಪ್ರಧಾನಮಂತ್ರಿಗಳು ಕೊಟ್ಟಂಥ ಆಶ್ವಾಸನೆಯನ್ನು ಕೊಡಬೇಕು. ಅವೊತ್ತು ಕೊಟ್ಟ ಆಶ್ವಾಸನೆ ಪ್ರಕಾರ ಅಂದಿನ ಪ್ರಧಾನ ಮಂತ್ರಿಗಳಾಗಿದ್ದಂಥ ಪಿ.ವಿ. ನರಸಿಂಹರಾಯರು He had called for the Water Council meeting on 6th February 1996. ಆ ಮಿಟಿಂಗ್‌ನಲ್ಲಿ ಇದು ಪ್ರಸ್ತಾಪವಾಗಿದೆ, ಚರ್ಚೆಯಾಗಿದೆ. ಆದರೆ ಇವರ ನಂತರ ಬಂದಂಥ ಎಲ್ಲಾ ಪ್ರಧಾನಿಗಳು ಇವೊತ್ತಿನವರೆವಿಗೂ ಒಂದು ಮೀಟಿಂಗ್‌ನ್ನು ಕರೆದಿಲ್ಲ. ದೇವೇಗೌಡರು ಸಭೆ ಕರೆಯುತ್ತಾರೆಂದು ನಾವು ನಿರೀಕ್ಷೆ ಮಾಡಿದ್ದೆವು. ಆದರೆ ಅವರೂ ಸಭೆಯನ್ನು ಕರೆಯಲಿಲ್ಲ.

ಶ್ರೀ ಹೆಚ್.ಎನ್. ನಂಜೇಗೌಡ : ಈ ವಿಚಾರದ ಬಗ್ಗೆ ಡ್ರಾಫ್ಟ್ ಕೂಡ ಬಂತು. ಅದರ ಬಗ್ಗೆ ನಾವೆಲ್ಲಾ ಮೂರು ದಿವಸಗಳ ಕಾಲ ತಲೆ ಕೆಡಿಸಿಕೊಂಡು ಚರ್ಚೆ ಮಾಡಿದೆವು.

ಶ್ರೀ ಎಂ. ವೀರಪ್ಪ ಮೊಯಿಲಿ : ಡ್ರಾಫ್ಟ್ ಕೂಡ ಬಂತು. ಅದರ ಬಗ್ಗೆ ನಾವೆಲ್ಲಾ ಚರ್ಚೆ ಮಾಡಿದೆವು. ಆ ಡ್ರಾಫ್ಟ್‌ನ್ನು ಸರ್ಕಾರ ಕಳುಹಿಸಿದೆ. ಮಾನ್ಯ ದೇವೇಗೌಡರು ಸಭೆಯನ್ನು ನಡೆಸಲಿಲ್ಲ.

ಅಂದಮಾತ್ರಕ್ಕೆ ಇವರಿಗೆ ಕಾವೇರಿ ಬಗ್ಗೆ ಆಸಕ್ತಿಯಿರಲಿಲ್ಲವೆಂದೇನೂ ಅಲ್ಲ, ಬಹುಶಃ ಅವರಿಗೆ ರಾಜಕೀಯವಾದ ಸಂಕಷ್ಟ ಈ ವಿಚಾರದಲ್ಲಿ ಇದ್ದಿರಬಹುದು. ಆದರೆ ಗುಜ್ರಾಲ್‌ರವರಿಗೆ ಯಾವ ರೀತಿಯಾದಂಥ ಸಂಕಷ್ಟ ಇತ್ತು? ಅವರೇನೂ ತಮಿಳುನಾಡಿಗೆ ಸಂಬಂಧಪಟ್ಟವರಲ್ಲ,ಪಾಂಡಿಚೇರಿಗೆ ಸಂಬಂಧಪಟ್ಟವರಲ್ಲ, ಕೇರಳಕ್ಕೆ ಸಂಬಂಧಪಟ್ಟವರಲ್ಲ ಅಥವಾ ಕರ್ನಾಟಕಕ್ಕೆ ಸಂಬಂಧಪಟ್ಟವರಲ್ಲ. ಆದುದರಿಂದ ತಾವು ಹೋಗಿ ಸಭೆ ಕರೆಯಿರಿ ಎಂದು ಅಲ್ಲಿಗೆ ಹೋಗಿ ಕುಳಿತುಕೊಳ್ಳಬಹುದಿತ್ತು, ಇವೊತ್ತು ಮಾನ್ಯ ಜೆ.ಹೆಚ್. ಪಟೇಲ್‌ರವರು ಅಲ್ಲಿಗೆ ಹೋಗಿ ಸಭೆ ಕರೆಯಿರಿ ಎಂದು ಅಲ್ಲಿ ಕುಳಿತುಕೊಳ್ಳಬಹುದಾಗಿತ್ತು. ಆ ರೀತಿ ಮಾಡಲಿಲ್ಲ. ಮೊನ್ನೆ ನಮ್ಮನ್ನೆಲ್ಲಾ ನಿಯೋಗದಲ್ಲಿ ಕರೆದುಕೊಂಡು ಹೋದಮೇಲೆ ನಾವು ಏನು ನಿರೀಕ್ಷೆ ಮಾಡಿದ್ದೆವು ಪ್ರಕಾಶ್‌ರವರೆ, ತಕ್ಷಣ ಇವರು ಒಂದು ಸಭೆ ಕರೆಯುತ್ತಾರೆಂದು ನಾವು ನಿರೀಕ್ಷೆ ಮಾಡಿದ್ದೆವು. ವಾಟರ್ ರಿಸೋರ್ಸ್ ಕೌನ್ಸಿಲ್ ಸಭೆಯನ್ನು ಕರೆದು ಅದರೊಳಗೆ ಈ ಬಗ್ಗೆ ಏನಾದರೂ ತೀರ್ಮಾನ ಮಾಡುತ್ತಾರೆ ಎಂದು ನಾವು ಕಾದು ಕುಳಿತುಕೊಂಡಿದ್ದೆವು. ಇವೊತ್ತಿಗೂ ಕೂಡ ಈ ವಿಷಯದ ಬಗ್ಗೆ ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ ಯಾವ ಸಭೆಯನ್ನೂ ಕರೆಯುವುದಕ್ಕೆ ಹೋಗಲಿಲ್ಲ. There is still some option open to the Government of India. Because this is the real order of the Supreme Court. Submission of Anil Diwan is not the order. The submission of Attorney General is not the order of the Supreme Court. That is only a preamble. The order of the Supreme Court is, ``it would be appropriate to defer the further hearing of this matter for the time being to enable the Government of India to try and resolve the controversy between the two States." This is the mandate. ಈ ರೀತಿ ಏಪ್ರಿಲ್ 1997ರಲ್ಲಿ ಆರ್ಡರ್ ಆಯಿತು. ನೀವು ಯಾವುದೋ ಸ್ಕೀಮ್ ವಿಚಾರ ಬಿಟ್ಟರೆ scheme is not going to resolve the problem about which the Government of India should be conscious. ಆ ಸ್ಕೀಮ್ ಅಷ್ಟನ್ನೂ ಬೆಂಕಿ ಹಚ್ಚಿಬಿಡುತ್ತದೆ, ಆದರೂ ಇವೊತ್ತು ಈ ಒಂದು ಕಾಂಟ್ರವರ್ಶಿಯನ್ನೂ ಪರಿಹಾರ ಮಾಡತಕ್ಕಂಥ ರೀತಿಯಲ್ಲಿ ಏಪ್ರಿಲ್ 1997ರಲ್ಲಿ ಕೊಟ್ಟಂಥ ಆದೇಶ ಇದು, ಇವೊತ್ತು ನಾವು ಆಗಸ್ಟ್ 4ನೇ ತಾರೀಖಿನಲ್ಲಿದ್ದೇವೆ, ಕೇಂದ್ರ ಸರ್ಕಾರ ಏನು ವಚನ ಕೊಟ್ಟಿದೆ, ಸುಪ್ರೀಂ ಕೋರ್ಟ್ ಏನು ಆದೇಶ ಮಾಡಿದೆ, ಈ ವಿವಾದವನ್ನು ತೀರ್ಮಾನ ಮಾಡತಕ್ಕಂಥ ಒಂದು ನೈತಿಕ ಜವಾಬ್ದಾರಿಯನ್ನು ಯಾವ ಕೇಂದ್ರ ಸರ್ಕಾರಕ್ಕೆ ಕೊಟ್ಟಿದೆ, ಈ ದಿಸೆಯಲ್ಲಿ ನೀವು ಕಾರ್ಯೋನ್ಮುಖರಾಗುವುದಕ್ಕೆ ನೀವು ಕೇಂದ್ರ ಸರ್ಕಾರದವರ ಜೊತೆ ಏನು ಮಾಡಿದ್ದೀರಿ? ಅಥವಾ ಕೇಂದ್ರ ಸರ್ಕಾರ ಈ ಬಗ್ಗೆ ಏನು ಮಾಡಿದೆ? ಇದನ್ನು ನೀವು ಈ ಸದನಕ್ಕೆ ಇವೊತ್ತು ಹೇಳಬೇಕಾಗುತ್ತದೆ. ಅನಿಲ್ ದಿವಾನ್‌ಗೆ ಏನು ತಾವು ಈ ಬಗ್ಗೆ ಬ್ರೀಫ್ ಕೊಟ್ಟಿದ್ದೀರಿ ಮೊದಲಿನ ಕೇಸ್‌ನಲ್ಲಿ ಅದರ ಫೈಲ್ You must produce before this House. ಇವೊತ್ತು ಅದನ್ನು ತಂದೊಪ್ಪಿಸಬೇಕು. ಚರ್ಚೆ ಸಂಪೂರ್ಣವಾಗಿ ಅರ್ಥಪೂರ್ಣವಾಗಬೇಕಾದರೆ the brief sent by you must be produced. If you have not sent the brief, I must call the Government, the most irresponsible

Government. And if he has gone beyond the brief, I think you must recall that Advocate He has no right to represent in contravention of the brief given to him. One of the two should happen. They should produce all the documents leading to the opinion and the brief given to Mr. Anil Diwan, the Advocate appearing for us, before this House. Because you are accountable and in turn all of us are accountable to the five crores of people. ಇದು ಒಂದು ಜವಾಬ್ದಾರಿಯ ಪ್ರಶ್ನೆಯಾಗಿದೆ, ಒಂದು ಹೋರಾಟದ ಪ್ರಶ್ನೆಯಾಗಿದೆ, ಶತ ಶತಮಾನಗಳಿಂದ ಇವೊತ್ತು ಏನೊಂದು ಅನ್ಯಾಯವನ್ನು ಕರ್ನಾಟಕ ರಾಜ್ಯದ ಕಾವೇರಿ ಕಣಿವೆ, ಪ್ರದೇಶದ ಜನರು ಎದುರಿಸುತ್ತಿದ್ದಾರೆ ಅದನ್ನು ಸವಾಲಿನ ರೀತಿಯಲ್ಲಿ ಸಮರೋಪಾದಿಯಲ್ಲಿ ಎದುರಿಸತಕ್ಕಂಥ ರೀತಿಯಲ್ಲಿ ಒಂದು ಕಡೆ ಟ್ರಿಬ್ಯುನಲ್‌ನಲ್ಲಿ ಮತ್ತೊಂದು ಕಡೆ ಹೊರಗಡೆ ಮತ್ತೊಂದು ಕಡೆ ಕೋರ್ಟ್‌ಗಳಲ್ಲಿ ಎದುರಿಸತಕ್ಕಂಥ ಸಮರದಲ್ಲಿ ಇದ್ದೇವೆ. ಆದರೆ ಈ ಸಮರದ ಜೊತೆಗೆ ಬೇಕಾದ ಸಿದ್ಧತೆ ಇವೊತ್ತು ನಾವು ಸರ್ಕಾರದಲ್ಲಿ ಕಾಣುತ್ತಿಲ್ಲ. ಸರ್ಕಾರ ಈ ಬಗ್ಗೆ ಯಾವ ರೀತಿಯ ಕಾರ್ಯವನ್ನು ಮಾಡುತ್ತಿಲ್ಲ. ಸುಪ್ರೀಂ ಕೋರ್ಟ್ ಏನು ಆರ್ಡರ್ ಕೊಡುತ್ತದೆ, ಟ್ರಿಬ್ಯುನಲ್ ಏನು ಆರ್ಡರ್ ಕೊಡುತ್ತದೆ ಅದನ್ನು ಇವೊತ್ತು ಕೈ ಜೋಡಿಸಿ ಸ್ವೀಕರಿಸತಕ್ಕಂಥ, ನಿಮ್ಮ ಕೈಯನ್ನು ಕೆಳಗಿಟ್ಟು ನೀವು ಬೇಡತಕ್ಕಂಥ ಒಂದು ಸ್ಥಾನದಲ್ಲಿ you have placed yourselves in a beggar's place and not in the figher's place. This is where we are concerned and this is where we are worried. ನಾನು ಈ ಬಗ್ಗೆ ಬೇರೆ ಬೇರೆ ವಿವರಗಳನ್ನು ಇಲ್ಲಿ ಕೊಟ್ಟರೆ ಚರ್ಚೆ ಚರ್ವಿತ ಚರ್ವಣವಾಗುತ್ತದೆ, ಆದುದರಿಂದ ನಾನು ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಯಾವ ರೀತಿಯ ಅಧಿಸೂಚನೆಯನ್ನು ನಮಗೆ ಕೊಟ್ಟಿದ್ದಾರೆಂದರೆ, ಈ ಡ್ರಾಫ್ಟ್ ನೋಟಿಫಿಕೇಶನ್ ಏನಿದೆ, 1991ರಲ್ಲಿ ಏನು ಒರಿಜಿನಲ್ ಇಂಟೀರಿಮ್ ಆರ್ಡರ್ ಕೊಟ್ಟಿದ್ದಾರೆ ನಂಜೇಗೌಡರೆ,They are forgotten even the revised order of 3-4-1992. 1992ರ ಮುಂಚೆ ಆರ್ಡರ್ ಆಗಿದೆ ಎಂದಾಗ ಇಲ್ಲವೆಂದೂ ಕೂಡ ಕೇಂದ್ರ ಸರ್ಕಾರದ ಗಣನೆಗೆ ತರಲಿಲ್ಲ. They have not taken into consideration at all. It is a virtual nationalisation of project. ನ್ಯಾಶನಲೈಸ್ಡ್ ಮಾಡಬೇಡಿ, ಬಿಟ್ಟುಬಿಡಿ ಅದು ಅವರ ಜವಾಬ್ದಾರಿ, ನಾವೇಕೆ ವಹಿಸಿಕೊಳ್ಳಬೇಕಾಗುತ್ತದೆ. ಇನ್ನು ಮೂರನೆಯದಾಗಿ ಬಹಳ ಮುಖ್ಯವಾಗಿರತಕ್ಕಂಥ 1992ರ ರಿವೈಸ್ಡ್ ಆರ್ಡರ್‌ನಲ್ಲಿ ಹೇಳಿರುವಂತೆ ಏನು ಹೆಚ್ಚುವರಿ ನೀರು ಬರುತ್ತದೆ ಅದನ್ನು ಸಂಪೂರ್ಣವಾಗಿ ಉಪಯೋಗ ಮಾಡತಕ್ಕಂಥ ಒಂದು ಅಧಿಕಾರ ಹಕ್ಕು ಇದೆ ಎಂದು ಟ್ರಿಬ್ಯುನಲ್ 1992ರಲ್ಲಿ ಕರ್ನಾಟಕಕ್ಕೆ ಹೇಳಿದ್ದಾರೆ. ಆದುದರಿಂದ 11.2 ಏನು ಸೀಲಿಂಗ್ ಇದೆ, It has become infructuous. ಇದರ ಬಗ್ಗೆ ಕಾನೂನು ತಜ್ಞರ ಅಭಿಪ್ರಾಯದಲ್ಲಿ ಬಹುಶಃ ಕೇಂದ್ರ ಸರ್ಕಾರದಲ್ಲಿ ಕಾನೂನಿನ ದಿವಾಳಿತನವಾಗಿದೆಯೋ ಏನೋ I think something must have happened. ನೀರಾವರಿ ತಜ್ಞರ ಅಭಿಪ್ರಾಯ ಅವರಿಗೆ ಬೇಕಾಗಿಲ್ಲ. ಬಹುಶಃ ಕೇಂದ್ರ ಸರ್ಕಾರದಲ್ಲಿ ಕಾನೂನಿನ ದಿವಾಳಿತನ ಆಗಿರುವಂಥ ಒಂದು ಪರಿಸ್ಥಿತಿಯನ್ನು ನಾವು ಇಂದು ಕಾಣುತ್ತಿದ್ದೇವೆ. ಇನ್ನು ಹೊಸ ಪ್ರಾಜೆಕ್ಟ್‌ಗಳು, ಈಗ ನಡೆಯತಕ್ಕಂಥ ಪ್ರಾಜೆಕ್ಟ್‌ಗಳು, ಇವೆಲ್ಲವನ್ನೂ ಕೂಡ ನೀವು

ನಿಲ್ಲಿಸಬೇಕು, ಏಕೆಂದರೆ ಅವರಿಗೆ ನೀರು ಕೊಡಬೇಕಾಗಿರುವುದರಿಂದ. ಇನ್ನೊಂದು ವಿಚಾರ ಹೇಳಬೇಕೆಂದರೆ ನಮ್ಮ ಎಲ್ಲಾ ನೀರಿನ ನಿರ್ವಹಣೆಯಲ್ಲಿ ಈ ಪ್ರಾಧಿಕಾರದ ಹಸ್ತಕ್ಷೇಪ ಆಗುವುದಕ್ಕೆ ಅವಕಾಶ ಇದೆ, ಇದರ ಹೆಡ್ ಕ್ವಾಟರ್ಸ್ ಕೊಯಮತ್ತೂರಿನಲ್ಲಿ. ಏಕೆಂದರೆ ತಮಿಳುನಾಡಿವರೇ ಎಲ್ಲಾ ಮಾನಿಟರ್ ಮಾಡಬೇಕು. ರಿಮೋಟ್ ಕಂಟ್ರೋಲ್, ಡೈರೆಕ್ಟ್ ಕಂಟ್ರೋಲ್, ಎಲ್ಲವನ್ನೂ ಅವರೇ ಮಾಡಬೇಕು. ಇನ್ನೊಂದು ಬಹಳ ಮುಖ್ಯವಾದ ವಿಚಾರವನ್ನು ಇವೊತ್ತು ನಾನು ಇಲ್ಲಿ ಹೇಳಲೇಬೇಕಾಗಿದೆ. 205 ಟಿಎಂಸಿ. ನೀರನ್ನು ನಾವು ಮೆಟ್ಟೂರಿಗೆ ಬಿಡಬೇಕು, ಆ ರೀತಿಯಲ್ಲಿ ಆರ್ಡರ್ ಇದೆ. ಕೆ.ಆರ್.ಎಸ್. ನಿಂದ 205 ಟಿ.ಎಂ.ಸಿ. ನೀರು ಬಿಡತಕ್ಕಂಥ ಪ್ರಶ್ನೆ ಇಲ್ಲ. ಈಗ ಬಿಳಿಗೊಂಡ್ಲು ಮತ್ತು ಮೆಟ್ಟೂರ್ ಮಧ್ಯೆ ಸುಮಾರು 28. ಟಿ.ಎಂ.ಸಿ ನೀರು ಜನರೇಟ್ ಆಗುತ್ತದೆ. It is in the basin of Tamil Nadu ಇದಾದಮೇಲೆ, ಕಬಿನಿ, ಕೆ.ಆರ್.ಎಸ್. ಮತ್ತು ಬಿಳಿಗೊಂಡ್ಲು ಮಧ್ಯೆ ಒರಿಜಿನಲ್ ಜನರೇಶನ್ ಆಫ್ ವಾಟರ್ ಇದೆ, ಮಳೆ ಬರಬಹುದು ಅಥವಾ ಬೇರೆ ರೀತಿಯಿಂದ ಸುಮಾರು 15.ಟಿ.ಎಂ.ಸಿ ನೀರು ಬರುತ್ತದೆ. ಅಂದರೆ ಇವೆರಡೂ ಸೇರಿ ಸುಮಾರು 43 ಟಿ.ಎಂ.ಸಿ. ನೀರನ್ನು ಬಿಡುವಂಥದ್ದು ನಿಮ್ಮ ಹತೋಟಿಯಲ್ಲಿಲ್ಲ.

1.30 ಪಿ.ಎಂ

ಎಂದರೆ ನೀವು ಕೆ.ಆರ್.ಎಸ್. ಮತ್ತು ಕಬಿನಿಯಲ್ಲಿ ಬಿಡತಕ್ಕಂಥಾದ್ದು, even according to the interim order.. ಅದು 162 ಟಿ.ಎಂ.ಸಿ. 205 ಟಿಎಂ.ಸಿ ಅಲ್ಲ. ನಿಮ್ಮ ಡ್ರಾಫ್ಟ್ ಆರ್ಡರ್‌ನಲ್ಲಿ ಏನಾಗಿದೆ ಎಂದರೆ ಕೆ.ಆರ್.ಎಸ್. ಮತ್ತು ಕಬಿನಿಯಿಂದ 205 ಟಿಎಂ.ಸಿ. ಬಿಡಬೇಕು ಎಂದು ಹೇಳಿದ್ದಾರೆ, ಇದು ಅವರದೇ ವ್ಯಾಖ್ಯಾನ. ಇದು ಒಂದು ರೀತಿಯ ಅಭಾಸ. ಇನ್ನೊಂದು ವಿಶೇಷ ರೀತಿಯಾದಂತಹ ಅಭಾಸತನ ಎಂದರೆ ನಾವು ಈ ಒಂದು ಯೋಜನೆಯನ್ನು ಅನುಷ್ಠಾನ ಮಾಡಿದರೆ ಆಗತಕ್ಕಂಥಾದ್ದು ಏನೆಂದರೆ ಮಂತ್ಲಿ ರಿಲೀಜ್ ಏನಿದೆ 1964 ರಿಂದ 74 ರವರೆಗೆ ಏನು ನೀರು ಹರಿಯುತ್ತಿದೆ, ಅದರಿಂದ ಮಂತ್ಲಿ ಅವರೇಜ್ ಡ್ರಾ ಮಾಡಿದರು. ಅನ್ಯೂಯಲ್ ಆವರೇಜ್ ಡ್ರಾ ಮಾಡುವಾಗ ಆವರೇಜ್ ಫ್ಲೋ 80 ರಿಂದ 90 ಎಂದು ಮಾಡಿ ಅದನ್ನು 205 ಎಂದು ಈ ರೀತಿ ಫಿಕ್ಸ್ ಮಾಡಿದರು. ಇದರಿಂದ ಏನಾಗುತ್ತದೆ ಎಂದರೆ ಮಂತ್ಲಿ ಫ್ಲೋ 137.81 ಇದು ಜೂನ್ ಜುಲೈ, ಆಗಸ್ಟ್ ನಿಂದ ಅಕ್ಟೋಬರ್, ಇಷ್ಟು ತಿಂಗಳು ತೆಗೆದುಕೊಂಡರೆ. average flow between 80 to 90, average 116.73 ಎಂದರೆ ಅಲ್ಲಿ ಡೆಫಿಸಿಟ್ 21 ಟಿ.ಎಂ.ಸಿ. mismanaged... ಒಂದು ಮಂತ್ಲಿ ಫ್ಲೋ ಆವರೇಜ್‌ನ್ನು ಒಟ್ಟು ಹಾಕಿ 1964ರಿಂದ 74ರವರೆಗೆ ಆವರೇಜ್ ತೆಗೆದುಕೊಳ್ಳುವುದು. ಇದು ಟ್ರಿಬ್ಯೂನಲ್ ಮಾಡಿದಂತಹ ಕೆಲಸ . ನಂತರ ಅನ್ಯೂಯಲ್ ಆವರೇಜ್ ತೆಗೆದುಕೊಳ್ಳುವಾಗ ನೀವು 80 ರಿಂದ 90 ಎಂದು ಅನ್ಯೂಯಲ್ ಆವರೇಜ್ ತೆಗೆದುಕೊಂಡು ಇವತ್ತು 21 ಟಿ.ಎಂ.ಸಿ ನೀರನ್ನು ಈ ಆವರೇಜ್‌ನಲ್ಲಿ ಎಲ್ಲಿ ತೆಗೆದುಕೊಳ್ಳಬಹುದು ಎನ್ನುವುದನ್ನು ತಾವು ನೋಡಬೇಕಾಗುತ್ತದೆ. ನಿಮ್ಮ ಕರಡು ಯೋಜನೆ ಪ್ರಕಾರ ಅನುಷ್ಠಾನ ಮಾಡಿದರೆ 232 ಟಿ.ಎಂ.ಸಿ. ನೀರನ್ನು ನಾವು ಕೆ.ಆರ್. ಎಸ್. ಮತ್ತು ಕಬಿನಿಯಿಂದ ಕನ್‌ಸ್ಟೆಂಟ್ಲಿ ಕೊಡಬೇಕು, ಆವರೇಜ್, ನಾರ್ಮಲ್ ಇಯರ್ ಆಗಲಿ, ವರ್ಸ್ಟ್

ಇಯರ್ ಆಗಲಿ 75 ಪರ್ಸೆಂಟ್ ಡಿಪೆಂಡಿಬಿಲಿಟಿ ಆಗಲಿ 232 ಪರ್ಮನೆಂಟ್ ಲಯಬಿಲಿಟೀಸ್ ಇರುತ್ತದೆ. ಒಂದು ವೇಳೆ ಆವರೇಜ್ ಇಯರ್ ನಲ್ಲಿ 500 ಟಿ.ಎಂ.ಸಿ. ನಮ್ಮ ಬೇಸಿನ್‌ನಲ್ಲಿ ನೀರು ಇದ್ದರೆ ನೆಟ್ ಅವೇಲಿಬಿಲಿಟಿ 268 ಆಗುತ್ತದೆ. 75 ಪರ್ಸೆಂಟ್ ಡಿಪೆಂಡಿಬಿಲಿಟಿ ಆದರೆ 148 ಟಿ.ಎಂ.ಸಿ ಆಗುತ್ತದೆ. ವರ್ಸ್ಟ್ ಇಯರ್ ಬಂದರೆ ನಮ್ಮ ರೈತರಿಗೆ ಸಿಗತಕ್ಕಂಥಾದ್ದು ಕೇವಲ 100 ಟಿ.ಎಂ.ಸಿ. ನೀರು ಮಾತ್ರ. ಆದುದರಿಂದ ಇವತ್ತು ಈ ಅನಾಹುತವನ್ನು ಕೂಡ ಎದುರಿಸಿ ಇದರಲ್ಲಿ ರಾಜಕೀಯ ಬೇಡ, ನಾವು ತಮಿಳುನಾಡಿನಲ್ಲಿ ಹಾಕಿಕೊಟ್ಟಂತಹ ನ್ಯಾಯದ ಲಕ್ಷ್ಮಣಗೆರೆ ಪ್ರಕಾರ ನಡೆಯೋಣ. ಮಾನ್ಯ ಶ್ರೀರಾಮರೆಡ್ಡಿಯವರು ಒಂದು ಹೇಳಿದರು, ನೀವು ಅವರಿಗೆ ರಾಜಕೀಯ ಹೇಳಿದಿರೋ, ನಮಗೆ ರಾಜಕೀಯ ಹೇಳಿದಿರೋ. ನಮ್ಮ ರಾಜಕೀಯ ಹೇಗೆ ಎಂದರೆ ನೂರು ಟಿ.ಎಂ.ಸಿ. ನೀರನ್ನು ನೀವು ನಿಮ್ಮ ರೈತರಿಗೆ ಉಪಯೋಗ ಮಾಡಿಕೊಂಡು ಉಳಿದಂತಹ ಸುಮಾರು 400-450 ಟಿ.ಎಂ.ಸಿ ನೀರನ್ನು ಕರ್ನಾಟಕಕ್ಕೆ ಕೊಟ್ಟರೆ ನಾವು ರಾಜಕೀಯ ಮಾಡಿದ ಹಾಗೆ ಆಗುವುದಿಲ್ಲ. ಮಾನ್ಯ ವಾಟಾಳ್‌ರವರೆ, ರಾಜಕೀಯ ನಾವು ಮಾಡುವುದು, ಪಾಪ ಅವರು ನೀರು ಅನುಭವಿಸುವುದು. ಏಕೆಂದರೆ ಮಾನ್ಯ ನಂಜೇಗೌಡರು ಬಹಳ ಚೆನ್ನಾಗಿ ಹೇಳಿದರು, question is, certain right is vested with them. We have to gain inch by inch by legal process or the negotiation process. Right is vested with them for so many years, ಇವತ್ತು ತೆಗೆದುಕೊಳ್ಳಬೇಕಾಗುತ್ತದೆ. ಇದು ನ್ಯಾಯ ಅಲ್ಲೆ ಆಗಬೇಕಾದರೆ, ಇವತ್ತು ನೀರನ್ನು ಹಂಚುವಿಕೆ ಇಲ್ಲ, ಅವರು ಅನುಭವ ಮಾಡಿದ್ದು ಅಲ್ಲೆ ಇರಲಿ. ನಾವು ಕಸಿದುಕೊಳ್ಳುವುದು, ಮಾನ್ಯ ಶ್ರೀರಾಮರೆಡ್ಡಿಯವರೆ, ತಮ್ಮ ವಾದ ಒಪ್ಪಿದರೆ ನಾವು ರಾಜಕೀಯವಾಗಿ ನೀರನ್ನು ಕಸಿದುಕೊಳ್ಳುವವರು. ಅವರು ಅನುಭವ ಮಾಡುವವರು. our blood boils, ಸ್ವಲ್ಪ ಎಚ್ಚರಿಕೆಯಿಂದ ಹೇಳಿ. ನಿಮಗೆ ಧೈರ್ಯ ಇದ್ದರೆ ತಮಿಳುನಾಡಿನವರ ಮುಖಕ್ಕೆ ಹೇಳಿ. ನೀವು ರಾಜಕೀಯ ಮಾಡುತ್ತಿದ್ದೀರಿ ಅಂತ ಕರ್ನಾಟಕದ ರಾಜಕಾರಣಿಗಳಿಗೆ ನೀವು ಹೇಳಿದರೆ ಹೇಗೆ? ಇವತ್ತು ನಾವು ರಕ್ತ ಸುರಿಸಿದರೂ ನಮ್ಮ ಹಕ್ಕನ್ನು ಬಿಟ್ಟುಕೊಡುವುದಿಲ್ಲ. ತಾವು ಎಚ್ಚರದಿಂದ ಇರಬೇಕಾಗುತ್ತದೆ. ಇದು ಯಾವರೀತಿಯ ನ್ಯಾಯ?

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರು ಏನು ಹೇಳಿದರು ಎಂದರೆ, ನಿಮಗೆ ಕಾವೇರಿ, ಕೃಷ್ಣಾ ವಿಷಯ ಬಂದಾಗ ಬ್ಲಡ್ ಬಾಯಿಲ್ ಆಗುತ್ತದೆ, ಆದರೆ ಕೋಲಾರದವರಿಗೆ all through the year.. ಏಕೆಂದರೆ ನಾವು ಆಕಾಶಗಂಗೆ ಜನ. ಮೇಲೆ ಮಳೆ ಬಂದರೆ ನಮಗೆ ನೀರು, ಇಲ್ಲದಿದ್ದರೆ ಇಲ್ಲ. ನಮಗೆ ಕಾವೇರಿಯೂ ಇಲ್ಲ, ಕೃಷ್ಣಾ ಕೂಡ ಇಲ್ಲ. ನಮ್ಮ ಬ್ಲಡ್ ವರ್ಷವಿಡಿ ಬಾಯಿಲ್ ಆಗುತ್ತಿರುತ್ತದೆ. ಅದನ್ನು ಅವರು ಹೇಳಿದ್ದುದು, ಅದರಿಂದ ಎಲ್ಲೋ ಒಂದು ಕಡೆ ಪೀಸ್‌ಫುಲ್ ಆಗಿ ಮಾಡಿ ಎಂದು ಹೇಳಿದರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ನನ್ನ ಅಭಿಪ್ರಾಯ ಏನೆಂದರೆ ನಾನು ಹೇಳಿದ್ದು ಇಷ್ಟೇ. ಕಾವೇರಿ ವಿಚಾರದಲ್ಲಿ ಮೊದಲಿನಿಂದಲೂ ಕೂಡ ಕರ್ನಾಟಕಕ್ಕೆ ಅನ್ಯಾಯವಾಗಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಈ ಸಮಸ್ಯೆಯನ್ನು ಪ್ರಾಮಾಣಿಕವಾಗಿ ಬಗೆಹರಿಸುವುದರ ಬದಲು ಎರಡು ರಾಜ್ಯಗಳವರು ರಾಜಕೀಯ ಮಾಡುತ್ತಾರೆಯೇ ಹೊರತು, ಪ್ರಮಾಣಿಕವಾಗಿ ಸಮಸ್ಯೆ ಪರಿಹಾರ ಮಾಡತಕ್ಕಂಥ ಪ್ರಯತ್ನವನ್ನು ಮಾಡಬೇಕೆಂದು ಹೇಳಿದ್ದುದು. ನಾವು ಮೊಯಿಲಿಯವರು ರಾಜಕೀಯ

ಮಾಡಿದರು ಎಂದು ಹೇಳಲಿಲ್ಲ. ರಾಜಕಾರಣ ನಡೆದಿದೆ. ರಾಜಕಾರಣ ಇಲ್ಲದೆ ಇದ್ದಿದ್ದರೆ 24ನೇ ಇಸವಿಯಲ್ಲಿ ಆದಂತಹ ಒಪ್ಪಂದ 74ಕ್ಕೆ ಮುಗಿಯಿತು. 74ರಿಂದ ಅಧಿಕಾರದಲ್ಲಿ ಇದ್ದಂತಹವರು ಏಕೆ ಇವತ್ತಿನವರೆಗೂ ಒಪ್ಪಂದ ವಜಾ ಮಾಡಿಕೊಳ್ಳುವುದಕ್ಕೆ ಆಗಲಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೇ, ನಾವು ರಾಜಕೀಯ ಮಾಡುತ್ತಿಲ್ಲ. ನಮ್ಮಲ್ಲಿ ಯಾರೂ ರಾಜಕೀಯ ಮಾಡುತ್ತಿಲ್ಲ. ಈ ವಿಷಯದಲ್ಲಿ ನೀರು ಉಳಿಸಬೇಕು ಎಂದು ಪ್ರಯತ್ನ ಮಾಡುತ್ತಿದ್ದೇವೆ. ತಮಿಳುನಾಡಿನವರು ರಾಜಕೀಯ ಮಾಡುತ್ತಿರುವುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : 23 ವರ್ಷಗಳಾಗಿದೆ ಒಪ್ಪಂದ ಅವಧಿ ಮುಗಿದು. ಈವರೆಗೆ ಕೂಡ ಒಪ್ಪಂದ ಏಕೆ ಆಗಲಿಲ್ಲ ಹಾಗಾದರೆ? ರಾಜಕೀಯ ಮಾಡಿಲ್ಲ ಎಂದು ಹೇಳಿದರೆ ಹೇಗೆ? ಎಲ್ಲರೂ ರಾಜಕೀಯ ಮಾಡಿದ್ದಾರೆ. ರಕ್ತವನ್ನು ಸುರಿಸುತ್ತೇವೆ, ಕಾವೇರಿ ನೀರನ್ನು ಬಿಡುವುದಿಲ್ಲವೆಂದು ಹೇಳಿದವರು ರಾಜಕೀಯ ಮಾಡಲಿಲ್ಲವೇ? ಪ್ರಾಣವನ್ನು ಆದರೂ ಕೊಡುತ್ತೇವೆ, ಕಾವೇರಿ ನೀರನ್ನು ಕೊಡುವುದಿಲ್ಲವೆಂದು ಹೇಳಲಿಲ್ಲವೇ? ಆ ರೀತಿಯೆಲ್ಲಾ ಹೇಳಿ ನಮ್ಮ ಪ್ರಾಣಕ್ಕೆ ತಂದು ಇಟ್ಟಿಲ್ಲವೇ? ಇದೆಲ್ಲಾ ರಾಜಕೀಯ ಅಲ್ಲವೇ? ಯಾರು ರಾಜಕೀಯ ಮಾಡಲಿಲ್ಲ?

ಶ್ರೀ ಎಂ. ವೀರಪ್ಪ ಮೊಯಿಲಿ : ಹೌದು, ನಾವು ರಾಜಕೀಯ ಮಾಡಿಯೇ ಮಾಡುತ್ತೇವೆ. ರೈತರ ಹಸಿವನ್ನು ನೀಗಿಸುವುದಕ್ಕೆ ನಾವು ರಾಜಕೀಯ ಮಾಡಿಯೇ ಮಾಡುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಈ ಸಮಸ್ಯೆಯನ್ನು ಕಗ್ಗಂಟಾಗಿ ಉಳಿಸಬಾರದು.

SRI. M. VEERAPPA MOILY : I never accept anybody advocating Tamil Nadu in this house., ಈ ಸದನದಲ್ಲಿ ತಮಿಳುನಾಡಿನ ಅಡ್ವೋಕೇಟ್ ನಮಗೆ ಬೇಕಾಗಿಲ್ಲ. We will argue our own case..

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ತಮಿಳುನಾಡಿನ ಅಡ್ವೋಕೇಟ್ ಯಾರೂ ಇಲ್ಲ ಇಲ್ಲಿ ಕರ್ನಾಟಕದವರೇ ಇಲ್ಲಿ ಇರುವುದು.

ಶ್ರೀಮತಿ ಪ್ರಮೀಳಾ ನೇಸರ್ಗಿ : ತಮಿಳುನಾಡಿನ xxx

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಈ ರೀತಿ ಮಾತನಾಡತಕ್ಕಂಥಾದ್ದು ಸರಿಯಲ್ಲ. ನಾನು ತಮಿಳುನಾಡಿನ x ಆದರೆ, ಇವರು ಯಾರ x ಎಂದು ಹೇಳಬೇಕಾಗುತ್ತದೆ. ನಾನು ಆ ಮಟ್ಟಕ್ಕೆ ಹೋಗುವುದಕ್ಕೆ ತಯಾರಿಲ್ಲ.

ಶ್ರೀ ಎನ್. ರಾಜಣ್ಣ : ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನ ಮಂತ್ರಿಯಾಗಿದ್ದಾಗ ಏಕೆ ಈ ಸಮಸ್ಯೆಯನ್ನು ಬಗೆಹರಿಸಲಿಲ್ಲ?

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವು xxx ಈ ದೇಶವನ್ನು ಒಡೆಯತಕ್ಕಂಥ ಶಕ್ತಿಗಳಾಗಿ ಇದ್ದೀರಿ.

---

x ಈ ಪದಗಳ ಅಧ್ಯಕ್ಷರ ಆದೇಶದ ಮೇಲೆ ಕಡತದಿಂದ ತೆಗೆದು ಹಾಕಲಾಗಿರುತ್ತದೆ.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ, ಈ ವಿಚಾರ ಸೂಕ್ಷ್ಮವಾದುದು ನಾನು ಇವತ್ತು ಭಾಷಣ ಮಾಡಲಿಲ್ಲ. ಐದು ನಿಮಿಷ ಮಾತನಾಡಿದೆ ಅಷ್ಟೇ. ಪದೇ ಪದೇ ಚರ್ಚೆ ಮಾಡಿದ್ದೇವೆ. ನಮಗೆ ಏನು ಚಿಂತೆ ಎಂದರೆ ಈ ಸದನದಲ್ಲಿ ಒಡಕು ಧ್ವನಿ ಬರಬಾರದು.

ಅಧ್ಯಕ್ಷರು : ಮಾನ್ಯ ಮೊಯಿಲಿಯವರು ಬಹಳ ಹಿರಿಯ ಸದಸ್ಯರು ಎಲ್ಲಾ ಮಾತನ್ನು ನಾನು ಚೇಂಬರ್‌ನಲ್ಲಿ ಕುಳಿತು ಕೇಳುತ್ತಿದ್ದೆ, ಇಲ್ಲಿಗೆ ಬಂದಾಗಲೂ ಕೇಳುತ್ತಿದ್ದೇನೆ. ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದ ಮಾತಿನ ಅರ್ಥ, ಏನೆಂದರೆ ನಾವು ಒಂದು ದೇಶ. ನಮಗೆ ಒಂದು ತ್ರಿವರ್ಣ ಧ್ವಜ ಇದೆ. ಫೆಡರಲ್ ಸ್ಟ್ರಕ್ಚರ್ ಇದೆ. ಎಲ್ಲೋ ಒಂದು ಕಡೆ ಕುಳಿತುಕೊಂಡು ಮಾತನಾಡಿ ಈ ವಿವಾದವನ್ನು ಬಗೆಹರಿಸಬೇಕೇ ಹೊರತು conciliation is necessary, confrontation is not necessary, ಎನ್ನುವಂಥಾದ್ದು ಅವರ ಮಾತಿನ ಅರ್ಥ. ಅಲ್ಲವಾ ಶ್ರೀರಾಮರೆಡ್ಡಿಯವರೆ, that is what you meant., ಅಷ್ಟಕ್ಕೆ ನೀವು ಅವರನ್ನು ತಮಿಳುನಾಡಿಗೆ ವರ್ಗಾಯಿಸಿಬಿಟ್ಟಿರಿ. ಬೇಕಾದರೆ ನೀವು ನಮ್ಮನ್ನು ಆಂಧ್ರಕ್ಕೆ ವರ್ಗಾಯಿಸಿ. ನಾವು ಆಂಧ್ರ ಬಾರ್ಡರ್‌ನಲ್ಲಿ ಇದ್ದೇವೆ. ತಮಿಳುನಾಡಿಗೆ ವರ್ಗಾಯಿಸಿದರೆ ಹೇಗೆ?

ಶ್ರೀ ಎಂ. ವೀರಪ್ಪ ಮೊಯಿಲಿ : ಇದರಲ್ಲಿ ಎಲ್ಲಾ ರಾಜಕೀಯ ಮಾಡುತ್ತಿದ್ದಾರೆ ಎಂದು ಹೇಳಿದರೆ. It is an insult to the House,...

ಅಧ್ಯಕ್ಷರು : ಪದಗಳ ಬಳಕೆ ಆ ರೀತಿಯಾಗುತ್ತದೆ. ನಮಗೆ ಮಾತೃಭಾಷೆ, ತೆಲುಗು. ಇಲ್ಲಿ ಕನ್ನಡದಲ್ಲಿ ಭಾಷಣ ಮಾಡಬೇಕು. ಕೆಲವು ಸಲ ಪದಗಳ ಬಳಕೆ ನಿಮ್ಮಷ್ಟು ಸ್ಪಷ್ಟವಾಗಿ ಕನ್ನಡ ಮಾತನಾಡುವುದಕ್ಕೆ ಬರುವುದಿಲ್ಲ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ,xx xxx ಎಂದು ಹೇಳಿದ್ದುದು ಕಡತಕ್ಕೆ ಹೋಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಅವರು ರಾಜಕೀಯ ಮಾಡುತ್ತಿದ್ದಾರೆ ಎಂದು ಹೇಳಿರುವುದು ಸಹ ಕಡತದಿಂದ ಹೋಗಬೇಕು.

ಶ್ರೀಮತಿ ಪ್ರಮೀಳಾ ನೇಸರ್ಗಿ : ನೀವು ಹೇಳಿದ್ದುದು ಮೊದಲು ಹೋಗಬೇಕು.

(ಗೊಂದಲ)

ಅಧ್ಯಕ್ಷರು : ಮಾನ್ಯ ಹಿರಿಯ ಸದಸ್ಯರಾದ ನಂಜೇಗೌಡರು ಒಂದು ಮಾತನ್ನು ಹೇಳಿದರು. ಈ ಸದನದಲ್ಲಿ ಕಾವೇರಿ ವಿಚಾರ ಚರ್ಚೆ ಮಾಡುವಾಗ, ಒಡಕು ಧ್ವನಿ ಬರಬಾರದು ಎಂದು ಪದವನ್ನು ಬಳಸಿದರು. ಮಾನ್ಯ ಶ್ರೀರಾಮರೆಡ್ಡಿಯವರು ಆಡಿರತಕ್ಕಂಥ ಮಾತುಗಳು ಅದರಲ್ಲಿ ಪರಿಸಮಾಪ್ತಿಯಾಗುವುದಿದ್ದರೆ I will definitely take care of these things,.. ತಮಗೆ ಆಶ್ವಾಸನೆ ಕೊಡುತ್ತಿದ್ದೇನೆ. ಮಾನ್ಯ ನಂಜೇಗೌಡರು ಹೇಳಿದ ರೀತಿಯಲ್ಲಿ, ಶ್ರೀರಾಮರೆಡ್ಡಿಯವರು

---

x ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇಲೆ ಕಡತದಿಂದ ತೆಗೆದು ಹಾಕಲಾಗಿರುತ್ತದೆ.

ಮಾಡಿರತಕ್ಕಂಥ ಭಾಷಣದ ಅರ್ಥ ಹಾಗೇನಾದರೂ ಪರಿಸಮಾಪ್ತಿಯಾಗುವುದಿದ್ದರೆ, ಆ ಪದಗಳು ಅಲ್ಲಿ ಉಳಿಯಬೇಕೇ ಬೇಡವೇ ಎನ್ನುವುದರ ಬಗ್ಗೆ ನಾನು ನಿಶ್ಚಯ ಮಾಡುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ವಿಚ್ಛಿದ್ರಕಾರಿ ಶಕ್ತಿಗಳು ಎನ್ನುವುದನ್ನು ತಾವು ತೆಗೆಸಬೇಕಾಗುತ್ತದೆ.

ಶ್ರೀ ಜಿ.ವಿ. ಶ್ರೀರಾಂರೆಡ್ಡಿ : ನೀವು ಹೇಳಿದ್ದನ್ನು ತೆಗೆಯಲಿ, ನಾವು ಹೇಳಿದ್ದನ್ನು ತೆಗೆಯಲಿ.

ಅಧ್ಯಕ್ಷರು : ನೇಸರ್ಗಿಯವರೆ, ನಾನು ಸೀಟ್ ಬದಲಿಸಿದ ತಕ್ಷಣ ನೀವು ಅವರಿಗೆ ಏಜೆಂಟ್ ಎಂದು ಬಿಟ್ಟಿರೆ ನಾನು ಏನು ಮಾಡಲಿ. ಇನ್ನು ಹತ್ತಿರ ಬಂದರೆ ನನಗೆ ಏನಾದರೂ ಅನ್ನುತ್ತೀರಾ ಎಂದು ನನಗೆ ಭಯ. ಈಗ ಮಾನ್ಯ ಮೊಯಿಲಿಯವರೇ, 1-40 ಆಗಿದೆ. 1-30 ಗಂಟೆಗೆ ನಮ್ಮದು ಲಂಚ್ ಅವರ್ ಇದ್ದದ್ದು.

ಶ್ರೀ ಎಂ. ವೀರಪ್ಪಮೊಯಿಲಿ : ಮುಗಿಸುತ್ತೇನೆ.

ಅಧ್ಯಕ್ಷರು : ತಾವು ಮುಗಿಸಬೇಕು ಎಂದು ಹೇಳುವುದಿಲ್ಲ. I have no objection if you take another 10 minutes. ಲಂಚ್ ಬ್ರೇಕ್ ಮುಗಿದ ನಂತರ ಮಾತನಾಡುತ್ತೀರೋ ಅಥವಾ ಈಗಲೇ ಕನ್‌ಕ್ಲೂಡ್ ಮಾಡಿಬಿಡುತ್ತೀರೋ? ಏಕೆಂದರೆ ಬಸವರಾಜ್ ಒಬ್ಬರು ಮಾತನಾಡಬೇಕು ಎಂದು ಅನುಮತಿ ಕೇಳಿದ್ದಾರೆ. ಏಕೆಂದರೆ, we will now adjourn for the lunch ಆಫ್ಟರ್ ಲಂಚ್ ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹತ್ತು ನಿಮಿಷದಲ್ಲ ಮೊಯಿಲಿಯವರು ಮುಗಿಸುತ್ತಾರೆ. ಏಕೆಂದರೆ ಕಂಟಿನ್ಯೂಯಿಟಿ ಇರುವುದಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ : ಒಂದು ಸ್ಪಷ್ಟವಾದ ಪಾಯಿಂಟ್ ಏನೆಂದರೆ ಮೆಟ್ಟೂರಿನಲ್ಲಿ ಗೇಜಿಂಗ್ ಸ್ಟೇಷನ್ ಮಾಡುವುದಕ್ಕೆ ಅವರು ಒಪ್ಪುವುದಿಲ್ಲ. ಬಿಳಿಗೊಂಡ್ಲುವಿನಲ್ಲಿ ಗೇಜಿಂಗ್ ಸ್ಟೇಷನ್ ಇದೆ. There is under recording of 40% by Tamilnadu. ಇಷ್ಟು ಲೆಕ್ಕದಲ್ಲೇ ಇವತ್ತು ನೀರು ಕಸಿಯತಕ್ಕಂಥ ಕೆಲಸ ಇಷ್ಟು brazenly if they can do it I think judicial courts should take cognisance of it. ತಾವು ಹೇಳಿದ್ದೀರಿ. 40% under recordring by Tamilnadu ಇವತ್ತು ತಮಿಳುನಾಡಿನಲ್ಲಿ ಅಂಡರ್ ರೆಕಾರ್ಡ್ ಮಾಡುತ್ತಿದ್ದಾರೆ. ಆ ಲೆಕ್ಕವನ್ನು ಇವತ್ತು ನಂಬಿ ಇಂಟೀರಿಯಮ್ ಆರ್ಡರ್‌ನ್ನು ಕೊಡತಕ್ಕಂಥದ್ದು ಮಾಡಿದರೆ ಕರ್ನಾಟಕ ರಾಜ್ಯ ನ್ಯಾಯಕ್ಕಾಗಿ ಎಲ್ಲೆ ಮೀರಿ ಹೋಗಬೇಕು. ಕೇಂದ್ರ ಸರ್ಕಾರ ಕಿವುಡಾಗಿದೆ. ಸುಪ್ರೀಂ ಕೋರ್ಟ್ ಅವರೇನು ಹೇಳುತ್ತಾರೆ, ಟ್ರಿಬ್ಯೂನಲ್‌ನಲ್ಲಿ ಇಂಟೀರಿಯಮ್ ಆರ್ಡರ್ ಆಗಿದೆ, ಆದರೆ ಇಂಟೀರಿಯಮ್ ಆರ್ಡರ್ ಆಧಾರದ ಮೇಲೆ ಹೋಗಿ ಎನ್ನುತ್ತಾರೆ. We cannot go beyond that.. I can appreciate the Supreme Court. ಏಕೆಂದರೆ 1991ರಲ್ಲಿ ಇಂಟೀರಿಯಮ್ ಆರ್ಡರ್ ಆಗುವಾಗ ಯಾವ ಆವರೇಜನ್ನು ತೆಗೆದುಕೊಂಡಿದ್ದಾರೆ. ಅದರಲ್ಲಿ ಮೈನಸ್ ಪೀಕ್ ಪೀರಿಯಡ್ ಅಂಡ್ ಮೈನಸ್ ಲೀನ್ ಪೀರಿಯಡ್ ಆರು ವರ್ಷ ತೆಗೆದುಕೊಂಡರು ಈಗ 91 ರಿಂದ 97 ಇವತ್ತು ಇಂಪ್ಲೀಮೆಂಟ್ ಮಾಡುವುದು 91ರಲ್ಲಿ ನಾವು ಇಲ್ಲ.

1997ನೇ ಇಸವಿಯಲ್ಲಿದ್ದೇವೆ. ಇಂಪ್ಲಿಮೆಂಟ್ ಮಾಡುವ ಸ್ಟೇಜ್‌ನಲ್ಲಿ which should be the immediate statistics? That is between 91 to 97 ಇದನ್ನು ಏಕೆ ಸುಪ್ರೀಂ ಕೋರ್ಟ ಹೇಳುವುದಿಲ್ಲ, ಕೇಂದ್ರ ಸರ್ಕಾರ ಹೇಳುವುದಿಲ್ಲ. what is relevant today cannot be between 1989 & 90. ಅದನ್ನು ನಾನು ಪ್ರಧಾನಿಯವರಿಗೆ ಆ ದಿವಸ ಹೇಳಿದೆ. ಔಟ್ ಡೇಟೆಡ್ ಡ್ಯಾಟಾ ತೆಗೆದುಕೊಂಡು ರೈನ್ ಸೈಕಲ್ ಬಗ್ಗೆ ತಮಗೆ ಗೊತ್ತಿದೆ. ಮೂರು ವರ್ಷಕ್ಕೆ ಐದು ವರ್ಷಕ್ಕೆ ರೈನ್ ಸೈಕಲ್ ಬದಲಾವಣೆಯಾಗುತ್ತದೆ. ರೈನ್ ಸೈಕಲ್ ಆಧಾರದ ಮೇಲೆ ತಾವು ಆವರೇಜ್‌ನ್ನು ಫಿಕ್ಸ್ ಮಾಡಬೇಕಾಗುತ್ತದೆ ಎಂದು ಹೇಳುತ್ತೇನೆ. The statistics which is not available as on today, ಇವತ್ತು ನೀವು ನೀರು ಕೊಡಬೇಕು ಎಂದು ಹೇಳಿದರೆ, ಆ ಕರಡು ಯೋಜನೆಯನ್ನು ಕೇಂದ್ರ ಸರ್ಕಾರದವರು ಏನು ಇಂಪ್ಲಿಮೆಂಟ್ ಮಾಡುತ್ತಿದ್ದಾರೆ, ಅದಕ್ಕೆ ಒಂದು ಅಂತಿಮ ಸ್ವರೂಪ ಕೊಡಬೇಕು ಎಂದು ಹೇಳಿದರೆ it is most outdated and antique, ಇದನ್ನು ಇಂಪ್ಲಿಮೆಂಟ್ ಮಾಡುವ ಯಾವುದೇ ಆಧಾರ ಇವತ್ತು on the field it is not there, ಅದು ಖಂಡಿತವಾಗಿಯೂ ಕೂಡ ಇಲ್ಲ ಎಂಬುದನ್ನು ನಾವು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿ ಕೊಡಬೇಕಾಗುತ್ತದೆ. ಆ ದಿವಸ ಕೂಡ ಪ್ರಧಾನಿಯವರು ಈ ವಿಚಾರವನ್ನು ಕೇಳಿದಾಗ, ನಾವು ಸ್ಪಷ್ಟವಾಗಿ ಇದನ್ನು ಹೇಳಿದ್ದೇವೆ. ಇಂಟೀರಿಯಮ್ ಆರ್ಡರ್‌ನಲ್ಲಿ ಕೂಡ 25.6.91ರಲ್ಲಿ ಟ್ರಿಬ್ಯೂನಲ್ ಕೊಟ್ಟಂಥ ಇಂಟೀರಿಯಮ್ ಆರ್ಡರ್‌ನಲ್ಲಿ ಬಹಳ ಸ್ಪಷ್ಟವಾಗಿ ಅವರು ಹೇಳಿದ್ದಾರೆ. To quote their own saying:

``Pleadings are not completed; parties have not yet placed on record all their documents" They have not relied upon thier documents, they have not relied upon thier pleadings and now all the pleadings are available, all the documents are available and all the evidence are available before the Tribunal.

ರಾಜ್ಯ ಸರ್ಕಾರದವರು ಅರ್ಜಿಯನ್ನು ಹಾಕಿದ್ದಾರೆ, ಅದು ತನಿಖೆಗಾಗಿ ಟ್ರಿಬ್ಯುನಲ್‌ನಲ್ಲಿ ಇದೆ. ಕೇಂದ್ರ ಸರ್ಕಾರ if it is fair, I don't say, they are not fair, if it is fair, the right course open to them is to move as an intervenor before the Tribunal and say since all the documents are available, total evidence is available and all the statistics between 1991 and 1997 are available and on this basis you decide the case. That could have been the right course of action. ಇಂಟಿರಿಯಮ್ ಆರ್ಡರ್‌ನ್ನು ಕೊಡುವ ಇತಿಹಾಸವೇ ಇದು. ಅನ್‌ಪ್ರಿಸಿಡೆಂಟೆಂಟ್. 1956ರಿಂದ ಅಂದರೆ ಕಳೆದ 35 ವರ್ಷಗಳಲ್ಲಿ ಈ ರಾಷ್ಟ್ರದಲ್ಲಿ ಯಾವಾಗಲೂ ಕೂಡ ಯಾವುದೇ ಒಂದು ವಾಟರ್ ಡಿಸ್‌ಪ್ಯೂಟ್‌ನಲ್ಲಿ ಇಂಟಿರಿಯಮ್ ಆರ್ಡರ್ ಕೊಟ್ಟಿದ್ದು ಇಲ್ಲ. ಕರ್ನಾಟಕಕ್ಕೆ ಬಂದಾಗ ಇದು ಪ್ರಥಮ. ಆದರೆ ಇವತ್ತು ಪ್ರಿಸಿಡೆಂಟ್‌ಗಳು ಇಲ್ಲದೆ, ಮೊನ್ನೆ ಕೇಂದ್ರ ಸರ್ಕಾರದಲ್ಲಿ ಕೂಡ ಈ ರೀತಿ ಒಂದು ಕಂಟಿನ್‌ಜೆನ್ಸಿ ಬಂದಾಗ, 1956ರ ಇಂಟರ್ ಸ್ಟೇಟ್ ವಾಟರ್ ಡಿಸ್‌ಪ್ಯೂಟ್ ಆಕ್ಟ್ ಬಗ್ಗೆ ಯಾವ ರೀತಿಯಲ್ಲಿ ಪರಿಸ್ಥಿತಿಯನ್ನು ನಿಭಾಯಿಸಬೇಕು ಎಂದು ಹೇಳುವಂಥದ್ದು ಬಹುಶಃ the Parliament, if they so desire and if that was the

intention of the Parliament they could have brought out the Amendment. 35 ವರ್ಷಗಳಲ್ಲಿ ಒಂದು ತಿದ್ದುಪಡಿ ಕೂಡ ಕೇಂದ್ರ ಸರ್ಕಾರ ಈ ಇಂಟೀರಿಯಮ್ ಆರ್ಡರ್‌ಗೆ ಪ್ರೊವೈಡ್ ಮಾಡಲಿಕ್ಕೆ ಆಗಲಿಲ್ಲ. ಇದು ಬಹಳ ಪ್ರಾಮುಖ್ಯವಾದಂಥ ವಿಚಾರ. ನಾನು ಒಪ್ಪುತ್ತೇನೆ, we all believe that through ನೆಗೊಷಿಯೇಷನ್ ಮೂಲಕವೇ ಆಗಬೇಕು ಎಂದು ನಾವು ಒತ್ತಾಯ ಮಾಡಿಕೊಂಡು ಬಂದವರು. ನಮ್ಮ ಇಂದಿನ ಮುಖ್ಯಮಂತ್ರಿಯವರು, ಹಿಂದಿನ ಪ್ರಧಾನಿಯವರು ಪಾರ್ಲಿಮೆಂಟ್‌ನಲ್ಲಿ ಕೂಡ ಇದನ್ನೇ ಹೇಳಿದ್ದಾರೆ. We were never against it. Sir, with all my sincerity at my command, ದೇವೇಗೌಡರು ಪಾರ್ಲಿಮೆಂಟ್‌ನಲ್ಲಿ ಏನು ಹೇಳಿದ್ದಾರೆ ಎಂದರೆ

``Let me say about Madam Gandhi and Rajiv Gandhi, they have helped Karnataka because they knew the problem. They knew how the people of Karnataka have been sqeezed and how they have been suppressed. Even with all the pressures from Tamil Nadu they have never constituted the Tribunal, but the National Front Government has not taken the responsibility, they have not discharged their duty", ಇದನ್ನು ನಾವು ಹೇಳಿದ್ದಲ್ಲ, ಮಾನ್ಯ ದೇವೇಗೌಡರೇ ಆ ಸಂದರ್ಭದಲ್ಲಿ ಹೇಳಿದ್ದುದು. ಅಂದರೆ ಅದರ ಮೇಲೆ ನಾನು ವ್ಯಾಖ್ಯಾನ ಮಾಡಲಿಕ್ಕೆ ಹೋಗುವುದಿಲ್ಲ. ಇದರ ಅರ್ಥವೇನೆಂದರೆ we are always for negotiations, ನೆಗೋಷಿಯೇಷನ್ ಮಾಡುವಾಗ ಕೂಡ 1990ರಲ್ಲಿ 10-5-90ರಲ್ಲಿ ನಮಗೆ ಕೇಂದ್ರದ ನೀರಾವರಿ ಮಂತ್ರಿಗಳು ಟೆಲೆಕ್ಸ್ ಕಳುಹಿಸಿದರು. ಆಗ ನಾನು ಪ್ಲಾನಿಂಗ್ ಮಿನಿಸ್ಟರ್ ಆಗಿದ್ದೆ. ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದರು. 10-5-90ರಲ್ಲಿ ದೆಹಲಿಯಲ್ಲಿ ಮೀಟಿಂಗ್‌ಗೆ ಬರಬೇಕು ಎಂದು ಹೇಳಿ ಟೆಲೆಕ್ಸ್ ಮೆಸೇಜ್ ಕಳುಹಿಸಿದರು. ಆದರೆ ಅಡಿಷನಲ್ ಸಾಲಿಸಿಟರ್ ಜನರಲ್ on 4.5.1990 he submits to the Supreme Court that no negotiations is possible, so we are not negotiating, and so, ನೀವು ಟ್ರಿಬ್ಯೂನಲ್ ಮಾಡಿ ಎಂದು ಹೇಳಿ, action can be taken for constituting the Tribunal,. Karnataka State always stood for negotiations. You kindly go through this. ಬಹುಶಃ ಇದರ ಕೆಲವು ರಿಕಾರ್ಡ್‌ಗಳನ್ನು ಬೇಕಾದರೆ ನಮ್ಮ ಶ್ರೀರಾಮರೆಡ್ಡಿಯವರಿಗೂ ಕಳುಹಿಸುತ್ತೇನೆ. We were always for negotiations. ಬೇಕಾದರೆ ರಾಜಣ್ಣನವರಿಗೂ ಕೂಡ ಕಳುಹಿಸುತ್ತೇನೆ. We stood there in Delhi. ದೆಹಲಿಯಲ್ಲಿ ಮೀಟ್ ಆದೆವು. ನಾನು ಪ್ಲಾನಿಂಗ್ ಮಿನಿಸ್ಟರ್ ಆಗಿದ್ದೆ. ವೀರೇಂದ್ರ ಪಾಟೀಲರು ಮತ್ತು ನಾನು ದೆಹಲಿಯಲ್ಲಿ ಮೀಟ್ ಆದೆವು. ದೆಹಲಿಯಲ್ಲಿ ಮೀಟ್ ಆದಾಗ ಪಟಾಡಿ ಎಂದು ಹೇಳಿ ಆಗ ನೀರಾವರಿ ಸಚಿವರು ಇದ್ದರು. ನಾವೆಲ್ಲಾ ಕಾಯುತ್ತಾ ಇದ್ದೆವು. ತಮಿಳುನಾಡಿನ ಮುಖ್ಯಮಂತ್ರಿಯವರು, ನಮ್ಮ ಮುಖ್ಯಮಂತ್ರಿಯವರು ನಾವೆಲ್ಲಾ ಅಲ್ಲಿ ಕಾಯುತ್ತಾ ಇದ್ದೆವು. ಪಟಾಡಿಯವರು ತಕ್ಷಣ ಬಂದರು.5 ನಿಮಿಷದಲ್ಲಿ ನಾನು ಪಾರ್ಲಿಮೆಂಟ್‌ನಲ್ಲಿ ಇರಬೇಕಾಗುತ್ತದೆ, ನಾನು ಹೋಗುತ್ತೇನೆ, ನಾವು ಮದ್ರಾಸ್‌ನಲ್ಲಿ ಮೀಟ್ ಆಗೋಣ ಎಂದು ಹೇಳಿದರು. ನಾವು ಮದ್ರಾಸ್‌ಗೆ ಬಂದವು. ಆಗ ಮದ್ರಾಸ್ ಸೆಕ್ರೆಟೇರಿಯಟ್‌ನಲ್ಲಿ ಮೀಟಿಂಗ್ ಆಯಿತು. ಮದ್ರಾಸ್‌ಗೆ

ಮೀಟಿಂಗ್ ಬರುವಾಗ ಅಲ್ಲಿಂದ ಟೆಲೆಕ್ಸ್ ಬಂತು. ಕೇಂದ್ರದ ಸಚಿವರಿಗೆ ಬರಲಿಕ್ಕಾಗುವುದಿಲ್ಲ. ಆದ್ದರಿಂದ kindly defer the meeting and we will meet at Delhi, ಎಂದು ಹೇಳಿ ಬಂತು. ದೆಹಲಿ ಮೀಟಿಂಗ್‌ನ್ನು 10-5-90ಕ್ಕೆ ಫಿಕ್ಸ್ ಮಾಡಿದರು. ದೆಹಲಿಯಲ್ಲಿ ಮೀಟಿಂಗ್ ಕರೆದು, ಮಧ್ಯದಲ್ಲಿ ಸುಪ್ರೀಂ ಕೋರ್ಟಿಗೆ ಇವತ್ತು ಹೋಗಿದ್ದಾರೆ. ಇವತ್ತು ಕರ್ನಾಟಕ ರಾಜ್ಯದ ಹಿತ ಇದರಿಂದ ಎಲ್ಲಿ ಬಲಿ ಕೊಟ್ಟಿದ್ದಾರೆ? ಯಾವ ಭಾಷೆಯಲ್ಲಿ ಹೇಳಬೇಕು. ಇದು ನಮಗೆ ಅರ್ಥವಾಗುವುದಿಲ್ಲ. ಆದ್ದರಿಂದ Karnataka people have not made politics, we have always gone by negotiations, it is always the Tamil Nadu which scuttled the negotiaitons. ಪಾಪ, ನಮ್ಮ ನೀರಾವರಿ ಸಚಿವರು ಅಥವಾ ಸನ್ಮಾನ್ಯ ಮುಖ್ಯಮಂತ್ರಿಯವರು ಎಷ್ಟು ಸಾರಿ ತಮಿಳುನಾಡಿಗೆ ಹೋದರು? ಎಷ್ಟು ಸಾರಿ ದೆಹಲಿಗೆ ಹೋದರು ಮೊನ್ನೆ ಮೊನ್ನೆ. ಪ್ರತಿ ಹೆಜ್ಜೆ ಹೆಜ್ಜೆಯಲ್ಲಿ ಕೂಡ ನಾವು ಸಂಧಾನದ ಮೂಲಕ ಮಾಡುವಂಥ ಪ್ರಾಮಾಣಿಕತೆಯನ್ನು ನಾನು ಯಾವತ್ತೂ ಪ್ರಶ್ನೆ ಮಾಡುವುದಿಲ್ಲ. ಪ್ರಾಮಾಣಿಕವಾಗಿ ಒಂದು ಆಶಯ ನಮ್ಮ ನೀರಾವರಿ ಸಚಿವರಿಗೆ ಈಗಲೂ ಇದೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೂ ಕೂಡ ಇದೆ. ಆದರೆ ಇದೆಲ್ಲಾ ಆದಮೇಲೆ, ಇಲ್ಲಾ ಕರ್ನಾಟಕ ಬಹಳ ಅಡಮೆಂಟ್ ಆಗಿದೆ, ಅವರು ಬಹಳ ಆ್ಯರೊಗೆಂಟ್ ಆಗಿರುತ್ತಾರೆ, ಎಂದು ಈ ಸರ್ಟಿಫಿಕೇಟನ್ನು ನಮ್ಮಗಳಿಗೆ ತಮಿಳುನಾಡಿನವರು ಕೊಡುತ್ತಾರೆ. ಎಂದು ಹೇಳಿದರೆ ಈಗ ನಮ್ಮವರೇ ಈ ಸರ್ಟಿಫಿಕೇಟ್ ಕೊಡಲಿಕ್ಕೆ ಪ್ರಾರಂಭ ಮಾಡಿದರೆ ಕರ್ನಾಟಕ ರಾಜ್ಯದ ಗತಿ ಏನಾಗಬೇಕು? ಆದ್ದರಿಂದ we have always stood for negotiations, ನಾವು ಇನ್ನೂ ಕೂಡ ಹೇಳುವುದಿಷ್ಟೆ. ನೆಗೊಷಿಯೇಷನ್ ಮಾಡತಕ್ಕಂಥದ್ದು ಮತ್ತು ಮಾರ್ಗದರ್ಶನಕ್ಕೆ ಇವತ್ತು ಅಂತಿಮ ಸ್ವರೂಪ ಕೊಡುವ ದಿಸೆಯಲ್ಲಿ ಕರ್ನಾಟಕ ರಾಜ್ಯ ಮುಂದೆ ಹೋಗಬೇಕು. ಇದು ತಪ್ಪಿದರೆ ಟ್ರಿಬ್ಯೂನಲ್‌ಗೆ ನೀವು ಕೇಂದ್ರ ಸರ್ಕಾರ ಇಂಟರ್‌ವೀನ್ ಆಗಿ, ಆ ಆರ್ಡರ್‌ನ್ನು ರಿವೈಸ್ ಮಾಡುವ ದೃಷ್ಟಿಯಲ್ಲಿ ಪ್ರಯತ್ನ ಮಾಡಬೇಕು. ಈಗಾಗಲೇ ಎವಿಡೆನ್ಸ್ ಕ್ಲೋಸ್‌ಗೆ ಬಂದಿದ್ದರಿಂದ ಅಂತಿಮ ತೀರ್ಪನ್ನು ಆದಷ್ಟು ಜಾಗ್ರತೆ ಕೊಡಬೇಕು. ನನಗೆ ಆತ್ಮವಿಶ್ವಾಸ ಇದೆ. ಕರ್ನಾಟಕಕ್ಕೆ ಖಂಡಿತವಾಗಿ ಕೂಡ ಟ್ರಿಬ್ಯೂನಲ್‌ನಲ್ಲಿ ನ್ಯಾಯ ಸಿಕ್ಕೇ ಸಿಕ್ಕುತ್ತದೆ. ಏಕೆಂದರೆ ಆ ದಿಸೆಯಲ್ಲಿ ನಾವು ಇವತ್ತು ನಮ್ಮ ಕೇಸನ್ನು ಬಿಲ್ಡಪ್ ಮಾಡಬೇಕಾಗುತ್ತದೆ. ಏಕೆಂದರೆ ಪ್ರಾರಂಭ ಮಾಡಿದಾಗ ನಮ್ಮ ಕೇಸು ಏನು ಆಗುತ್ತದೋ ಎನ್ನುವ ಭಯ ನಮಗೆಲ್ಲಾ ಇತ್ತು. ನಮಗೆ ಶಂಕೆ ಇತ್ತು. ನಮಗೆ ಅನುಮಾನ ಇತ್ತು. ಆದರೆ ಈ ಕೇಸ್ ಎಲ್ಲಾ ಪ್ರೋಗ್ರೆಸ್ ಆದ್ದರಿಂದ ಇವತ್ತು ನಮಗೆ we are very confident that ultimately we will get justice. ಟ್ರಿಬ್ಯೂನಲ್ ಅಥಾರಿಟಿ ಏನು ಮಾಡಲಿಕ್ಕಿದೆ ಎಂದರೆ, this authority is sought to be an authority in perpetuity. ನೀವು ನೋಡಿರಬಹುದು. One of the condition ಇದೇ ಪರ್ಮನೆಂಟ್ ಆಗುತ್ತದೆ ಟ್ರಿಬ್ಯೂನಲ್ ಅಂತಿಮ ವರದಿಯನ್ನು ಕೊಟ್ಟಮೇಲೂ ಕೂಡ this authority willcontinue to remain. ಇದು ಯಾವರೀತಿ ಅಥಾರಿಟಿ; ಏನು ಮಾಡತಕ್ಕಂಥದ್ದು. After interim order is implemented, they are not interested in the final award. More than what is required by them will be granted. ಆದ್ದರಿಂದ ಅಧ್ಯಕ್ಷರೆ, ದಯಮಾಡಿ ಸರ್ಕಾರ ಈ ಬಗ್ಗೆ ಎಚ್ಚರ ವಹಿಸಬೇಕು. ಕಾನೂನಿನ ವಿಚಾರದಲ್ಲಿ, ತಜ್ಞರ

ಸಲಹೆಗಳನ್ನು ಪಡೆದುಕೊಳ್ಳಬೇಕು. ಪ್ರತಿಯೊಂದು ಹೆಜ್ಜೆ ಹೆಜ್ಜೆಯಲ್ಲಿ ತಾವು ಎಚ್ಚರಿಕೆಯನ್ನು ವಹಿಸದಿದ್ದರೆ, ಇಂತಹ ಅನಾಹುತಗಳು ಬರುತ್ತದೆ. ಕೇಂದ್ರಸರ್ಕಾರ ಕೂಡ ಅದು ನಿಮ್ಮದೇ ಸರ್ಕಾರ ಇರಲಿ, ಯಾರದೇ ಸರ್ಕಾರ ಇರಲಿ. ನಮ್ಮ ಸರ್ಕಾರ ಇದ್ದಂಥ ಕಾಲದಲ್ಲಿ ನಾನು ಮುಖ್ಯಮಂತ್ರಿಯಾಗಿದ್ದಾಗಲೂ ಕೂಡ ಮಾನ್ಯ ಶುಕ್ಲಾರವರು ಮಧ್ಯರಾತ್ರಿಯಲ್ಲಿ ಬಂದು ನಮ್ಮ ಮೇಲೆ ಪ್ರೆಜರ್ ಹಾಕಿ ನೀರನ್ನು ಬಿಡಬೇಕು ಎಂದು ಹೇಳಿದರೂ, ಜಯಲಲಿತರವರು ಸಮುದ್ರತೀರದಲ್ಲಿ ಸತ್ಯಾಗ್ರಹದಲ್ಲಿ ಕುಳಿತುಕೊಂಡರೂ ಕೂಡ ನಾವು ನೀರನ್ನು ಬಿಡತಕ್ಕಂಥ ಒಂದು ಪ್ರಯತ್ನವನ್ನು ಮಾಡಲಿಲ್ಲ. ಕೇಂದ್ರದಲ್ಲಿ ನಮ್ಮ ಪಕ್ಷದ ಸರ್ಕಾರ ಇದ್ದಾಗಲೂ ಕೂಡ ನಾವು ಜಗ್ಗಲಿಕ್ಕೆ ಹೋಗಲಿಲ್ಲ. ಅಧ್ಯಕ್ಷರೆ ತಮಗೆ ಗೊತ್ತಿದೆ, ಯಕಶ್ಚಿತ್ ನಾವು ಸ್ವಲ್ಪ ಸೂಕ್ಷ್ಮವಾಗಿ ಇದರ ಬಗ್ಗೆ ಆಲೋಚನೆ ಮಾಡಿದರೆ it centres around only 6 to 11 TMC of water. ದೇವರಾಜ ಅರಸುರವರು ಮುಖ್ಯಮಂತ್ರಿಗಳಾಗಿದ್ದಾಗ ನಂತರ, ಗುಂಡೂರಾಯರು ಮುಖ್ಯಮಂತ್ರಿಗಳಾಗಿದ್ದಾಗ there is an agreement which was signed by both Karnataka and Tamil Nadu. ಏನು ಸಹಜವಾಗಿ ಹರಿದುಹೋಗತಕ್ಕಂಥ ನೀರಿನ ಹೊರತಾಗಿ ಹೆಚ್ಚುವರಿ ನೀರನ್ನು ಬಿಡಬೇಕಾದರೆ that release of water will be only in exchange of power from Tamil Nadu to Karnataka. Am I not correct? There is a written agreement. ಅಧ್ಯಕ್ಷರೆ ಅದು ಎಷ್ಟು? ಆವರೇಜ್ ನೋಡಿದರೆ, ಯಾವುದೋ ಒಂದು ಸಂದರ್ಭದಲ್ಲಿ ನಾವು 11 ಟಿಎಂ.ಸಿ ನೀರನ್ನು ಬಿಟ್ಟಿರಬಹುದು. ಉಳಿದ ಎಲ್ಲಾ ಸಂದರ್ಭದಲ್ಲೂ ಕೂಡ 5-6 ಟಿ.ಎಂ.ಸಿ. ನೀರನ್ನು ಬಿಟ್ಟಿದ್ದೇವೆ. ಇವೊತ್ತು ಅವರ ಅವಶ್ಯಕತೆ ಅಷ್ಟೇ ಇರತಕ್ಕಂಥದ್ದು, ಅದಕ್ಕಿಂತ ಹೆಚ್ಚು ಅವಶ್ಯಕತೆ ಇಲ್ಲ. ಆ ಅವಶ್ಯಕತೆಯನ್ನು ಬಿಟ್ಟು ಇವೊತ್ತು 50-60 ಟಿ.ಎಂ.ಸಿ ಹೆಚ್ಚು ನೀರನ್ನು ಇವೊತ್ತು ನಮ್ಮ ಮೇಲೆ ಕಾನೂನಿನ ಮೂಲಕ ದಬಾಯಿಸಿ, ನಮ್ಮ ನೀರಿನ ಹಕ್ಕಿನ ಮೇಲೆ ಆಕ್ರಮಣ ಮಾಡಿಕೊಂಡು ಹೋಗತಕ್ಕಂಥ ಹಕ್ಕು ತಮಿಳುನಾಡಿಗೆ ಇಲ್ಲವೇ ಇಲ್ಲ. ಆದ್ದರಿಂದ ಈ ಬಗ್ಗೆ ನಾವು ಜಾಗೃತರಾಗದಿದ್ದರೆ ಖಂಡಿತವಾಗಿಯೂ ನಾವು ದೊಡ್ಡ ಅನಾಹುತವನ್ನು ಎದುರಿಸಬೇಕಾದೀತು ಎಂದು ಹೇಳಿ, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಸ್.ಡಿ. ಬಸವರಾಜು (ವಿರಾಜಪೇಟೆ) : ಸನ್ಮಾನ್ಯ ಸಭಾಧ್ಯಕ್ಷರೆ, ಇವೊತ್ತು ಕಾವೇರಿ ಪ್ರಾಧಿಕಾರ ರಚನೆಯ ಬಗ್ಗೆ ನಾವು ಮಾತನಾಡುತ್ತಿರುವಂಥ ಸಂದರ್ಭದಲ್ಲಿ ಮೂಲ ಪ್ರಶ್ನೆಯನ್ನು ನಾವು ಹಾಕಬೇಕಾಗಿರತಕ್ಕಂಥದ್ದು, ಇವೊತ್ತು ಪ್ರಾಧಿಕಾರ ರಚನೆಗೆ ಯಾರು ಕಾರಣಕರ್ತರು? ಈ ಸಮಸ್ಯೆ ಇಷ್ಟು ಜಟಿಲವಾಗುವುದಕ್ಕೆ, ಈ ಸಮಸ್ಯೆ ಉದ್ಭವವಾಗುವುದಕ್ಕೆ ನಮ್ಮ ಕೊಡುಗೆ ಏನು? ಇದನ್ನು ನಾವು ಸರಿಯಾಗಿ ಪರಿಷ್ಕಾರ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗಿದ್ದರೆ ಬಹುಶಃ ಈ ಕಾವೇರಿ ಪ್ರಾಧಿಕಾರ ಎನ್ನುವ ಒಂದು ಪದದ ಬಳಕೆ ಬರುತ್ತಾ ಇತ್ತೆ ಎಂದು ಇದರ ಬಗ್ಗೆ ನಾವು ಈ ಸಂದರ್ಭದಲ್ಲಿ ಯೋಚನೆ ಮಾಡಬೇಕಾಗಿದೆ. ಸಾಮಾನ್ಯವಾಗಿ ಬೆಳಿಗ್ಗೆಯಿಂದಲೂ ನಾವು ನೋಡುತ್ತಿದ್ದೇವೆ. ಈ ಒಂದು ಚರ್ಚೆ ಬಂದಂಥ ಸಂದರ್ಭದಲ್ಲಿ ಆರೋಪ, ಪ್ರತ್ಯಾರೋಪ ಮಾಡುತ್ತಿದ್ದೇವೆ. ಈ ಆರೋಪ ಪ್ರತ್ಯಾರೋಪ ಮಾಡಿಕೊಂಡು ಬರುವುದರ ಜೊತೆಗೆ ಇಷ್ಟು ವರ್ಷ ನಾವು ಆಳಿಕೊಂಡು ಬಂದಂಥ ಸಂದರ್ಭದಲ್ಲಿ

ನಾವು ಒಗ್ಗಟ್ಟಾಗಿ ಏನು ಮಾಡಿದ್ದೇವೆ ಎಂಬ ಬಗ್ಗೆ ಏನಾದರೂ ಚಿಂತನೆಯನ್ನು ಮಾಡಿದ್ದೇವೆಯೇ? ಕಾವೇರಿ ಕಣ್ಣೀರಿನ ಕಥೆ ಬಗ್ಗೆ ನಾವು ಮಾತನಾಡುತ್ತಿದ್ದೆವು. ಅಧಿಕಾರ ಬಂದಾಗ ಒಂದು ಮಾತು, ಅಧಿಕಾರ ಇಲ್ಲದೇ ಇದ್ದಾಗ ಒಂದು ಮಾತು ಈ ರೀತಿ ನಾವು ಮಾತನಾಡಿಕೊಂಡು ಬಂದಿರುವುದರಿಂದ, ಇವೊತ್ತು ಈ ಫಲವನ್ನು ಯಾರು ಪಡೆಯುತ್ತಿದ್ದಾರೆ ಅದರ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ನಮ್ಮ ಕಚ್ಚಾಟದಿಂದ ನಮ್ಮ ರೈತರು ಕಣ್ಣೀರು ಸುರಿಸುವುದು ತಪ್ಪಲಿಲ್ಲ. ಆದರೆ ಇದರ ಉಪಯೋಗ ಮಾಡಿಕೊಂಡು ಬದುಕುತ್ತಿರುವಂಥ ತಮಿಳುನಾಡಿನವರು ಇನ್ನಷ್ಟು ನೀರು ನಮಗೆ ಬೇಕು, ಇನ್ನಷ್ಟು ಶ್ರೀಮಂತಿಕೆ ನಮಗೆ ಬೇಕು, ಇನ್ನಷ್ಟು ಭತ್ತಕ್ಕೆ ನೀರುಣಿಸುವಂತೆ ಅವಕಾಶ ಬೇಕು, ಇದು ನಮ್ಮ ಹಕ್ಕು ಎನ್ನುವಂಥ ಪ್ರತಿಪಾದನೆಯನ್ನು ಮಾಡಲಿಕ್ಕೆ ನಾವು ಅವಕಾಶವನ್ನು ಮಾಡಿಕೊಟ್ಟಿದ್ದೇವೆ. 1987ರಲ್ಲಿ ಈ ಕಾವೇರಿ ವಿವಾದದ ಬಗ್ಗೆ ಮಾತುಕತೆ ಶುರುವಾಯಿತು. ಇದಕ್ಕೆ ರೂಪು ಬಂದುದು ಯಾವಾಗ 1924ರಲ್ಲಿ. 1924ರಲ್ಲಿ ಅಣೆಕಟ್ಟನ್ನು ನಾವು ಕಟ್ಟಿದೆವು. 50 ವರ್ಷದ ಅಗ್ರಿಮೆಂಟನ್ನು ನಾವು ಕೂಡ ಮಾಡಿಕೊಂಡೆವು. ಈ 50 ವರ್ಷದ ಅಗ್ರಿಮೆಂಟ್ ಮುಗಿದ ನಂತರ ಅಂದರೆ 1974ರಲ್ಲಿ ಈ ಅಗ್ರಿಮೆಂಟ್ ಮುಗಿಯಿತಲ್ಲ, ನಮ್ಮ ಹಕ್ಕನ್ನು ನಾವು ಏಕೆ ಪ್ರತಿಪಾದನೆ ಮಾಡಿಕೊಳ್ಳಲಿಲ್ಲ? ಇವೊತ್ತು ನಮ್ಮ ಕರ್ನಾಟಕದ ರೈತರು ಭತ್ತವನ್ನು ಬೆಳೆಯುವುದು ಬೇಡವೇ? ನಮ್ಮ ಬಡತನವನ್ನು ನೀಗಿಸಿಕೊಳ್ಳುವುದು ಬೇಡವೆ? ಇದರ ಬಗ್ಗೆ ನಾವು ಏಕೆ ಹೋರಾಟವನ್ನು ಮಾಡಲಿಲ್ಲ? 24 ವರ್ಷವನ್ನು ನಾವು ಕಳೆದಿದ್ದೇವೆ, 24 ವರ್ಷಗಳೂ ನಾವು ಅಧಿಕಾರದಲ್ಲಿ ಇದ್ದೆವು, 24 ವರ್ಷದಿಂದಲೂ ಈ ಕಾವೇರಿ ನದಿ ನೀರಿನ ಬಗ್ಗೆ ಸಮಗ್ರವಾದಂಥ ಚರ್ಚೆ ನಡೆಯುತ್ತಿದೆ. ಕಾವೇರಿ ಪರ ನಾವು ಮಾತನಾಡುತ್ತಿದ್ದೇವೆ ಆದರೆ, ಅದನ್ನು ಅನುಭವಿಸುತ್ತಿರುವವರು ಯಾರು? ತಮಿಳುನಾಡಿನವರು. ಇವೊತ್ತು ಕಾವೇರಿ ನದಿಯಿಂದ ನೀರು ಹರಿಯುತ್ತಾ ಇದೆ. ನೀರನ್ನು ಅವರು ಕೇಳುತ್ತಲೇ ಇದ್ದಾರೆ, ಪ್ರತಿ ವರ್ಷ ನಾವು ಬಿಡುತ್ತಾ ಇದ್ದೇವೆ. ಹೀಗೆ ಹರಿಯುತ್ತಿರುವ ನೀರನ್ನೆಲ್ಲ ಅವರು ಸಂಪೂರ್ಣವಾಗಿ ಬಳಕೆ ಮಾಡಿಕೊಳ್ಳುತ್ತಿದ್ದಾರೆಯೇ? ಎಷ್ಟು ನೀರು ನದಿಯಲ್ಲಿ ಹರಿಯುತ್ತಿದೆ? ಅದರ ಬಗ್ಗೆ ಏನಾದರು ಲೆಕ್ಕಾಚಾರವನ್ನು ನಮ್ಮವರು ಕೇಂದ್ರಕ್ಕೆ ಸಲ್ಲಿಸುವಂಥ ಒಂದು ವ್ಯವಸ್ಥೆಯನ್ನು ಮಾಡಿದ್ದಾರಾ? ಈ ರೀತಿ ಬಳಕೆಯಾಗದಂತಹ ನೀರನ್ನು ನದಿಗೆ ಹರಿಯಬಿಟ್ಟು ನಮ್ಮಿಂದ ಪಡೆದುಕೊಳ್ಳುತ್ತಿದ್ದಾರಲ್ಲ ಇದನ್ನು ತಡೆಹಾಕುವುದಕ್ಕೆ ನಮ್ಮವರು ಏನಾದರು ಕ್ರಮ ಕೈಗೊಂಡಿದ್ದೀರಾ? ಅಧ್ಯಕ್ಷರೆ, ಇದರ ಬಗ್ಗೆ ಸಮಗ್ರವಾಗಿ ಯೋಚನೆ ಮಾಡಬೇಕಾಗಿದೆ. ಇವೊತ್ತು ಕಾವೇರಿ ಬೇಸಿನ್‌ನಲ್ಲಿ ಎಷ್ಟು ಲಕ್ಷ ಹೆಕ್ಟೇರ್‌ಗೆ ನಾವು ನೀರನ್ನು ಉಣಿಸುತ್ತಿದ್ದೇವೆ ಎಂದರೆ 11.2 ಲಕ್ಷ ಹೆಕ್ಟೇರ್‌ಗೆ ನೀರನ್ನು ಉಣಿಸುತ್ತಿದ್ದೇವೆ. ತದನಂತರ ಹೇಮಾವತಿ, ಹಾರಂಗಿ, ಕಬಿನಿ ಜಲಾಶಯನಗಳನ್ನು ನಾವು ಕಟ್ಟಿದ್ದೆವು. ಕನಿಷ್ಠ ನಾವು ಯೋಚನೆ ಮಾಡಿದ್ದರೆ, ನಮ್ಮ ನೀರಾವರಿ ತಜ್ಞರು ಶ್ರಮ ವಹಿಸಿದ್ದರೆ, ಇನ್ನೂ ಹತ್ತು ಸಾವಿರ ಹೆಕ್ಟೇರ್ ಭೂಮಿಗೆ ನೀರನ್ನು ಉಣಿಸಬಹುದಾಗಿತ್ತು. ಆದರೆ ಅದರ ಬಗ್ಗೆ ಅವರು ಕಾರ್ಯಗತ ಮಾಡಲಿಲ್ಲ. ಪ್ರತಿ ವರ್ಷ ಮಳೆ ಬಂದು ನೀರು ತುಂಬಿ ಹರಿಯುವಂಥ ಸಂದರ್ಭದಲ್ಲಿ ಕಾವೇರಿ ನೀರಿನ ರುಚಿ ಕಂಡಂಥ ತಮಿಳುನಾಡಿನವರು ಕೇಳುತ್ತಾರೆ ನೀರು ಹರಿಸಿ, ಹರಿಸಿ, ಹರಿಸಿ ಎಂದು. ಇದಕ್ಕೋಸ್ಕರ ನಾವು ಕಬಿನಿ, ಹೇಮಾವತಿ, ಹಾರಂಗಿ ಜಲಾಶಯಗಳನ್ನು ಕಟ್ಟಬೇಕಾಗಿತ್ತೆ ಅಧ್ಯಕ್ಷರೆ? ನೀರಿನ ಬಳಕೆ ಮಾಡಿಕೊಳ್ಳುವುದಕ್ಕೆ ನಾವು

ಏಕೆ ವಿಫಲರಾದೆವು? ಇವೊತ್ತು ಅವರ ಮೇಲೆ ಆರೋಪ, ಇವರ ಮೇಲೆ ಆರೋಪ ಇದೇ ಆಗಿಹೋಗಿದೆ. ಆದರೆ ನಾವು ಕಾರ್ಯಗತವಾಗಿ ಮಾಡಬೇಕಾದಂಥ ಕೆಲಸವನ್ನು ಯಾಕೆ ಮಾಡಲಿಲ್ಲ? ಬರೀ ಕಣ್ಣೀರಿನ ಕಥೆಯನ್ನು ಹೇಳಿಕೊಳ್ಳುವುದರಲ್ಲೇ ಕನ್ನಡಿಗರು ತೃಪ್ತರಾಗುತ್ತಿದ್ದಾರೆಯೇ? ಇದರ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ಇವೊತ್ತು ಏನಾದರು ನಾವು ಹೇಮಾವತಿ, ಹಾರಂಗಿ, ಕಬಿನ ಜಲಾಶಯನಗಳ ನೀರನ್ನು ಸರಿಯಾಗಿ ಬಳಕೆ ಮಾಡಿಕೊಂಡಿದ್ದರೆ, ಇವೊತ್ತು ತುಮಕೂರು ಮತ್ತು ತಿಪಟೂರಿನವರು ನೀರಿಗೆ ಹಾಹಾಕಾರ ಪಡುತ್ತಾ ಇರಲಿಲ್ಲ. ಹೊಟ್ಟೆ ತುಂಬಾ ನೀರನ್ನಾದರೂ ಕುಡಿಯುತ್ತಿದ್ದರು. ನಾವು ಬೆಳೆಯನ್ನು ಬೆಳೆಯುತ್ತಿದ್ದೆವು ಇಲ್ಲವೋ? ಆದರೆ ಅದರ ಬಗ್ಗೆಯೂ ಕೂಡ ನಾವು ಸರಿಯಾದ ಗಮನವನ್ನು ಕಳೆದ 23 ವರ್ಷಗಳಲ್ಲಿ ವಹಿಸಲಿಲ್ಲ ಎಂಬುದು ನನ್ನ ಆರೋಪ ಇದೆ. ಮಾನ್ಯ ಪುಟ್ಟಣ್ಣಯ್ಯನವರು ಹೇಳಿದ ಹಾಗೆ ನಾವು ಮೇಲೆ ಇದ್ದೇವೆ, ಕೆಳಗಿನ ಕಣಿವೆಯಲ್ಲಿ ಅವರಿದ್ದಾರೆ. ನೀರನ್ನು ನಾವು ಇಲ್ಲಿ ತಡೆ ಹಿಡಿದರೆ ಅವರು ಕೇಳುತ್ತಾರೆ ನಾವು ಕೊಡಬೇಕು. ಅದೇ ಉಲ್ಟಾ ಪರಿಸ್ಥಿತಿಯಾಗಿದ್ದರೆ ಅಂದರೆ ತಮಿಳುನಾಡಿನವರು ಮೇಲಿದ್ದು ನಾವು ಕೆಳಗಿನ ಕಣಿವೆಯಲ್ಲಿದ್ದರೆ ಎಷ್ಟು ನೀರು ಬರುತ್ತಾ ಇತ್ತು? ಇದನ್ನು ನಾವು ಯೋಚನೆ ಮಾಡಬೇಕಾಗಿದೆ. ಕೊಡು, ಕೊಂಡುಕೊಳ್ಳು ವಿಚಾರದಲ್ಲಿ ನಾವು ಸೌಹಾರ್ದಯುತವಾಗಿರಬೇಕು, ಭಾರತದೇಶ ಒಗ್ಗಟ್ಟಾಗಿರಬೇಕು. ಆದರೆ, ಕೊಡು, ಕೊಂಡುಕೊಳ್ಳುವಂಥ ವಿಚಾರದಲ್ಲಿ ಯಾರು ಯಾರಿಗೆ ಅನುಮತಿಯನ್ನು ನೀಡಬೇಕು? ಕೆರೆ ನೀರಿಗೆ ದೊಣ್ಣೆ ನಾಯಕನ ಅಪ್ಪಣೆಯೇ! ಇವೊತ್ತು ನಾವು ಯಾವ ಸ್ಥಾನದಲ್ಲಿ ನಿಂತಿದ್ದೇವೆ? ನಿಮ್ಮದು 50 ವರ್ಷಗಳ ಅಗ್ರಿಮೆಂಟ್ ಮುಗಿಯಿತು, ನಾವು ಏನು ತೀರ್ಮಾನವನ್ನು ಮಾಡುತ್ತೇವೆ, ಆ ತೀರ್ಮಾನಕ್ಕೆ ನೀವು ಬದ್ಧರಾಗಿ ಎಂದು ಹೇಳುವಂಥದ್ದನ್ನು ನೀವು ಮಾಡಬೇಕಾಗಿತ್ತು. ಅಧ್ಯಕ್ಷರೆ, ಮೇಲನಿಂದ ಬಂದು ಮಧ್ಯಂತರ ಆಜ್ಞೆ ಬಂತು, 205 ಟಿ.ಎಂ.ಸಿ ನೀರನ್ನು ಕೊಡಬೇಕು ಎಂದು ಹೇಳಿದರೆ, ಕೊಡೋಣ. ಯಾವ ಆಧಾರದ ಮೇಲೆ ಅದನ್ನು ನಿರ್ಧಾರ ಮಾಡಿದರು? ಕಾವೇರಿ ನದಿಯಲ್ಲಿ ನೀರು ಇಲ್ಲದೇ ಇದ್ದಾಗ ನಾವು ಯಾವುದನ್ನು ಕೊಡಬೇಕು ಎಂದೇನಾದರು ಯೋಚನೆ ಮಾಡಿದಿರಾ? ಅದನ್ನು ತಿಳಿಹೇಳತಕ್ಕಂಥ ಕೆಲಸಗಳನ್ನು ನಾವು ಮಾಡಿದ್ದೇವೆಯೇ? ಪ್ರತಿಸಾರಿ 205 ಟಿ.ಎಂ.ಸಿ ನೀರನ್ನು ಕೇಳಿದತಕ್ಷಣ ನಾವು ಏನು ಮಾಡುತ್ತೇವೆ ಒಂದು ಸಭೆಯನ್ನು ಮಾಡುತ್ತೇವೆ. ಸಭೆಯನ್ನು ಮಾಡಿ ಒಂದು ನಿರ್ಣಯ ಮಾಡುವುದು, ಎಲ್ಲರೂ ದೆಹಲಿಗೆ ಹೋಗುವುದು. ದೆಹಲಿಯಲ್ಲಿ ನಾವು ಅವರನ್ನು ಸಂಧಾನ ಮಾಡುತ್ತೇವೆ, ಅವರು ಏನೋ ಹೇಳಿಕಳುಹಿಸುತ್ತಾರೆ. ಇವರು ಬರುತ್ತಾರೆ. ಇದು ಈ ಎರಡೂವರೆ ವರ್ಷದಲ್ಲಿ ನನಗೆ ವೈಯಕ್ತಿಕವಾಗಿ ಅನಿಸಿರುವಂಥದ್ದು, ಬರೀ ಸಮಾಧಾನದ ಮಾತುಗಳನ್ನು ಕೇಳಿಕೊಂಡು ಬಂದುದಕ್ಕೆ ಇವೊತ್ತು ನಮಗೆ ಏನಾಯಿತು? ಕಾವೇರಿ ಪ್ರಾಧಿಕಾರದ ರಚನೆಗೆ ಅವಕಾಶ ಕೊಟ್ಟಂತಾಯಿತು. ನಾವು ಶಾಂತಿಪ್ರಿಯರು; ಈ ಶಾಂತಿಪ್ರಿಯರು ಎನ್ನುವಂಥ ಮಾತನ್ನು ಕೇಳಿದ ತಕ್ಷಣ ನಮಗೆ ಖುಷಿಯಾಗುತ್ತೆ, ನಮ್ಮ ಹಿತವನ್ನು ನಾವು ಬಲಿಗೊಡುತ್ತೇವೆ, ಪರರ ಹಿತಕ್ಕೋಸ್ಕರ ನಾವಿಲ್ಲಿ ಸಾಯುತ್ತಿದ್ದೇವೆ. ಅಧ್ಯಕ್ಷರೆ ಈ ಒಂದು ವ್ಯವಸ್ಥೆ ಇನ್ನು ಮುಂದಾದರು ನಿಲ್ಲಬೇಕು. ಈ ವ್ಯವಸ್ಥೆ ಎಲ್ಲಿಯವರೆಗೆ ನಿಲ್ಲುವುದಕ್ಕೆ ಸಾಧ್ಯವಾಗುವುದಿಲ್ಲವೋ ಅಲ್ಲಿಯವರೆಗೆ ಈ ಕಾವೇರಿ ನದಿ ನೀರಿನ ವಿವಾದ ಬಹುಶಃ ಬಗೆಹರಿಯುವುದಿಲ್ಲ. ಇದು ಪ್ರತಿ

ಸಂದರ್ಭದಲ್ಲೂ ಜಟಿಲವಾಗುತ್ತಿದೆ. ಈ ವಿವಾದ 1924 ರಿಂದ 1974ರಲ್ಲಿ ಈ ಅಗ್ರಿಮೆಂಟ್ ಕೊನೆಗೊಳ್ಳಬೇಕಾಗಿತ್ತು. ಆದರೆ 1974ರಿಂದ 1997ರವರೆಗೆ ಮಧ್ಯಂತರ ಆಜ್ಞೆ ಬಂತು, ನಂತರ ಕಾವೇರಿ ಪ್ರಾಧಿಕಾರ ಬಂತು. ಈಗ ನಾವು ಇನ್ನೊಂದು ಯೋಚನೆ ಮಾಡಬೇಕಾಗುತ್ತದೆ. ಈ ಕಾವೇರಿ ಪ್ರಾಧಿಕಾರಕ್ಕೆ ಯಾವ ಹಕ್ಕು ಇದೆ, ಎಂದರೆ ಇವತ್ತು ನಮ್ಮ ಅಣೆಕಟ್ಟಿನಲ್ಲಿರುವಂತಹ ನೀರನ್ನು ಹೊರಗಡೆ ಬಿಡಬೇಕಾದರೆ ಅವರು ನಿಯಂತ್ರಣ ಮಾಡುತ್ತಾರಂತೆ, ಆ ನಿಯಂತ್ರಣವನ್ನು ಮಾಡುವುದಕ್ಕೋಸ್ಕರ ದುಡ್ಡು ಕೊಡಬೇಕಂತೆ, ಈ ಪ್ರಾಧಿಕಾರ ಕೆಲಸವನ್ನು ಮಾಡಲು, ಅದು ಈ ಪ್ರಾಧಿಕಾರ ಎಲ್ಲಿ ಕೆಲಸ ಮಾಡುತ್ತದೆ ಎಂದರೆ ಕೊಯಮತ್ತೂರುನಲ್ಲಿ, ಈ ಪ್ರಾಧಿಕಾರಕ್ಕೆ ವ್ಯಕ್ತಿಗಳನ್ನು ನೇಮಕ ಮಾಡುವವರು ಕೇಂದ್ರದವರು, ನಮಗೆ ಏನಾದರೂ ಈ ಪ್ರಾಧಿಕಾರದಿಂದ ಅನ್ಯಾಯವಾಯಿತೆಂದರೆ ಅವರಿಗೆ ನಾವು ಮನವಿಯನ್ನು ಸಲ್ಲಿಸಬೇಕಂತೆ, ಇದು ಎಷ್ಟರಮಟ್ಟಿಗೆ ಇದೆ ಎಂದರೆ ನ್ಯಾಯಕ್ಕೋಸ್ಕರ ನಾವು ಅವರನ್ನು ಸಂಪರ್ಕ ಮಾಡಬೇಕಾಗಿದೆಯೇ? ಕೇಂದ್ರದವರನ್ನು ಇನ್ನು ನಂಬುವುದಕ್ಕಾಗುತ್ತದೆಯೇ? ಎಂಬುದನ್ನು ಯೋಚನೆ ಮಾಡಬೇಕಾಗಿದೆ. ರಾಜಕೀಯ ಜಟಿಲತೆ ಏನೇ ಇರಲಿ, ಆದರೆ ರಾಜ್ಯದ ಹಿತಾಸಕ್ತಿಯನ್ನು ನಾವು ಬಲಿ ಕೊಡುವುದು ಬೇಡ. ರಾಜಕೀಯ ಸಂಕಷ್ಟಕ್ಕೋಸ್ಕರ ನಾವು ಒಬ್ಬರ ಜೊತೆಗೆ ಶಾಮೀಲಾಗುವುದು ಬೇಡ. ಕಳೆದ 24 ವರ್ಷಗಳಿಂದ ಬಗೆಹರಿಯದಂತಹ ಸಮಸ್ಯೆಯನ್ನು ಬಗೆಹರಿಸುವಂತಹ ದಿಕ್ಕಿನಲ್ಲಿ ಎಲ್ಲರೂ ಒಂದಾಗಬೇಕು. ಇದನ್ನು ಬಗೆಹರಿಸುವಂತಹ ದಿಕ್ಕಿನಲ್ಲಿ ತಮಿಳುನಾಡಿನವರು ಹೇಗೆ ಕಾವೇರಿ ಪ್ರಾಧಿಕಾರ ರಚನೆಯಾದ ತಕ್ಷಣ ಕೇಂದ್ರಕ್ಕೆ ಅಭಿನಂದನೆಯನ್ನು ಸಲ್ಲಿಸಿದರೋ ಅದೇ ದಿವಸ ನಾವುಗಳು ಕೂಡ ಸರಿಯಾದ ರೀತಿಯಲ್ಲಿ ಖಂಡಿಸಿದ್ದರೆ, ಅದಕ್ಕೂ ಅರ್ಥ ಬರುತ್ತಿತ್ತು, ಇವತ್ತು ಸದನದಲ್ಲಿ ಇನ್ನೊಂದು ವಿಚಾರವನ್ನು ತಿಳಿಸುವುದಕ್ಕೆ ಇಷ್ಟ ಪಡುತ್ತೇನೆ. ನಾವು ಮೇಲ್ಕಣಿವೆಯಲ್ಲಿದ್ದು ನೀರನ್ನು ಬಿಡಬೇಕೆನ್ನುವ ಬಗ್ಗೆ ತಮಿಳುನಾಡಿನಲ್ಲಿ ಅವರು ಅಷ್ಟೊಂದು ಮಾತನಾಡುತ್ತಾರಲ್ಲಾ, ಕೇಂದ್ರದವರು ಸ್ಥಾಪನೆ ಮಾಡಿರುವಂತಹ ಕಲ್ಪಾಕಂ ವಿದ್ಯುತ್ ಸ್ಥಾವರದಿಂದ ನಮ್ಮ ಕರ್ನಾಟಕಕ್ಕೆ ಎಷ್ಟು ವಿದ್ಯುತ್ತನ್ನು ಕೊಡುತ್ತಾರೆಂಬ ಬಗ್ಗೆ ತಾವು ಯಾರಾದರೂ ಪ್ರಶ್ನೆ ಮಾಡಿದ್ದಿರಾ? ಭಾರತದಲ್ಲಿರುವವರಿಗೆ ಸಮಸ್ತರಿಗೂ ಸರಿಯಾದಂತಹ ರೀತಿಯಲ್ಲಿ ಹಕ್ಕು ಸಿಗಬೇಕೆಂದು ಭಾರತ ಸರ್ಕಾರ ಸ್ಥಾಪನೆ ಮಾಡಿರುವಂತಹ ಕಲ್ಪಾಕಂ ವಿದ್ಯುತ್ ಸ್ಥಾವರ ಅದು ಬರೀ ತಮಿಳುನಾಡಿನಲ್ಲಿ ಮಾತ್ರ ಇದೆ. ಅದರಲ್ಲಿ ಸಂಪೂರ್ಣವಾಗಿ ತಯಾರಾಗುವಂತಹ ವಿದ್ಯುತ್ ನಮಗೆ ಸಿಗಬೇಕೆಂದು ಪ್ರತಿಪಾದನೆ ಮಾಡುತ್ತಿರುವಂತಹ ಸಂದರ್ಭದಲ್ಲಿ ನಾವು ಅವರ ಮೇಲೆ ಯಾವ ಒತ್ತಡವನ್ನು ತಂದಿದ್ದೇವೆ. ಅವರು ನೀರಿನ ಹಂಚಿಕೆಯಲ್ಲಿ ನಮ್ಮನ್ನೇ ಕೇಳುತ್ತಾರೆ. ಕೇಂದ್ರಸರ್ಕಾರ ಅವರಿಗೆ ಮಾತ್ರ ಯಾವುದೇ ಉದ್ಯಮಗಳನ್ನು ಮಾಡಿದರೂ ಅವರ ಮಟ್ಟಿಗೆ ಮಾತ್ರ ಸಿಗುವಂತಹ ವ್ಯವಸ್ಥೆ ಮಾಡುತ್ತದೆ. ನಮಗೆ ಸಿಗುವಂತಹ ವ್ಯವಸ್ಥೆಯನ್ನು ಅವರು ಮಾಡುವುದಕ್ಕೆ ಹೋಗುವುದೇ ಇಲ್ಲ. ಈ ಸಂದರ್ಭದಲ್ಲಿ ಹಿರಿಯ ನಾಯಕರ ಜೊತೆಯಲ್ಲಿ ಮಾತನಾಡುವುದಕ್ಕೆ ಹಿಂಭಾಗದಲ್ಲಿರುವಂತಹ ಸದಸ್ಯರಿಗೂ ಅವಕಾಶವಿದೆ ಎಂದು, ತಾವು ನಮಗೂ ಅವಕಾಶವನ್ನು ಈ ಸಂದರ್ಭದಲ್ಲಿ ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಸಭೆಯನ್ನು ಮುಂದೂಡಿದ್ದೇವೆ, ಪುನಃ ಮಧ್ಯಾಹ್ನ 3.00 ಗಂಟೆಗೆ ಸಮಾವೇಶಗೊಳ್ಳಲಿದೆ.

(ಸದನವು ಮಧ್ಯಾಹ್ನ 2 ಗಂಟೆ 3 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ 3 ಗಂಟೆಗೆ ಸೇರಲು ನಿಶ್ಚಯಿಸಿತು)

(3 ಗಂಟೆ 10 ನಿಮಿಷಕ್ಕೆ ಸಭೆಯು ಸಮಾವೇಶಗೊಂಡಿತು)

ಮಾನ್ಯ ಸಭಾಧ್ಯಕ್ಷರ (ಶ್ರೀ ರಮೇಶ್‌ಕುಮಾರ್) ಪೀಠದಲ್ಲಿದ್ದರು.

ಅಧ್ಯಕ್ಷರು : ಮಾನ್ಯ ನೀರಾವರಿ ಸಚಿವರು ಈಗ ಉತ್ತರವನ್ನು ಕೊಡಬೇಕು.

ನಿಲುವಳಿ ಸೂಚನೆ

ಕಾವೇರಿ ಪ್ರಾಧಿಕಾರ ರಚನೆ ಕುರಿತು

+ಶ್ರೀ ಕೆ.ಎನ್. ನಾಗೇಗೌಡ (ಭಾರೀ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ದಿವಸ ಸದನದಲ್ಲಿ ಸುಮಾರು ಎರಡು ಎರಡೂವರೆ ಗಂಟೆಗಳ ಕಾಲ ಬಿ.ಜೆಪಿ. ನಾಯಕರಾದಂಥ ಯಡಿಯೂರಪ್ಪನವರು, ವಿರೋಧಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರು, ನಂಜೇಗೌಡರು, ಶ್ರೀರಾಮರೆಡ್ಡಿಯವರು, ಪುಟ್ಟಣ್ಣಯ್ಯನವರು, ವೀರಪ್ಪ ಮೊಯಲಿಯವರು ಹಾಗೂ ಬಸವರಾಜ್‌ರವರು ಎಲ್ಲಾ ಹಿರಿಯ ನಾಯಕರುಗಳು ಕಾವೇರಿ ವಿಚಾರದಲ್ಲಿ ಈಗಿರತಕ್ಕ ಸದ್ಯದ ಪರಿಸ್ಥಿತಿಯನ್ನು ಅವರದೇ ಆದಂಥ ವಿಚಾರಧಾರೆಯಲ್ಲಿ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಬಹುಶಃ ನನಗೂ ಒಂದಷ್ಟು ಅನುಭವ ಇರುವುದರ ಪ್ರಯುಕ್ತ, ಈ ವಿಚಾರದಲ್ಲಿ ಹೇಳುವುದಾದರೆ ರಾಜ್ಯದ ಯಾವುದೇ ಸರ್ಕಾರ ಯಾವುದೇ ರಾಜಕೀಯ ಪಕ್ಷಕ್ಕೆ ನಮ್ಮ ಕಾವೇರಿ ಜಲದ ವಿಚಾರದಲ್ಲಿ ಭಿನ್ನಾಭಿಪ್ರಾಯ ಬರುವುದಿಲ್ಲ. ಎಲ್ಲರೂ ರಾಜ್ಯದ ಹಿತವನ್ನು ಕಾಪಾಡತಕ್ಕದ್ದರಲ್ಲಿ ಹತ್ತಾರು ವರ್ಷಗಳಿಂದ ಅವರದೇ ಆದಂಥ ಪ್ರಯತ್ನವನ್ನು ಸಂದರ್ಭಕ್ಕೆ ಅನುಗುಣವಾಗಿ ಎದುರಿಸಿಕೊಂಡು ಬಂದಿದ್ದಾರೆ. ಅದು ತಪ್ಪಾಗಿರಬಹುದು ಅಥವಾ ಸರಿ ಇರಬಹುದು. ಆದರೂ ಕೂಡ ಆ ಸಮಸ್ಯೆಯನ್ನು ಸಂಪೂರ್ಣವಾಗಿ ಎಲ್ಲಾ ಸರ್ಕಾರಗಳವರೂ ಎದುರಿಸಿಕೊಂಡು ಬಂದಿದ್ದಾರೆ ಎಂದು ಹೇಳಿದರೆ, ಯಾರೂ ಅನ್ಯಥಾ ಭಾವಿಸುವುದಿಲ್ಲ ಎಂದು ನಾನು ಅಂದುಕೊಂಡಿದ್ದೇನೆ. ಕರ್ನಾಟಕ ರಾಜ್ಯದ ಯಾವುದೇ ಶಾಸಕ ಆಗಲೀ ಯಾವುದೇ ಪ್ರಜೆಯಾಗಲೀ ಕರ್ನಾಟಕ ರಾಜ್ಯದ ರೈತರ ಹಿತಕ್ಕೆ ಧಕ್ಕೆ ಬರುವಂಥ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಿಲ್ಲ, ಮಾಡುವುದೂ ಇಲ್ಲ ಎನ್ನತಕ್ಕ ಅಪಾರ ನಂಬಿಕೆ ಜನರಲ್ಲೂ ಇದೆ, ರಾಜಕೀಯ ಪಕ್ಷದಲ್ಲೂ ಇದೆ, ನಾಯಕರಲ್ಲೂ ಇದೆ ಎಂದು ಅಂದುಕೊಂಡಿದ್ದೇನೆ. ಪ್ರಾರಂಭದಲ್ಲಿ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಪ್ಪಾಗಿರಬಹುದು, ಸರಿಯಾಗಿರಬಹುದು ಅಂದರೆ ಏನು? ಏಕೆಂದರೆ ಇಲ್ಲಿಯವರೆಗೆ ನಾವು ಅನುಸರಿಸಿದಂಥ ಮಾರ್ಗ ಸರಿ ಇದೆ ಅಂತ ನೀವು ಹೇಳಿಕೊಂಡರೆ ಪರ್ವಾಗಿಲ್ಲ. ತಪ್ಪಾಗಿರಬಹುದು, ಸರಿಯಾಗಿರಬಹುದು ಎಂದು ಹೇಳಿ ಅದೇ ದಾರಿಯಲ್ಲಿ ಹೋಗುತ್ತೇವೆ ಎಂದರೆ....

ಶ್ರೀ ಕೆ.ಎನ್. ನಾಗೇಗೌಡ : ಟ್ರಿಬ್ಯುನಲ್ ಅಪಾಯಿಂಟ್‌ಮೆಂಟ್‌ನ್ನು ತೀವ್ರವಾಗಿ ವಿರೋಧ ಮಾಡಿದ್ದೇವೆ. ಟ್ರಿಬ್ಯುನಲ್ ಅಪಾಯಿಂಟ್ ಮಾಡಿದಾಗ ಎಲ್ಲರೂ ವಿರೋಧ ಮಾಡಿದ್ದೇವೆ. ಆ ಹಿನ್ನೆಲೆಯಲ್ಲಿ ಆ ಮಾತನ್ನು ಹೇಳಿದೆ. ಆದ್ದರಿಂದ ಇವತ್ತೂ ಸಹ ಪ್ರಮುಖವಾಗಿರತಕ್ಕಂಥ ವಿಚಾರ ಇವತ್ತು ಏನು ಈ ಸ್ಕೀಮನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಒಂದು ಡ್ರಾಫ್ಟ್ ನೋಟಿಫಿಕೇಷನ್‌ನ್ನು ನಮ್ಮ ರಾಜ್ಯಸರ್ಕಾರದ ಪರಿಶೀಲನೆಗೆ ಕಳುಹಿಸಿಕೊಟ್ಟಿದ್ದಾರೆ, ಅದು ಬಹಳ ಮಹತ್ತರವಾಗಿರತಕ್ಕದ್ದು ಎಂದು ನಾನಂದುಕೊಂಡಿದ್ದೇನೆ. ಮಾನ್ಯ ಅಧ್ಯಕ್ಷರೆ, 30ನೇ ತಾರೀಖು ಡೇಟ್ ಇದೆ, ಇದು ನಮ್ಮ ಕೈಗೆ ತಲುಪಿದಾಗ ನಾಲ್ಕನೇ ತಾರೀಖು. ನನಗೆ ಇದು ಗೊತ್ತಾದ ತಕ್ಷಣವೇ ಡೆಲ್ಲಿಯಲ್ಲಿ 17ನೇ ತಾರೀಖಿನ ದಿವಸ ನಮ್ಮ ವಕೀಲರ ಹತ್ತಿರ ಮಾತನಾಡಿ ಬಹಳ ತೀವ್ರವಾದಂಥ ಪ್ರತಿಭಟನೆಯನ್ನು ವ್ಯಕ್ತಪಡಿಸಿ ಪತ್ರಿಕೆಯಲ್ಲಿ ಪ್ರಕಟಣೆ ನೀಡಿದೆ. ಬಹುಶಃ ಎಲ್ಲಾ ಪತ್ರಿಕೆಗಳಲ್ಲಿ ಕಾವೇರಿ ವಿವಾದ ಕೇಂದ್ರದ ಕರಡು ಪ್ರಸ್ತಾವನೆಗೆ ರಾಜ್ಯದ ವಿರೋಧ ಎಂದು ಬಂದಿದೆ. ಈ ಮಾತನ್ನು ಅದು ನಮಗೆ ತಲುಪಿದ ಅಲ್ಪ ದಿನದಲ್ಲೇ ನಾನು ತೀವ್ರವಾದ ಪ್ರತಿಭಟನೆಯನ್ನು ನಮ್ಮ ವಕೀಲರನ್ನು ಎಲ್ಲರನ್ನೂ ನೋಡಿ ನಾನು ಸೂಕ್ಷ್ಮವಾಗಿ ಹೇಳಿದಂಥ ಕಾಲದಲ್ಲಿ ಅತ್ಯಂತ ಶೀಘ್ರದಲ್ಲೇ ಎಲ್ಲಾ ವಿರೋಧಪಕ್ಷದ ನಾಯಕರುಗಳನ್ನು, ಸದನದ ಎಲ್ಲಾ ಮುಖಂಡರುಗಳನ್ನು ಕರೆಸಿಕೊಂಡು ಇದರ ಬಗ್ಗೆ ಅಭಿಪ್ರಾಯ ಪಡೆದು, ತದನಂತರ ಆರು ವಾರಗಳ ಕಾಲ ಅವಕಾಶ ಕೊಟ್ಟಿದ್ದಾರೆ, ಅಷ್ಟರಲ್ಲಿ ನಮ್ಮ ಕರ್ನಾಟಕ ಸರ್ಕಾರದ ನಿಲುವನ್ನು ನಾವು ಕೇಂದ್ರಸರ್ಕಾರಕ್ಕೆ ಕಳುಹಿಸಿಕೊಡುತ್ತೇವೆ ಎನ್ನತಕ್ಕದ್ದನ್ನು ಸ್ಥ ಳ್ಳ ಅಂದಿನ ದಿವಸವೇ 17ನೇ ತಾರೀಖು ಜೂನ್‌ನಲ್ಲೇ ತೀವ್ರ ಭಟನೆಯನ್ನು ದೆಹಲಿಯಲ್ಲಿ ಮಾಡಿದೆ. ಮಾಡಿದ ನಂತರ ಮಾನ್ಯ ಮುಖ್ಯಮಂತ್ರಿಗಳು ಕಾಗದ ಏನು ಬರೆದಿದ್ದರು ಎನ್ನತಕ್ಕದ್ದನ್ನು ಮಾನ್ಯ ವಿರೋಧಪಕ್ಷದ ನಾಯಕರು ಕೇಳಿದರು 17-6-97ರಂದು ನಮ್ಮ ಚೀಫ್ ಸೆಕ್ರೆಟರಿಯವರು,

`I am in receipt of your letter dated.... 97 forwarding a copy of the draft scheme prepared by the Government of India for implementing Interim order of the Cauvery Dispute Water Tribunal. The draft prepared requires indepth study at all levels before offering our comments. Our Chief Minister is on foreign tour till the end of June 1997. Therefore, we would be in a position to offer our comments by the end of July, 1997. ಎಂದು ನಮ್ಮ ಚೀಫ್ ಸೆಕ್ರೆಟರಿಯವರು ಮಿನಿಸ್ಟ್ರಿ ಆಫ್ ವಾಟರ್ ರಿಸೋರ್ಸಸ್‌ನಲ್ಲಿ ಪ್ರಾಜೆಕ್ಟ್ ಕಮಿಷನರ್ ಯಾರಿದ್ದಾರೆ, ಅವರಿಗೆ ಕಳುಹಿಸಿಕೊಟ್ಟಿರತಕ್ಕ ಕಾಗದದ ವಿನಾ ಬೇರೆ ಏನೂ ಇಲ್ಲ. ಅದರನಂತರ ಮೂರನೆಯದು, ಮಾನ್ಯ ಮುಖ್ಯಮಂತ್ರಿಗಳು ವಿದೇಶದಲ್ಲಿದ್ದಾಗ ಅವರನ್ನು ಟೆಲಿಫೋನ್ ಮುಖಾಂತರ ಕಾಂಟ್ಯಾಕ್ಟ್ ಮಾಡಿ ಒಂದನೇ ತಾರೀಖಿನ ದಿವಸ ಎಲ್ಲಾ ವಿವಿಧ ರಾಜಕೀಯ ಪಕ್ಷಗಳ ಸಭೆಯನ್ನು ನಾವು ಕರೆದೆವು. ರಾಜಕೀಯ ಪಕ್ಷದ ಸಭೆಯಲ್ಲೂ ಸಹ ಏನು ತೀರ್ಮಾನ ಆಗಿದೆ ಎಂದು ನಾನು ಈ ಸಂದರ್ಭದಲ್ಲಿ ಸೂಕ್ಷ್ಮವಾಗಿ ಹೇಳಿದರೆ ತಪ್ಪಾಗುವುದಿಲ್ಲ ಎಂದು ನಾನಾದರೂ ಅಂದುಕೊಂಡಿದ್ದೇನೆ. Decision of All Party Meeting - Extract of the Proceedings dated. 1.7.1997.

Draft Notification issued by the Government of India is not all acceptable to our State. Before the July 15th all necessary legal steps will be taken to protect the interest of the State. An All party Delegation to meet the Prime Minister as early as possible and urge him to convene the National Water Resources Council and evolve a permanent solution to this Inter State Water Dispute and formulate National Water Policy.

Government of India may be requested to convene a meeting of the concerned State Chief Ministers to find a amicable settlement.

ಇದು ಒಂದನೇ ತಾರೀಖಿನ ದಿವಸ ನಾವು ಕರೆದಂಥ ಸರ್ವಪಕ್ಷಗಳ ಸಭೆಯಲ್ಲಿ ಆದ ತೀರ್ಮಾನದಂತೆ ಸರ್ವಪಕ್ಷಗಳ ನಿಯೋಗದಲ್ಲಿ ನಾವೆಲ್ಲಾ ಪ್ರಧಾನಿಗಳ ಹತ್ತಿರ ಹೋಗಿದ್ದೆವು. ಹೋಗಿ ಅಲ್ಲಿ ನಡೆದಂಥ ಎಲ್ಲಾ ವಿಚಾರಗಳನ್ನೂ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಕಾಲವೂ ಇಲ್ಲ ಮತ್ತು ಹೇಳುವಂಥ ಅವಶ್ಯಕತೆಯೂ ಇಲ್ಲ ಎಂದು ನಾನಾದರೂ ಭಾವಿಸಿ ಕೊಂಡಿದ್ದೇನೆ. ಅಲ್ಲಿ ನಡೆದಂಥ ಪ್ರಮುಖವಾದ ವಿಚಾರವನ್ನು, ಲೀಗಲ್ ಸ್ಟೆಪ್ಸ್ ಬಗ್ಗೆ ಮಾತನಾಡಲು ನಮ್ಮ ಲಾಯರ್ ನಾರಿಮನ್ ಅವರ ಹತ್ತಿರ ಹೋಗಿದ್ದಾಗ ಮಾಜಿ ಮುಖ್ಯಮಂತ್ರಿಗಳಾದ ವೀರಪ್ಪಮೊಯಲಿಯವರು, ಮಾನ್ಯ ಯಡಿಯೂರಪ್ಪನವರು, ಮಾನ್ಯ ಖರ್ಗೆಯವರು ಇದ್ದರು. ಇನ್ನೂ ಅನೇಕ ಸ್ನೇಹಿತರೆಲ್ಲರೂ ಕೂಡ ಆ ಸಂದರ್ಭದಲ್ಲಿದ್ದರು. ಆಗ ಅಲ್ಲಿ ನಡೆದಂಥ ಕೆಲವು ವಿಚಾರಗಳನ್ನು ಅವರು ಕೇಳಿಕೊಂಡಿದ್ದಾರೆ ಎಂದು ನಾನು ಅಂದುಕೊಂಡಿದ್ದೇನೆ. ತದನಂತರ ಈ ನ್ಯಾಷನಲ್ ವಾಟರ್ ಪಾಲಿಸಿ ಬಗ್ಗೆ ಏನೂ ಮಾಡಲಿಲ್ಲ ಏನೂ ಕ್ರಮ ತೆಗೆದುಕೊಂಡೇ ಇಲ್ಲ ಎನ್ನತಕ್ಕಂಥ ಬಹಳ ಗಂಭೀರವಾದ ವಿಚಾರವನ್ನು ಮಾನ್ಯ ಯಡಿಯೂರಪ್ಪನವರು ಇನ್ನೂ ಅನೇಕ ಸ್ನೇಹಿತರು ಹೇಳಿದರು. ನ್ಯಾಷನಲ್ ವಾಟರ್ ಪಾಲಿಸಿ ಬಗ್ಗೆ 6ನೇ ಫೆಬ್ರವರಿ 96ರಲ್ಲಿ ನ್ಯಾಷನಲ್ ವಾಟರ್ ರಿಸೋರ್ಸಸ್ ಕೌನ್ಸಿಲ್ ಮೀಟಿಂಗ್‌ನಲ್ಲಿ ಮಾಡಿಫೈಡ್ ಡ್ರಾಫ್ಟನ್ನು ನಮ್ಮ ಸಿ.ಎಂ. ಅವರು ಹಿಂದೆ ಏನು ಕೊಟ್ಟಿದ್ದರೋ, ಅದನ್ನು 6ನೇ ಫೆಬ್ರವರಿ 96ರಲ್ಲಿ ಜೆ.ಹೆಚ್. ಪಟೇಲರು ಬಂದಮೇಲೆ ಅಲ್ಲಿ ಪ್ರಸ್ತಾಪ ಮಾಡಿ 20-2-97ರಲ್ಲಿ ಅಂದರೆ 97ನೇ ಫೆಬ್ರವರಿ 20ರಲ್ಲಿ ಕರ್ನಾಟಕದ ಮುಖ್ಯಮಂತ್ರಿಗಳೇ ಅಲ್ಲಿಗೆ ಒಂದು ಕಾಗದವನ್ನು ಬರೆದಿದ್ದಾರೆ. ಬಹುಶಃ ಅದನ್ನು ಓದತಕ್ಕ ಅವಶ್ಯಕತೆ ಇಲ್ಲ ಎಂದು ನಾನಂದುಕೊಳ್ಳುತ್ತೇನೆ. ಪ್ರಮುಖವಾದಂಥ ವಿಚಾರ ಅಂದರೆ ಈ ನ್ಯಾಷನಲ್ ವಾಟರ್ ಪಾಲಿಸಿಗೆ ಒಂದು ಗೈಡ್‌ಲೈನ್ಸ್ ಬೇಕು. ಬಹಳ ಹಿಂದಿನಿಂದ ನಾವು ಕೇಳಿಕೊಂಡು ಬಂದಿದ್ದೇವೆ. 6ನೇ ತಾರೀಖು ಫೆಬ್ರವರಿ 96ರಲ್ಲಿ ಕೂಡ ಕೇಳಿದ್ದೇವೆ. ಹಿಂದೆ ಮಾಡಿಫಿಕೇಷನ್ ಡ್ರಾಫ್ಟ್ ಕಳುಹಿಸಿಕೊಟ್ಟಿದ್ದೇವೆ. ಅದರ ಬಗ್ಗೆ ಭಾರತ ಸರ್ಕಾರದ ನ್ಯಾಷನಲ್ ವಾಟರ್ ಪಾಲಿಸಿಗೆ ಒಂದು ಗೈಡ್‌ಲೈನ್ ಮಾಡಬೇಕೆಂದು ಹಿಂದಿನಿಂದ ಒತ್ತಾಯ ಮಾಡಿಕೊಂಡುಬಂದಿರತಕ್ಕ ಆಧಾರದ ಮೇಲೆ 20-2-97ರಲ್ಲಿ ಪ್ರೈಮ್ ಮಿನಿಸ್ಟರ್‌ಗೆ ಕಾಗದ ಬರೆದಿರತಕ್ಕದ್ದು ಇಲ್ಲಿದೆ ಎಂಬುದನ್ನು ನಾನು ಸದನದ ಗಮನಕ್ಕೆ ತಂದರೆ ಒಳ್ಳೆಯದಾಗುತ್ತದೆ. ಅಂದರೆ ನ್ಯಾಷನಲ್ ವಾಟರ್ ಪಾಲಿಸಿಗೆ ಗೈಡ್ ಲೈನ್ಸ್

ಹಾಕಬೇಕು ಎಂಬ ಬಗ್ಗೆ ರಾಜ್ಯ ಸರ್ಕಾರ ಕಳೆದ ಸುಮಾರು ಎರಡು ಎರಡೂವರೆ ವರ್ಷಗಳಿಂದ ಸತತವಾಗಿ ಪ್ರಯತ್ನ ಮಾಡಿದೆ, ಅನೇಕ ಕಾಗದಗಳನ್ನು ಬರೆದಿವೆ. ಪ್ರಧಾನಮಂತ್ರಿಗಳ ಹತ್ತಿರ ಚರ್ಚೆಯಾಗಿದೆ. ನ್ಯಾಷನಲ್ ವಾಟರ್ ಕೌನ್ಸಿಲ್ ಮೀಟಿಂಗ್‌ನಲ್ಲಿ ಕೂಡ ಚರ್ಚೆಯಾಗಿದೆ. ಅಲ್ಲಿಂದ ಇಲ್ಲಿಯವರೆಗೆ ಒತ್ತಾಯ ಮಾಡಿರುವುದನ್ನು ಎಲ್ಲಾ ಸದಸ್ಯರ ಗಮನಕ್ಕೆ ತರತಕ್ಕದ್ದು ಈ ಸಂದರ್ಭದಲ್ಲಿ ಸೂಕ್ತವೆಂದು ನಾನು ಅಂದುಕೊಳ್ಳುತ್ತೇನೆ. ಉಳಿದಿರತಕ್ಕ ಹಲವಾರು ವಿಚಾರಗಳಲ್ಲಿ ಮೇಜರಾಗಿ ನಮ್ಮ ನಂಜೇಗೌಡರು ಪ್ರಸ್ತಾಪ ಮಾಡಿದರು. ನೀವು ಎಲ್ಲಿಯವರೆಗೆ ನೀರು ಬಟ್ಟಿದ್ದೀರಿ, ಎಷ್ಟು ನೀರು ಬಿಟ್ಟಿದ್ದೀರಿ? ಇದರಲ್ಲಿ ಮುಚ್ಚುಮರೆ ಏನಿದೆ? ಸೂಕ್ಷ್ಮವಾಗಿ ಹೇಳತಕ್ಕದ್ದು ಏನೂ ಇಲ್ಲ, ಹೇಳಬೇಕು ಎಂಬ ಮಾತನ್ನು ಈ ಸಂದರ್ಭದಲ್ಲಿ ಅವರು ಹೇಳಿದರು. ನಾನು ಹೇಳುವುದಾದರೆ ಇದರಲ್ಲಿ ಮುಚ್ಚುಮರೆ ಏನೂ ಇಲ್ಲ. 91ರಿಂದ 97ರವರೆಗೆ ಪ್ರತಿವರ್ಷ ತಾವು ಹೇಳಿದಹಾಗೆ ಬೆಳಗುಂಡಲುನಲ್ಲಿ ಎಷ್ಟು ಮೆಟ್ಟೂರಿನಲ್ಲಿ ಎಷ್ಟು ಎಂದು ಸುಪ್ರೀಂ ಕೋರ್ಟಿಗೆ ಕೊಟ್ಟಿದ್ದೇವೆ. ಟ್ರಿಬ್ಯುನಲ್‌ಗೆ ಕೊಡುತ್ತಿದ್ದೇವೆ. ಮೆಟ್ಟೂರಿನಲ್ಲಿ ನಮ್ಮ ಗೇಜ್ ಇಲ್ಲ. ತಮಿಳುನಾಡಿನವರೇ ಮೈಂಟೇನ್ ಮಾಡುತ್ತಿದ್ದಾರೆ. ಬೆಳಗುಂಡಲುನಲ್ಲಿ ಸಿ. ಡಬ್ಲ್ಯೂ.ಸಿ. ಯವರ ಮೈಂಟೆನೆನ್ಸ್ ಇದೆ. ಇದರ ಬಗ್ಗೆ ತಕರಾರಿದೆ ಎಂಬುದು ಮಾನ್ಯ ಮೊಯಲಿಯವರಿಗೂ ಗೊತ್ತಿದೆ. ಆದರೆ ನಾನು ಎರಡೂ ಫಿಗರ್‌ನ್ನು ಹೇಳುವುದಾದರೆ 91-92ರಲ್ಲಿ ನಮ್ಮದಿರುವುದು ಟ್ರಿಬ್ಯುನಲ್ ಆರ್ಡರ್ ಪ್ರಕಾರ In view of the above, we direct the State of Karnataka to release water from its reservoir in Karnataka so as to ensure, ಆಕ್ಚುಯಲ್ ಫ್ಲೋ ಇರಲಿ, ಸರ್‌ಪ್ಲಸ್ ಇರಲಿ ಯಾವಾಗಲಾದರೂ ಹೋಗಿರಲಿ to ensure... Therefore, the order will be effective from July. We further direct to regulate release of water in the following to ensure that 205 TMC of water is available in Tamil Nadu Mettur Reservoir in a year June to May,... ಜೂನ್‌ನಿಂದ ಮೇವರೆಗೆ ಮೆಟ್ಟೂರು ರಿಸರ್ವಾಯರ್ ಹತ್ತಿರ 205 ಟಿ.ಎಂ.ಸಿ. ನೀರು ಇರಬೇಕು ಎಂದು ಟ್ರಿಬ್ಯುನಲ್ ಕೊಟ್ಟ ಆರ್ಡರ್‌ನ್ನು ನಾವು ಒಪ್ಪಿಲ್ಲ. ಆದರೂ ಕೂಡ ಅಲ್ಲಿರತಕ್ಕ ಆರ್ಡರ್ ಪ್ರಕಾರ ನಾವು ಇಲ್ಲಿಯವರೆಗೆ ರಿಲೀಸ್ ಮಾಡಿರತಕ್ಕ, ಆಕ್ಚುಯಲ್ಲಾಗಿ ಮಾಡಿರತಕ್ಕದ್ದನ್ನು ಹೇಳುತ್ತೇನೆ. 1991-92ರಲ್ಲಿ ಬೆಳಗುಂಡಲು ಹತ್ತಿರ 340.55 ಟಿಎಂಸಿ. ಮೆಟ್ಟೂರು ಹತ್ತಿರ 332.38 ಟಿಎಂಸಿ. 1992-93ಕ್ಕೆ ಬೆಳಗೊಂಡಲು ಹತ್ತಿರ 358.61. ಮೆಟ್ಟೂರು ಹತ್ತಿರ 367.37.1995-96ಕ್ಕೆ ಬಿಳಿಗುಂಡ್ಲುನಲ್ಲಿ 197.03 ಮತ್ತು ಮೆಟ್ಟೂರಿನಲ್ಲಿ 183.09. 96-97ಕ್ಕೆ ಬಿಳಿಗುಂಡಲುನಲ್ಲಿ 245. 45 ಮತ್ತು ಮೆಟ್ಟೂರಿನಲ್ಲಿ 244.05. ಪ್ರತಿವರ್ಷಕ್ಕೆ ಬಹುಶಃ ಒಂದು 4-5 ಟಿಎಂಸಿ ಬಿಟ್ಟರೆ ಪ್ರತಿವರ್ಷ ಹೆಚ್ಚುಕಡಿಮೆ ಟ್ರಿಬ್ಯುನಲ್‌ನವರು ಏನು ಹೇಳಿದ್ದಾರೆ ಅಷ್ಟು ಆಗುತ್ತದೆ. ಟ್ರಿಬ್ಯುನಲ್‌ನ ಇಂಟರೀಮ್ ಆರ್ಡರ್ ಆದಾಗಿನಿಂದ ಇಲ್ಲಿಯವರೆಗೆ ಎಷ್ಟೆಷ್ಟು ನೀರು ನಾವು ಬಿಟ್ಟಿದ್ದೇವೆ, ಮೆಟ್ಟೂರು ಹತ್ತಿರ ಗೇಜ್ ಎಷ್ಟು, ಬಿಳಿಗುಂಡ್ಲು ಗೇಜ್ ಎಷ್ಟು ಎನ್ನುವ ಅಂಕಿಅಂಶಗಳನ್ನು ಸದನದಲ್ಲಿ ಕೊಟ್ಟಿದ್ದೇನೆ. ಅದು ಬಹಳ ಪ್ರಾಮುಖ್ಯವಾದ ವಿಚಾರವೆಂದು ನಾನು ಅಂದುಕೊಂಡಿದ್ದೇನೆ. ಆದ್ದರಿಂದ ಈಗಾಗಲೇ ಸುಪ್ರೀಂ ಕೋರ್ಟಿಗೆ ಕೊಟ್ಟಿದ್ದೇವೆ, ಟ್ರಿಬ್ಯುನಲ್‌ಗೂ ಕೊಟ್ಟಿದ್ದೇವೆ. ಇದರಲ್ಲಿ ಮುಚ್ಚುಮರೆ ಏನೂ ಇಲ್ಲ. ಬಿಳಿಗುಂಡ್ಲು ಹತ್ತಿರ ಸೆಂಟ್ರಲ್ ವಾಟರ್ ಕಮೀಷನ್‌ನವರು ಇದ್ದಾರೆ....

ಶ್ರೀ ಹೆಚ್. ಎನ್. ನಂಜೇಗೌಡ : ಎಕ್ಸಸ್ ಆಗಿ ಹೋಗಿದೆ.

ಶ್ರೀ ಕೆ.ಎನ್. ನಾಗೇಗೌಡ : ಎಕ್ಸಸ್, ಅಥವಾ ಬಿಟ್ಟಿರತಕ್ಕಂಥ ವಿಚಾರ ಅಲ್ಲ. ಟ್ರಿಬ್ಯುನಲ್ ಆರ್ಡರ್ ಇರತಕ್ಕಂಥಾದ್ದು-

`we have to ensure 205 TMCft. at Mettur' That is the order of the Tribunal. ಆ ಪ್ರಕಾರ ನಾವು ಎನ್‌ಶ್ಯೂರ್ ಮಾಡಿದ್ದೇವೆ. ಇದರಿಂದ ಒಂದು ಮೇಜರ್ ವಿಚಾರವಾದ ಮೇಲೆ ಇನ್ನು ಉಳಿದಿರತಕ್ಕಂಥ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಇಲ್ಲಿ ಕೊಟ್ಟಂಥ ಅಂಕಿಅಂಶಗಳನ್ನು ನೋಡಿದರೆ ಇಂಟರೀಮ್ ಆರ್ಡರ್ 205 ಟಿ.ಎಂ.ಸಿ. ಕೊಡಬೇಕು ಎಂದು ಏನಿದೆ ಅದಕ್ಕಿಂತಲೂ ಜಾಸ್ತಿ ಹೋಗಿದೆ ಎಂದಾಯಿತು. ಅಂದಮೇಲೆ ಏನೂ ತಾಪತ್ರಯ ಇಲ್ಲ, ಕಷ್ಟ ಇಲ್ಲ. ನೀವು ಹೋಗಿ ಒಪ್ಪಿಕೊಂಡು ಬನ್ನಿ.

ಶ್ರೀ ಕೆ.ಎನ್. ನಾಗೇಗೌಡ : ಕಷ್ಟ ಇಲ್ಲ ಅಂತ ಅಲ್ಲ. ಉದಾಹರಣೆಗೆ ಹೇಳುವುದಾದರೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಂಕಿಅಂಶಗಳನ್ನು ತಾವು ಕೊಟ್ಟಿದ್ದೀರಿ. ಬೇಕಾದರೂ ನಾನೂ ಕೊಡುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ : ಇದರಲ್ಲಿ ಮುಚ್ಚುಮರೆ ಏನೂ ಇಲ್ಲ. ಅಷ್ಟು ನಾವು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ನಮ್ಮ ಏರಿಯಾ ಪ್ರಾಜೆಕ್ಟ್‌ಗಳಿಗೆ ನೀರು ಕೊಡಬೇಕಾಗಿದೆ. ಇದನ್ನು ಒಪ್ಪಿಕೊಳ್ಳಬೇಕಾಯುದು ಇಲ್ಲ. ಆದರೆ ಹೋಗಿರತಕ್ಕಂಥ ನೀರು, ನಾನು ಹೇಳುತ್ತಾ ಇರತಕ್ಕಂಥಾದ್ದು....

ಶ್ರೀ ಹೆಚ್. ಎನ್. ನಂಜೇಗೌಡ : ಏನಾಗಿದೆ ಎಂದರೆ ನಾವು ಇನ್ನೂ ಡೆವಲಪ್ ಆಗಿಲ್ಲ, ನಾವು ನೀರನ್ನು ಉಪಯೋಗಿಸಿಕೊಳ್ಳುತ್ತಾ ಇಲ್ಲ. ಹೇಮಾವತಿಯಲ್ಲಿ 20 ಪರ್ಸೆಂಟ್ ಕೂಡ ಇಲ್ಲ. ಹಾರಂಗಿಯಲ್ಲಿ ಅರ್ಧಕೂಡ ಉಪಯೋಗಿಸುತ್ತಾ ಇಲ್ಲ. ಕಬಿನಿ ಪೂರ್ತಿ ಡೆವಲಪ್ ಆಗಿಲ್ಲ. ಮೀಡಿಯಂ ಇರಿಗೇಷನ್ ಸಹ ಅಲ್ಲಿ ಡೆವಲಪ್ ಆಗಿಲ್ಲ. ಎಲ್ಲಾ ರೆಡಿ ಮಾಡಿಕೊಂಡಿದ್ದೇವೆ. ಅಚ್ಚುಕಟ್ಟು ಡೆವಲಪ್ ಆಗಿಲ್ಲ. ಡೆವಲಪ್ ಆಗಿದ್ದರೆ ನಮ್ಮ ನೀರನ್ನು ನಾವು ಉಪಯೋಗಿಸಿಕೊಳ್ಳಬಹುದು.

ಶ್ರೀ ಕೆ.ಎನ್. ನಾಗೇಗೌಡ : ಅದಕ್ಕೇ ನಾನು 'ಎನ್‌ಶ್ಯೂರ್' ಅಂತ ಪದ ಹೇಳಿದೆ. ನಮ್ಮದು ಏನು ಅಚ್ಚುಕಟ್ಟು ಇದೆ ಅಂತ ಅವರು ಹೇಳಿದರು ಅಥವಾ ನಮ್ಮ ವರುಣಾದಲ್ಲಾಗಲೀ, ನಮ್ಮ ಹೆಚ್.ಸಿ. ಪ್ರಾಜಕ್ಟ್ ಆಗಲಿ, ಹೇಮಾವತಿ ಪ್ರಾಜೆಕ್ಟ್‌ಗಳು ಆಗಲಿ ಅವು ಆಗಿಲ್ಲ. ಅಲ್ಲಿರತಕ್ಕಂಥ ಇತರ ಎಲ್ಲಾ ಪ್ರಾಜೆಕ್ಟ್‌ಗಳಲ್ಲಿ ಕಮ್ಯಾಂಡ್ ಏರಿಯಾ ಕ್ರಿಯೇಟ್ ಆಗಿಲ್ಲ. ನಾವು ಇನ್ನೂ ಉಪಯೋಗಿಸಿಕೊಂಡಿಲ್ಲ. ಎಷ್ಟೆಷ್ಟು ಅಲ್ಲಿಗೆ ಎನ್‌ಶ್ಯೂರ್ ಆಗಿದೆ ಎನ್ನತಕ್ಕಂಥ ಫ್ಯಾಕ್ಟ್ಸ್‌ನ್ನು ನಾನು ಹೇಳಿದ್ದೇನೆ. ಇದರಲ್ಲಿ ಮುಚ್ಚುಮರೆ ಇಲ್ಲ ಎನ್ನುವದೃಷ್ಟಿಯಿಂದ ನಾನು ಪ್ರಸ್ತಾಪ ಮಾಡಿದ್ದೇನೆ. ಮತ್ತೆ ಈ ನ್ಯಾಶನಲ್ ವಾಟರ್ ಪಾಲಿಸಿ ಬಗ್ಗೆ ಸಹ ಎಲ್ಲಾ ವಿಚಾರಗಳನ್ನು ನಾನು ಹೇಳಿದ್ದೇನೆ. ಇವತ್ತು ಮಾನ್ಯ ಯಡಿಯೂರಪ್ಪನವರು

ಒಂದು ಪ್ರಾಮುಖ್ಯವಾದ ವಿಚಾರ ಹೇಳಿ 71-74ರಲ್ಲಿ ಈ ಸುಪ್ರೀಂ ಕೋರ್ಟ್ ಅಂತರ್ ರಾಜ್ಯ ವಿಚಾರದಲ್ಲಿ ಕೋರ್ಟಿಗೆ ಅಧಿಕಾರ ಇಲ್ಲ ಅಂತ ಹೇಳಿದರು. ನಾನು ಇದುವರೆಗೆ ಇರುವ ನಮ್ಮ ಎಲ್ಲಾ ರೆಕಾರ್ಡ್ಸ್ ಹುಡುಕಿಸಿದೆ. ನಿಮ್ಮ ಹತ್ತಿರ ಇದ್ದರೆ ಕಳಿಹಿಸಿಕೊಡಿ. ಯವುದೋ 1971ರಲ್ಲಿ ಒಂದು ತಮಿಳುನಾಡು ಫಾರ್ಮರ್ಸ್ ಕೇಸ್ ಹಾಕಿದ್ದಾಗ, ಇಂದಿರಾಗಾಂಧಿಯವರು ಮಧ್ಯೆ ಇಂಟರ್‌ವೀನ್ ಆಗಿ ಆ ಅಪ್ಲಿಕೇಷನ್‌ನ್ನು ಕೋರ್ಟಿನಿಂದ ವಾಪಾಸ್ಸು ಕಳಿಸಿದರು ಎನ್ನತಕ್ಕಂಥ ಒಂದು ದಾಖಲೆಯನ್ನು ಬಿಟ್ಟರೆ ಇನ್ನು ಯಾವುದೇ ಬೇರೆ ದಾಖಲೆ ಗೊತ್ತಿಲ್ಲ. 71-74ರಂದು ಏನಿದೆ ಅದನ್ನು ತಾವು ತರಿಸಿಕೊಡಬೇಕು. ಈ ಅಥಾರಿಟಿ ಬಗ್ಗೆ, ಡ್ರಾಫ್ಟ್ ಸ್ಕೀಮ್ಸ್ ಬಗ್ಗೆ, ಮೆರಿಟ್-ಡಿಮೆರಿಟ್ಸ್ ಬಗ್ಗೆ ಈಗ ನಾನು ಹೋಗುವುದಿಲ್ಲ. ಸರ್ವಪಕ್ಷಗಳ ಸಭೆಯಲ್ಲಿ ನಾವು ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ತೀರ್ಮಾನ ತೆಗೆದುಕೊಂಡು ಇದು ಅಕ್ಸೆಪ್ಟೆಬಲ್ ಅಲ್ಲ ಅಂತ ಕಾರಣಗಳನ್ನು ಕೊಟ್ಟಿದ್ದೇವೆ. ಒಂದು ಕಾರಣ, ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್ ಆಗಬೇಕು. ಅದು ಆಗದೇ ಇದ್ದರೆ ಇಂಟರ್ ಸ್ಟೇಟ್ ವಾಟರ್ ಡಿಸ್‌ಪ್ಯೂಟ್ ಒಳಗಡೆ ಸೊಲ್ಯೂಶನ್ ದೊರೆಯುವುದಿಲ್ಲ ಎನ್ನತಕ್ಕಂಥಾದ್ದು ಒಂದು. ಎರಡನೆಯದು - modification application is still pending before the Tribunal. ಆ ಮಾಡಿಫಿಕೇಷನ್‌ಗೆ ಎರಡೂ ರಾಜ್ಯಗಳ ವಾದಗಳು ಮುಗಿದಿದೆ. ಅಲ್ಲಿಂದ ಮಾಡಿಫಿಕೇಷನ್‌ಗೆ ಆರ್ಡರ್ ಬರಬೇಕಾಗಿದ್ದರಿಂದ ಇವತ್ತಿನ ದಿವಸ ಅದು ನೀಡ್ ಇಲ್ಲ ಎನ್ನತಕ್ಕದ್ದು ಮತ್ತು ಈ ಎಲ್ಲಾ ಅಂಕಿಅಂಶಗಳನ್ನು ನೋಡಿದರೆ ಯಾವುದೇ ತೊಂದರೆ ತಮಿಳುನಾಡಿಗೆ ಇಲ್ಲ. ಅವರು ವಿನಾಕಾರಣ ತೊಂದರೆ ಇದೆಯೆಂದು ಹೇಳಿದರೆ ಅದನ್ನು ಯಾರು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಈ ಪರಿಸ್ಥಿತಿಯಲ್ಲಿ ಒಂದು ಫೈನಲ್ ಅವಾರ್ಡ್ ಇಲ್ಲ. ಇನ್ನೊಂದು - Modification application is pending before the Tribunal. ಮೂರನೆಯದು National water policy guidelines ಇಲ್ಲ. ಆದ್ದರಿಂದ ಇಂತಹ ಒಂದು ಸಂದರ್ಭದಲ್ಲಿ ಎಂಟೈರ್ ಸ್ಕೀಮ್ ನಮಗೆ ಅಕ್ಸೆಪ್ಟಬಲ್ ಅಲ್ಲ ಎನ್ನತಕ್ಕಂಥಾದ್ದನ್ನು ಕೊಟ್ಟಿದ್ದೇವೆ. ಪ್ರಧಾನಮಂತ್ರಿಗಳು ಕೂಡ ಸಭೆಯೊಳಗೆ ನನಗೆ ಸ್ವಲ್ಪ ಕಾಲಾವಕಾಶ ಕೊಡಿ - give me time I will talk to the concerned states, ಎಂದು ಹೇಳಿದ್ದಾರೆ. ಮತ್ತೊಂದು ಹೇಳುವುದಾದರೆ 30ನೇ ತಾರೀಖು ಪಾರ್ಲಿಮೆಂಟ್ ಮತ್ತು ರಾಜ್ಯಸಭೆಯಲ್ಲಿ ಸಹಿತ ಪ್ರಶ್ನೆಗೆ ಉತ್ತರ ಕೊಡುತ್ತ ಅಲ್ಲಿ ಸಂಬಂಧಪಟ್ಟಂಥ ಸಚಿವರು ಒಂದು ಮಾತನ್ನು ಹೇಳಿದ್ದಾರೆ. ಈ ರಾಜ್ಯಗಳಿಗೆ ಸಂಬಂಧಪಟ್ಟಂತೆ ತಾವು ಹೇಳಿದ್ದುದು ಮೂರು ಅಂತ. ಈ ರಾಜ್ಯಗಳಿಗೆ ಇರತಕ್ಕಂಥ ಡಿಫರೆನ್ಸ್‌ನ್ನು ನ್ಯಾರೋಡೌನ್ ಮಾಡುವುದಕ್ಕೆ ಸಂಬಂಧಪಟ್ಟ ರಾಜ್ಯಗಳನ್ನು ಕರೆಯುತ್ತೇನೆ ಎಂದು ಹೇಳಿದ್ದಾರೆ. ಎರಡನೆಯ ವಿಚಾರ ಏನು ಹೇಳಿದ್ದಾರೆ ಎಂದರೆ, ಇದು ಒಂದು ಕನ್ಸಲ್ಟೇಷನ್ ಆದಮೇಲೆ ಕ್ಯಾಬಿನೆಟ್‌ಗೆ ಬರುತ್ತದೆ, ನಂತರ ಪಾರ್ಲಿಮೆಂಟ್‌ನಲ್ಲಿ ಇಡುತ್ತೇವೆ. ನಂತರ ಕಮ್ಯುನಿಕೇಟ್ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಪ್ರಶ್ನೆ ಕೇಳಿದಂಥ ತಮಿಳುನಾಡು ಸ್ನೇಹಿತರಿಗೆ ತಿಳಿಸಿದ್ದಾರೆ, ಕರ್ನಾಟಕದವರಿಗೂ ಹೇಳಿದ್ದಾರೆ. ಅಂದರೆ ಕೇಂದ್ರಸರ್ಕಾರ ಇನ್ನೂ ಸಹ ಮಾತುಕತೆಗೆ ನಮ್ಮನ್ನು ಕರೆಯುತ್ತಾರೆ ಎಂದು ಹೇಳಿರತಕ್ಕಂಥ ಸಂದರ್ಭದಲ್ಲಿ ಬಹುಶಃ ನಾಳೆ ಕೋರ್ಟಿಗೆ ಸಹ ನಾವು ಏನು ಹೇಳಬೇಕು ಎನ್ನತಕ್ಕಂಥ ವಿಚಾರದಲ್ಲಿ ಏನು ಆಲ್‌ಪಾರ್ಟಿ ಡಿಸಿಶನ್ ತೆಗೆದುಕೊಂಡಿದ್ದೀರಿ, ಅದರ ಆಧಾರದಮೇಲೆ ನಮ್ಮ

ಲಾಯರ್‌ಗಳಿಗೆ ಹಾಗೆಯೇ ಕೋರ್ಟಿಗೆ ತಿಳಿಸಬೇಕೆಂದು ಹೇಳಿದ್ದೇವೆ. ಆದ್ದರಿಂದ ಕೇಂದ್ರ ಸರ್ಕಾರದವರು ಇನ್ನೂ ಸಹ ಸಂಬಂಧಪಟ್ಟಂಥ ರಾಜ್ಯಗಳನ್ನು ಕರೆಸಿ ಮಾತುಕತೆ ನಡೆಸಿ, ನಂತರ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿರತಕ್ಕಂಥ ಸಂದರ್ಭದಲ್ಲಿ ನಾವು ಬಹುಶಃ ನಮ್ಮದೇ ಆದಂಥ ಪ್ರೊಟೆಸ್ಟ್‌ನ್ನು ಮಾಡಿದ್ದೇವೆ. ಡ್ರಾಫ್ಟ್ ಮಾರ್ಪಾಡಿನಲ್ಲಿ ಎರಡನೇ ಮಾತು ಇಲ್ಲ. 1924ರ ಅಗ್ರಿಮೆಂಟ್ ಅಲ್ ಮೋಸ್ಟ್ ಎಂದು ಹೇಳಿದರು. ನಂಜೇಗೌಡರು ಚೆನ್ನಾಗಿ ಹೇಳಿದರು 24ರಲ್ಲಿ ಅಲ್ಲ. 24ಕ್ಕಿಂತ ಅತ್ಯಂತ ಕೆಟ್ಟದಾಗಿರುವ ಡ್ರಾಫ್ಟ್ ಈ ವಿಚಾರದಲ್ಲಿ ಇದೆ. ಆದ್ದರಿಂದ ಎರಡನೇ ಮಾತು ಇಲ್ಲ. ಇದರ ಬಗ್ಗೆ ತೀವ್ರವಾದ ಪ್ರತಿಭಟನೆ ಇದೆ. ನಮ್ಮ ರಾಜ್ಯಸರ್ಕಾರಕ್ಕೆ ಇದು ಅಕ್ಸೆಪ್ಟಬಲ್ ಅಲ್ಲ ಎನ್ನುವುದನ್ನು ಹೇಳಿದ್ದೀರಿ. ಈಗ ಅವರು ನಮ್ಮನ್ನು ಕರೆಯುತ್ತೇವೆ ಎಂದು ಹೇಳಿದ್ದಾರೆ. ಸಂಸತ್ತಿನ ಎರಡೂ ಸದನಗಳಲ್ಲಿ ಸಂಬಂಧಪಟ್ಟಂಥ ಮಂತ್ರಿಗಳು ಹೇಳಿದ್ದು, ಅದು ಲಿಖಿತ ಹೇಳಿಕೆಯಾಗಿದ್ದು, ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಆದ್ದರಿಂದ ನಾಳೆ ಐದನೇ ತಾರೀಖು ಏನು ಕೇಸ್ ಇದೆ, ಸುಪ್ರೀಂ ಕೋರ್ಟ್ ಮುಂದೆ ಆಲ್ ಪಾರ್ಟಿ ಡಿಸಿಶನ್ ಅನ್ನು ಬೇಸ್ ಮಾಡಿ...

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ, ಇದರಲ್ಲಿ ಬಹಳ ಚರ್ಚೆ ಮಾಡುವ ಅಗತ್ಯ ಇಲ್ಲ. ಹತ್ತು ನಿಮಿಷ ಅಷ್ಟೇ ನಾವು ಪ್ರಸ್ತಾಪ ಮಾಡಿರುವುದು. ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಒಂದು ಡೆಲಿಗೇಷನ್‌ನ್ನು ತೆಗೆದುಕೊಂಡು ಹೋಗಿದ್ದರು. ಆಗ ಪ್ರಧಾನಿಯವರನ್ನು ಭೇಟಿ ಮಾಡಿದ್ದೆವು. ನಮ್ಮ ಮೊದಲನೇ ಬೇಡಿಕೆ ಏನು? ಇದು ಬಹಳ ಸೂಕ್ಷ್ಮವಾಗಿ ಹೇಳಿದಂಥಾದ್ದು. ಟ್ರಿಬ್ಯುನಲ್ ಮುಂದೆ ಮಾಡಿಫಿಕೇಷನ್ ಆರ್ಡರ್‌ಗೆ ನಾವು ಕೇಳಿದ್ದೇವೆ, ನಿಮ್ಮ ಇಂಟರೀಮ್ ಆರ್ಡರ್ ನಮಗೆ ಒಪ್ಪಿಗೆ ಇಲ್ಲ ಅಂತ ಹೇಳಿದೆವು. ಅದರ ಬಗ್ಗೆ ಇನ್ನೂ ತೀರ್ಮಾನ ಕೊಟ್ಟಿಲ್ಲ. ಅಲ್ಲಿಯವರೆಗೆ ನಿಮ್ಮ ಸಾಲಿಸಿಟರ್ ಜನರಲ್ ಮೂಲಕ ಒಂದು ಅರ್ಜಿಯನ್ನು ಹಾಕಿಸಿ, ಈ ಒಂದು ಪ್ರಾಧಿಕಾರ ರಚನೆ ಮಾಡುವುದನ್ನು ತಡೆಹಿಡಿಯಿರಿ. ಮೊದಲು ಆ ಕೆಲಸವನ್ನು ಮಾಡಿ. ಅದಕ್ಕೆ ಅವರು ಏನು ಹೇಳಿದರು? ಆ ಬಗ್ಗೆ ತಮಿಳುನಾಡಿನ ಮುಖ್ಯ ಮಂತ್ರಿಗಳು ನಿಮ್ಮನ್ನೆಲ್ಲ ಕರೆದು ಮಾತನಾಡುತ್ತಾರೆ ಎಂದು ಹೇಳಿದರು. ಇವತ್ತಿನವರೆಗೆ ಅದು ಆಗಿಲ್ಲ. 5ನೇ ತಾರೀಖು ಸುಪ್ರೀಂ ಕೋರ್ಟ ಆರ್ಡರ್ ಪಾಸ್ ಮಾಡಿದ್ದು, ಅದರಂತೆ ಮುಂದುವರೆಯಿರಿ ಅಂತ ನೀವು ಹೇಳಿದ್ದೀರಿ. ನೀವು ಆಮೇಲೆ ಏನು ಮಾಡುತ್ತೀರಿ? ಇಷ್ಟು ಸಾರಿ ನೀವು ಹೋಗಿಬಂದಿದ್ದೀರಿ, ಇದುವರೆಗೂ ಏನಾದರೂ ಪ್ರಧಾನಮಂತ್ರಿಗಳನ್ನು ಮತ್ತೆ ಒತ್ತಾಯ ಮಾಡಿದ್ದೀರೋ? ನಾವು ಭೇಟಿಮಾಡಿ ಬಂದಮೇಲೆ? ತಮಿಳುನಾಡು ಮುಖ್ಯಮಂತ್ರಿಗಳ ಜೊತೆ ಮಾತನಾಡಿ, ಸಾಲಿಸಿಟರ್ ಜನರಲ್ ಮೂಲಕ ಒಂದು ಡೈರೆಕ್ಷನ್ಸ್ ಕೊಟ್ಟು, 5ನೇ ತಾರೀಖು ಸುಪ್ರೀಂ ಕೋರ್ಟ್ ಮುಂದೆ ಅವರೇನಾದರೂ ಅಪ್ಲಿಕೇಷನ್ ಹಾಕುವುದಾದರೆ, ಪ್ರಾಧಿಕಾರ ಬೇಡ, ಈ ತರಹ ನಾವು ಕಾಯುತ್ತಿದ್ದೇವೆ, ಟ್ರಿಬ್ಯುನಲ್ ಇಂಟರೀಮ್ ಆರ್ಡರ್ ಬಗ್ಗೆ ಕರ್ನಾಟಕದವರು ಪ್ರಶ್ನೆ ಮಾಡಿದ್ದಾರೆ, ಅದು ತೀರ್ಮಾನ ಆಗುವವರೆಗೂ ಇದನ್ನು ತಡೆಹಿಡಿಯಿರಿ ಎಂದು ಅವರೇನಾದರೂ ಅರ್ಜಿ ಹಾಕಿದ್ದರೆ, ಪ್ರಧಾನಿಯವರು ಪ್ರಸ್ತಾಪ ಮಾಡಿ, ಅದರ ಮೂಲಕ ಇದಕ್ಕೊಂದು ಪರಿಹಾರ ಸಿಗುತ್ತದೆ, ತಾತ್ಕಾಲಿಕವಾಗಿ ನಾವು ಸಮಾಧಾನದಿಂದ ಕುಳಿತುಕೊಳ್ಳಬಹುದು. ಇದು ಮೊದಲನೆಯದು. ಇದನ್ನು ಮಾಡುವುದರಲ್ಲಿ ನೀವು ವಿಫಲರಾಗುತ್ತಿದ್ದೀರಿ. ಎರಡನೆಯದು, ಸುಪ್ರೀಂ ಕೋರ್ಟ್ ಮುಂದೆ

ಸಾಲಿಸಿಟರ್ ಜನರಲ್ ಈ ರೀತಿ ಪ್ರಾಧಿಕಾರ ರಚನೆ ಮಾಡುವಂಥ ಪ್ರಸ್ತಾಪ ಬಂದಾಗ, 1.1.96ರಲ್ಲಿ ಪ್ರಧಾನಿಯವರು ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್ ಬಗ್ಗೆ, ನಮಗೆ ಪತ್ರ ಬರೆದಿದ್ದರು, ಅದನ್ನೇ ಒಂದು ಅಫಿಡವಿಟ್‌ನ್ನಾಗಿ ಮಾಡಿ ಇದರ ಜೊತೆಯಲ್ಲಿ ಎನ್‌ಕ್ಲೋಸ್ ಮಾಡಿಬಿಟ್ಟು, ಇದು ಸಾಧ್ಯವಿಲ್ಲ ಅಂತ ಹೇಳಿ ಅಬ್ಜೆಕ್ಷನ್ ಮಾಡಬೇಕಾಗಿತ್ತು. ನಮ್ಮ ಕೌನ್ಸಿಲ್ ಅದನ್ನು ಮಾಡಲಿಲ್ಲ. ಆವಾಗಲೂ ರಾಜ್ಯ ಸರ್ಕಾರದವರು ಅವರಿಗೆ ಸರಿಯಾಗಿ ಗೈಡ್ ಮಾಡಲಿಲ್ಲ. ಖುಷಿ ಬಂದಹಾಗೆ ಅವರು ಅಬ್ಜೆಕ್ಷನ್ ಮಾಡಿದರು. ನಿಮ್ಮ ತಪ್ಪಿನಿಂದಾಗಿ ಇವತ್ತು ನಮ್ಮ ತಲೆಮೇಲೆ ಪ್ರಾಧಿಕಾರವನ್ನು ಹೇರುವಂಥ ಪ್ರಯತ್ನವಾಗಿದೆ. ಇವೆರಡರ ಬಗ್ಗೆ ನೀವು ಏನು ಮಾಡಿದ್ದೀರಿ ಎನ್ನುವುದನ್ನು ಹೇಳಿ. ಇನ್ನು ಉಳಿದಂತೆ ಯಾವುದೇ ಪ್ರಶ್ನೆ, ಯಾವುದೇ ಉತ್ತರ ಸಂದರ್ಭೋಚಿತವಾಗುವುದಿಲ್ಲ ಮತ್ತು ಅದು ಸದನವನ್ನು ಅಡ್ಡದಾರಿಗೆ ಹಿಡಿಯುವಂಥ ಬರೀ ಹಾರಿಕೆ ಉತ್ತರವಾಗುತ್ತದೆ. ಮಾನ್ಯ ನೀರಾವರಿ ಸಚಿವರು ನೇರವಾಗಿ ಇವರೆಡಕ್ಕೂ ಉತ್ತರ ಕೊಡಲಿ.

ಶ್ರೀ ಕೆ. ಎನ್. ನಾಗೇಗೌಡ : ಸ್ವಾಮಿ, ಹಾರಿಕೆ ಉತ್ತರ ಕೊಡತಕ್ಕಂಥ ಉದ್ದೇಶ ಇಲ್ಲ, ಅದರ ಅವಶ್ಯಕತೆಯೂ ಇಲ್ಲ. ನಿಮಗೂ ನಮಗೂ ಎಲ್ಲರಿಗೂ ರಾಜ್ಯದ ಹಿತದ ಬಗ್ಗೆ ಇಚ್ಛೆ ಇದೆ. ರಾಜ್ಯದ ಹಿತವನ್ನು ಕಾಪಾಡದೇ ಹೋದರೆ ನೀವು ನಾವು ಸಹ ಅತ್ಯಂತ ದುಸ್ಥಿತಿಗೆ ಬರುತ್ತೇವೆ. ಮಾನ್ಯ ವಿರೋಧ ಪಕ್ಷದ ನಾಯಕರು, ನಾಗೇಗೌಡರು ಬದಲಾವಣೆಯಾಗಿದ್ದಾರೆ, ಅವರು ಆ ಕ್ಷೇತ್ರದಿಂದ ಬಂದಿರುವವರು, ಅವರು ನೇರವಾಗಿ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕೆಂದು ಹೇಳಿದರು. ಬಹುಶಃ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ನಾನು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ, ನೀವು ಯಾರೂ ಸಹ ಈ ವಿಚಾರವನ್ನು ಪ್ರಸ್ತಾಪ ಮಾಡದೇ ಇದ್ದಾಗ, ಪ್ರತಿಭಟನೆ ಮಾಡಿದ್ದೇ ನಾವು ಎಂಬುದನ್ನು ತಾವು ಯಾರೂ ಮರೆಯಬಾರದು. ನೀವು ಮಾಡಲಿಲ್ಲ ಅಂತ ನಾನು ಹೇಳಲಿಲ್ಲ. ಆದರೆ ಯಾವುದೇ ವಿಚಾರದಲ್ಲಿ ಆಗಲಿ, ಕಾವೇರಿ ವಿಚಾರ ಇರಲಿ, ಕೃಷ್ಣಾ ವಿಚಾರ ಆಗಲಿ, ನೀವಾಗಲಿ, ನಾವಾಗಲಿ, ಯಾರೂ ಸಹ ಅದರಲ್ಲಿ ಹಿಂದೆಬೀಳುವುದಕ್ಕೆ ಇಷ್ಟಪಡುವುದಿಲ್ಲ. ಯಾವುದೇ ರಾಜಕಾರಣಿ ಇಷ್ಟಪಡುವುದಿಲ್ಲ. ಯಾವುದೇ ಸರ್ಕಾರ ಇಷ್ಟಪಡುವುದಿಲ್ಲ; ಯಾವುದೇ ರಾಜಕೀಯ ಪಕ್ಷ ಕೂಡ ಇಷ್ಟಪಡುವುದಿಲ್ಲ. ಎಲ್ಲರೂ ಕೂಡ ರಾಜ್ಯದ ಹಿತವನ್ನು ಕಾಪಾಡುವುದಕ್ಕೆ ಪ್ರಯತ್ನ ಮಾಡತಕ್ಕಂಥಾದ್ದು. ಆದ್ದರಿಂದ, ಇವತ್ತು ಮಾನ್ಯ ಯಡಿಯೂರಪ್ಪನವರ ಹೇಳಿದಂಥ ಮೂಲಭೂತ ವಿಚಾರಕ್ಕೆ ನಾನು ಆಗಲೇ ಹೇಳಿದೆ. ಸಂಬಂಧಪಟ್ಟಂಥ ಸಚಿವರು ರಾಜ್ಯಸಭೆಯಲ್ಲಿ, ಲೋಕಸಭೆಯಲ್ಲಿ ಈಗಾಗಲೇ ತಿಳಿಸಿದ್ದಾರೆ. ಬಹುಶಃ ಅದು ಎಲ್ಲ ಪತ್ರಿಕೆಗಳಲ್ಲಿಯೂ ಬಂದಿದೆ. ಆದರೆ, ಕೇಂದ್ರಸರ್ಕಾರದವರು ಏನು ಹೇಳುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ನಮ್ಮ ಎರಡು ರಾಜ್ಯಗಳ ಜೊತೆ ಕುಳಿತು ಮಾತನಾಡಿ ಡಿಫೆರನ್ಸ್ ಏನಿದೆ, ಅದರ ಬಗ್ಗೆ ನಾವು ಒಂದು ತೀರ್ಮಾನಕ್ಕೆ ಬರುತ್ತೇವೆ ಎಂದು ಕೇಂದ್ರಸರ್ಕಾರ ಹೇಳಿರುವುದನ್ನೇ ನಾರಿಮನ್ ಅವರು ಹೇಳಬಹುದು ಎಂದು ನಾನು ಅಂದುಕೊಂಡಿದ್ದೇನೆ. ನೀವು ಏನು ಸರ್ವಪಕ್ಷಗಳ ನಿಯೋಗ ಎಂದು ಅಂದುಕೊಂಡಿದ್ದೀರೋ ಅದರ ಬಗ್ಗೆ ನಾವು 5ನೇ ತಾರೀಖಿಗೆ ಪ್ರಧಾನಮಂತ್ರಿಗಳಿಗೆ ಹೇಳಿದ್ದೇವೆ. ಅಂದರೆ ನ್ಯಾಷನಲ್ ವಾಟರ್ ಪಾಲಿಸಿಯಾಗಲೀ, ಅಥವಾ ಮಾಡಿಫಿಕೇಷನ್ ಅಪ್ಲಿಕೇಷನ್ ಆಗಲೀ ಇವೆಲ್ಲವನ್ನು ನಮ್ಮ ವಕೀಲರು 5ನೇ ತಾರೀಖಿನ ದಿವಸ

ಹೇಳಲಿದ್ದಾರೆ. ಕೇಂದ್ರ ಸರ್ಕಾರದವರು ನಮ್ಮನ್ನು ಕೇಳದನೆ ಮಾಡುವುದಿಲ್ಲ ಎನ್ನತಕ್ಕಂಥ ನಂಬಿಕೆ ನಮಗೆ ಇರುವುದರಿಂದ, ಕೇಂದ್ರ ಸರ್ಕಾರದ ಮೇಲೆ ಇಷ್ಟು ತಾವು ವಿಶ್ವಾಸ ಇಟ್ಟುಕೊಳ್ಳಬೇಕು. ಕರಡು ಪ್ರತಿಯನ್ನು ಈಗಾಗಲೇ ಒಟ್ಟಾರೆಯಾಗಿ ತಿರಸ್ಕಾರ ಮಾಡಿದ್ದೇವೆ, ಅದನ್ನು ನಾವು ಒಪ್ಪಿಕೊಳ್ಳುವುದಿಲ್ಲವೆಂದು ಹೇಳಿದ್ದೇವೆ. ನಮ್ಮರಾಜ್ಯಸರ್ಕಾರದ ನಿಲುವನ್ನು ತಿಳಿಸಿದ್ದೇವೆ, ಮಾನ್ಯ ನಾರೀಮನ್‌ರವರ ಹತ್ತಿರ ನಾವು ಮಾತನಾಡಿದ್ದೇವೆ. ನಾರಿಮನ್‌ರವರು ಶನಿವಾರ ಹಾಗೂ ಭಾನುವಾರ ಇಲ್ಲಿಗೆ ಬಂದಿದ್ದಾಗ ನಮ್ಮ ಅಧಿಕಾರಿಗಳು ಹೋಗಿ ಅವರ ಹತ್ತಿರ ಮಾತನಾಡಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ನಾರಿಮನ್ ಹತ್ತಿರ ಮಾತನಾಡಿದ್ದೇವೆ ಎನ್ನುವ ಮಾತನ್ನು ನೀವು ಪದೇ ಪದೇ ಹೇಳಬೇಡಿ. ಏಕೆಂದರೆ, ನಾರೀಮನ್‌ರವರು ಯಾವ ರೀತಿಯಾಗಿ ಒಪಿನಿಯನ್ ಕೊಡಬೇಕಾಗಿದ್ದರೋ ಆ ರೀತಿ ಕೊಡುತ್ತಿದ್ದರೆ ಹೊರತಾಗಿ, ನೀವು ಅಲ್ಲಿ ಕಾಂಟ್ರರಿ ಒಪಿನಿಯನ್ ಕೊಡುವುದಕ್ಕೆ ಆಗುವುದಿಲ್ಲ. ನಿಮ್ಮ ಮಾನ್ಯ ಅನಿಲ್ ಧಿವನ್ ಏಕೆ ಈ ರೀತಿ ಅರ್ಟಾನಿ ಜನರಲ್ ಸಜೇಷನ್ ಕೊಡುತ್ತಿದ್ದೇನೋ ನೀವು ಏಕೆ ಒಪ್ಪಿಕೊಂಡಿದ್ದೀರಿ, ಎಂದು ಕೇಳುವುದಕ್ಕೆ ಆಗುತ್ತದೆಯೇ? ಅಥವಾ ಅಟಾರ್ನಿ ಜನರಲ್ ಏನು ಒಂದು ಸ್ಕೀಮ್ 6(ಎ) ಕೆಳಗೆ ತಯಾರು ಮಾಡಿದ್ದ, ಅದಕ್ಕೆ ನೀವು ಏಕೆ ಒಪ್ಪಿಕೊಳ್ಳಲಿಲ್ಲ ಎಂದು ಕೇಳುವುದಕ್ಕೆ ಆಗುತ್ತದೆಯೇ? ನಾವು ಸರ್ಕಾರಕ್ಕೆ ಕೇಳಬೇಕಾಗುತ್ತದೆ, ನಿಮ್ಮ ಪಾಲಿಸಿ ಏನು ಇತ್ತು ನಿಮ್ಮ ಪ್ರೋಗ್ರಾಂ ಏನು ಇತ್ತು, ನೀವು ಯಾವ ಒಂದು ನಿಲುವನ್ನು ತಾಳಿದ್ದೀರಿ, ಆ ನಿಮ್ಮ ನಿಲುವನ್ನು ಅವರು ತೆಗೆದುಕೊಳ್ಳುತ್ತಾರೆ. ಅದನ್ನು ಬಿಟ್ಟು ಸುಮ್ಮನೇ ಅಲ್ಲಿಗೆ ನೀವು ಬಂದಿದ್ದಾರೆ. ನೀವು ಎಲ್ಲಾ ನೋಡಿದಿರಿ, ಎಂದು ಹೇಳುವುದು ಸರಿಯಲ್ಲ ನೀವು ತಪ್ಪು ಮಾಡಿ ನಾವೆಲ್ಲರೂ ಹೊಣೆಗಾರರು ಎಂದು ಹೇಳತಕ್ಕದ್ದು ಸರಿಯಲ್ಲ.

ಅಧ್ಯಕ್ಷರು : ಎಲ್ಲಾ ನಿಮ್ಮದೇ ಅಲ್ವೇ ಟ್ರೈನಿಂಗ್?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೋ ನೋ ನಮ್ಮ ಟ್ರೈನಿಂಗ್‌ನಲ್ಲಿ ಚೆನ್ನಾಗಿದ್ದರು, ಸ್ವಲ್ಪ ಆ ಕಡೆ ಹೋದ ಮೇಲೆ ಆ ಕುರ್ಚಿ ಭದ್ರವಾಗಿರಬೇಕೆಂದು ಹೀಗೆ ಎಲ್ಲಾ ಮಾಡುತ್ತಿದ್ದಾರೆ.

ಶ್ರೀ ಕೆ.ಎನ್. ನಾಗೇಗೌಡ : ಕುರ್ಚಿ ಭದ್ರತೆಯ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ದೇವೇಗೌಡರು 10 ತಿಂಗಳು ಪ್ರಧಾನಿ ಮಂತ್ರಿ ಆಗಿದ್ದರು, ಹಾಗೂ ರಾಜ್ಯದಲ್ಲಿ ಒಂದೂವರೆ ವರ್ಷ ಮುಖ್ಯಮಂತ್ರಿಗಳು ಆಗಿದ್ದರು, ಯಾರ‍್ಯಾರು ಏನು ಮಾಡಿದರು ಎನ್ನುವುದನ್ನು ಮಾತನಾಡುವುದಕ್ಕೆ ಹೋಗುವುದಿಲ್ಲ ಹಾಗೂ ಅದರಲ್ಲಿ ಅರ್ಥವಿಲ್ಲ, ಅದರ ಅವಶ್ಯಕತೆನೂ ಇಲ್ಲ ಅದನ್ನು ಬಿಡಿಸಿ ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಕಾರಣ ಸಮಸ್ಯೆ ಬಗೆಹರಿಯಬೇಕು, ಕೇವಲ ಚಳುವಳಿಯಿಂದ ಸಮಸ್ಯೆ ಬಗೆಹರಿಯುವುದಾದರೆ, ನಾವು ಎಷ್ಟು ಬೇಕಾದರೂ ಚಳುವಳಿ ಮಾಡುವುದಕ್ಕೆ ತಯಾರಿದ್ದೇವೆ. ಚಳುವಳಿಯಿಂದ ಮತ್ತೊಂದುರಿಂದ ಅದು ಬಗೆಹರಿಯುವುದಿಲ್ಲ. ತಮಗೆ ನಾರಿಮನ್ ಬಗ್ಗೆ ಏಕೆ ಹೇಳಿದೆನೆಂದರೆ, ಸಭೆ ಒಳಗಡೆ ಕಾನೂನು ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಬದ್ದ ಇದೆ, ಸರ್ವಪಕ್ಷಗಳು ಬದ್ಧ ಇವೆ, ಎನ್ನುವ ವಿಚಾರವನ್ನು ತಿಳಿಸುವುದಕ್ಕೆ.... ನಾವು ನೀವು ಎಲ್ಲಾ ಒಟ್ಟಿಗೆ ಹೋಗಿದ್ದೇವೆಯೇ ವಿನಹ ಬೇರೆ ಅದು ಹಾರಿಕೆನೋ ಅಲ್ಲ, ಅದು ತಪ್ಪು ಅಲ್ಲ ಮತ್ತು ತಪ್ಪನ್ನು

ಮುಚ್ಚಿಕೊಳ್ಳುವುದೂ ಅಲ್ಲ. ಆದರೆ, ರಾಜ್ಯಸರ್ಕಾರ ಈ ಪ್ರಾಧಿಕಾರವನ್ನು ರಚನೆ ಮಾಡುವುದಕ್ಕೆ ಸಂಪೂರ್ಣ ವಿರೋಧ ಇದೆ, ಅದನ್ನು ನಾವು ಬಹಿಷ್ಕರಿಸುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದೇವೆ, ಈಗ ಕೇಂದ್ರ ಸರ್ಕಾರದವರು ನಮ್ಮನ್ನು ಕರೆಯುತ್ತೇವೆಂದು ಹೇಳಿದ್ದಾರೆ ಅಲ್ಲಿಯವರೆಗೂ ನಾವು ಕಾಯುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸ್ವಾಮಿ, ಸುಪ್ರೀಂ ಕೋರ್ಟ್ ಮುಂದೆ ಸೆಕ್ಷನ್ 6(ಎ)ಕೆಳಗೆ ಇಂಟರ್ ಸ್ಟೇಟ್ ವಾಟರ್ ಡಿಸಪ್ಯುಟ್‌ಕೆಳಗೆ ಸ್ಕೀಮ್ ಮುಂದೆ ಕೊಡುತ್ತೇವೆ ಎಂದು ಏಕೆ ಹೇಳಿದ್ದೀರಿ? ಅದಕ್ಕೆ ಉತ್ತರ ಕೊಡಿ ಎಂದು ನಾನು ಕೇಳುತ್ತೇನೆ. ನನ್ನ ಅನಿಸಿಕೆ ಇಷ್ಟೇ ನಿಮ್ಮ ಅನಿಲ್ ಧಾವನ್, ಅಟಾರ್ನಿ ಜನರಲ್‌ರವರು ಏನು ಸುಪ್ರೀಂ ಕೋರ್ಟ್ ಮುಂದೆ ವಾದ ಇಟ್ಟಿದ್ದರು ಸೆಕ್ಷನ್ 6(ಎ) ಕೆಳಗೆ ಒಂದು ಸ್ಕೀಮ್‌ನ್ನು ಫಾರ್‌ಮುಲೇಟ್ ಮಾಡಿ ಗೌರ್ನಮೆಂಟ್ ಆಫ್ ಇಂಡಿಯಾದ ಕನ್‌ಸೆಂಟ್ ತೆಗೆದುಕೊಂಡು, ತಮ್ಮ ಮುಂದೆ ಇಡುತ್ತೇವೆ ಅದನ್ನು ಸಂಬಂಧಪಟ್ಟಂಥ 4 ರಾಜ್ಯಗಳಿಗೂ ಕಳಿಸುತ್ತೇವೆ, ಅಲ್ಲಿಂದ 6 ವಾರದಲ್ಲಿ ಏನಾದರೂ ಬಗ್ಗೆ ಕಾಮೇಂಟ್ಸ್ ಬಂದರೆ ಅದನ್ನು ನೋಡಿಕೊಂಡು ನೋಟೀಫಿಕೇಷನ್ ಇಶ್ಯೂ ಮಾಡುತ್ತೇವೆಂದು ಹೇಳಿದರು. ಆದಕ್ಕೆ ನೀವು ಫಾರ್ಟಿ ಆಗಿದ್ದೀರಲ್ಲಾ, ಅದು ಏನು ನೀವು ಹೇಳಿದಿರಿ, ನೀವು ಹೇಳದೇ ಇದ್ದದನ್ನು ನಿಮ್ಮ ವಕೀಲರು ತನ್ನಷ್ಟಕ್ಕೆ ತಾನೇ ಹೇಳಿದಿರಾ ಎನ್ನುವುದರ ಬಗ್ಗೆ ಕ್ಲಾರಿಫಿಕೇಷನ್ ಕೊಡುತ್ತಲೇ ಇಲ್ಲವಲ್ಲ.

ಶ್ರೀ ಕೆ.ಎನ್. ನಾಗೇಗೌಡ : ದಿನಾಂಕ: 21-3-97ರಂದು ವರ್ಜಿನಲ್ ಸೂಟ್ ನಂ 1:192ರ, ಅರ್ಜಿಯಲ್ಲಿ ತೀರ್ಪು ನೀಡಿ ಸಂವಿಧಾನ ಅಂಶಗಳನ್ನು ಸಂವಿಧಾನ ಪೀಠ ಹೆಚ್ಚಿಸಬೇಕೆಂದು ಆದೇಶ ನೀಡಿದ್ದಾರೆ. ಅದರಂತೆ ವರ್ಜಿನಲ್ ಸೂಟ್‌ನಲ್ಲಿ 1-4-97, 3-4-97, 8-4-97, 9-4-97ರಲ್ಲಿ ನಡೆದ ಸಭೆಯಲ್ಲಿ ಪ್ರಧಾನವಾಗಿ ಇದರ ಮೇಲೆ ವಾದ ಸೀಮಿತಗೊಂಡಿದೆ. ಅಂತರ್ ರಾಜ್ಯ ಜಲ ಉಪಯೋಗ ಕಾಯಿದೆ 56 ರ(6)ನೇ ಸೆಕ್ಷನ್ ನಂತೆ ಕೇಂದ್ರ ಸರ್ಕಾರವು ಕಾವೇರಿ ನ್ಯಾಯಾಧಿಕರಣ ನೀಡಿದ ತೀರ್ಮಾನಗಳನ್ನು ಅನುಷ್ಠಾನಗೊಳಿಸಲು ಬದ್ಧವಾಗಿದೆಯೇ? ಎರಡನೆಯ ವಿಚಾರ ಮೇಲಿನ ವಿಷಯಕ್ಕೆ ಉತ್ತರವು ಹೌದು ಎಂದಲ್ಲಿ, ಸಂವಿಧಾನ ಪರಿಚ್ಛೇದ 262 ಮತ್ತು ಅಂತರ್ ರಾಜ್ಯ ಜಲ ವಿವಾದ 56 (2)ಸೆಕ್ಷನ್‌ರಲ್ಲಿ ಇರುವಂತೆ, ಈ ನ್ಯಾಯಾಲಯ ಸಂವಿಧಾನ 131ನೇ ಪರಿಚ್ಛೇದದ ಬೇರೆ ಯಾವ ನಿರ್ದೇಶನ ನೀಡಲು ಬೇರೆ ಯಾವ ಅವಕಾಶವಿಲ್ಲ ಎಂದು ನಿರ್ಧಾರಕ್ಕೆ ಬರಬಹುದೆ? ಅಂದಾಗ ನಮ್ಮ ಅನಿಲ್ ಧಿವನ್‌ರವರು ನಾವು ಕೇಳಿಕೊಂಡು ಬರುತ್ತೇವೆ ಎಂದರು. ಸರ್ವಪಕ್ಷ ನಿಯೋಗದಲ್ಲಿ ಮೋಹನ್‌ಕಾತರಿಕಿಯವರು ನಾವು ಆ ತರಹ ಹೇಳಿಲ್ಲ, ಮತ್ತೆ ನಾವು ಅಫಿಡೇವಿಟ್ ಹಾಕುತ್ತಿದ್ದೇವೆಂದು ಹೇಳಿದರು. ನಾವು ಹೇಳುವುದು ಬೇರೆ ವಿಚಾರ ಅದು ಆಗಿದೆ..

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಹೀಗೆ ಹೇಳಿಲ್ಲ ಸುಪ್ರೀಂ ಕೋರ್ಟ್ ಮಾಡಿದೆ ಅಂದರೆ ಅದು ನಿಮಗೆ ಬಿಟ್ಟದ್ದುದು.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಲಿ : I think the Government will be hauled up for the contempt of court, if that statement goes to the record. ಏಕೆಂದರೆ ಕೋರ್ಟ್ ರೇಕಾರ್ಡ್ಸ್‌ನಲ್ಲಿ ಬರೆದು ಬಿಟ್ಟಿದ್ದಾರೆ, ಹೇಳಿಲ್ಲ ಎಂದರೆ....

ಅಧ್ಯಕ್ಷರು : ಬೇಡ, ಅಂತಹ ಅಪಾಯ ಆಗುವುದು ಬೇಡ.

ಶ್ರೀ ಕೆ.ಎನ್. ನಾಗೇಗೌಡ : ಅಧ್ಯಕ್ಷರೆ ಸರ್ವ ಪಕ್ಷ ನಿಯೋಗದ ಮೀಟಿಂಗ್‌ನಲ್ಲಿ ಈ ಪಾಯಿಂಟ್ಸ್ ಕ್ಲಾರಿಫಿಕೇಷನ್ ಮಾಡಿಸಿದ್ದೇವೆ, ಅಫಿಡೇವಿಟ್ ಎನ್ನತಕ್ಕಂಥ ಪಾಯಿಂಟ್‌ನ್ನು ಮೋಹನ್‌ಕಾತರೀಕಿಯವರು ಡೆಲ್ಲಿಯಲ್ಲಿ ಎಕ್ಸ್‌ಪ್ಲೇನ್ ಮಾಡಿದ್ದಾರೆ, ಮಾನ್ಯ ವೀರಪ್ಪ ಮೊಯ್ಲಿಯವರು ಇದ್ದರು, ಮಾನ್ಯ ಯಡಿಯೂರಪ್ಪನವರು ಆ ಪಾಯಿಂಟ್ ಎತ್ತಿದಾಗ ಮೋಹನ್‌ಕಾತರೀಕಿಯವರು ಹೇಳಿದ್ದಾರೆ ಬೇಕಾದರೆ ಕೇಳಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅವರು ಏನು ಕೇಸ್ ಹಾಕುತ್ತಾರೆ ಎಂಬುದಕ್ಕೆ ಅವರ ಸಲಹೆ ಮತ್ತು ಫ್ಯಾಕ್ಟ್ಸ್ ಇರಬೇಕಲ್ವೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಅದು ಇಡೀ ಜಗತ್ತಿಗೆ ಗೊತ್ತಿರುವಂಥದ್ದು ಅಟಾರ್ನಿ ಜನರಲ್ ಸುಪ್ರೀಂ ಕೋರ್ಟ್ ಮುಂದೆ ಕಾವೇರಿ ಪ್ರಾಧಿಕಾರ ರಚನೆ ಮಾಡುವಂಥ ಕಾಲದಲ್ಲಿ ನಮ್ಮ ಕೌನ್ಸಿಲ್ ಏನು ಅಬ್ಜೆಕ್ಷನ್ ಮಾಡಬೇಕಾಗಿತ್ತು ಅದನ್ನು ಮಾಡಿಲ್ಲ. ಮಾಡದಂತೆ ನೋಡಿಕೊಳ್ಳುವುದರಲ್ಲಿ ಈ ಸರ್ಕಾರ ಸಂಪೂರ್ಣ ವಿಫಲವಾಗಿದೆ, ಎರಡನೆಯದಾಗಿ, ಪ್ರಧಾನಿಯವರು ತಮಿಳುನಾಡಿನ ಮುಖ್ಯಮಂತ್ರಿಗಳ ಜೊತೆಗೆ ಇಮ್ಮಿಡಿಯೇಟಾಗಿ ಮಾತನಾಡಿ ಸುಪ್ರೀಂ ಕೋರ್ಟ್ ಮುಂದೆ ಪ್ರಾಧಿಕಾರ ರಚನೆ ಆಗುವಂತೆ ನೋಡಿಕೊಳ್ಳುತ್ತೇವೆಂದರು. ನಾವು ಏನು ಒತ್ತಾಯ ಮಾಡಿದ್ದೆವು ಅದನ್ನು ಮಾಡುತ್ತೇವೆಂದು ಒಪ್ಪಿಗೊಂಡಿದ್ದಾರೆ ಅದು ಆಗದಂತೆ ಸುಪ್ರೀಂ ಕೋರ್ಟ್ ಮುಂದೆ ಅರ್ಜಿ ಹಾಕುವಲ್ಲಿ ನೀವು ವಿಫಲರಾಗಿದ್ದೀರಾ, ಮೂರನೆಯದಾಗಿ ಇವತ್ತು ಕಾವೇರಿ ಬೇಸಿನ್‌ನಲ್ಲಿ ಎಲ್ಲಾ ಅಣೆಕಟ್ಟುಗಳನ್ನು ಕಟ್ಟಿಸಿದ್ದಾರೆ, ಆದರೆ ಅಚ್ಚುಕಟ್ಟು ಪ್ರದೇಶಗಳಲ್ಲಿ ನೀರನ್ನು ಉಪಯೋಗ ಮಾಡಿಕೊಳ್ಳದೇ ಇನ್ನು ಸುಮಾರು 10 ಸಾವಿರ ಹೆಕ್ಟೇರ್‌ಗೆ ನೀರನ್ನು ಕೊಡಬೇಕಾಗಿತ್ತು ಅದನ್ನು ಮಾಡದೇ ಇವತ್ತು ತಮಿಳನಾಡಿಗೆ ನೀರು ಬಿಡುವುದಕ್ಕೆ ಜವಾಬ್ದಾರಿಯಾಗಿದ್ದೀರಿ, ನಮ್ಮ ಕಾಂಗ್ರಸ್ ಸ್ನೇಹಿತರೂ ಕೂಡ ಆ ಸಮಯದಲ್ಲಿ ನೀರಾವರಿಯನ್ನು ವಿಸ್ತರಣೆ ಮಾಡುವುದರಲ್ಲಿ ಅವರದು ಎಷ್ಟು ಪಾಲಿದೆಯೋ ನಿಮ್ಮದು ಅಷ್ಟೇ ಪಾಲಿದೆ. ಆದುದರಿಂದ ಕಾವೇರಿ ಜಲಾನಯನ ಪ್ರದೇಶದ ರೈತರ ಹಿತವನ್ನು ನೀವು ಕಾಪಾಡುವುದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದೀರಾ, ನಿಮ್ಮ ರಾಜಕೀಯ ಗೊಂದಲದಲ್ಲಿ ತಲ್ಲಿನರಾಗಿದ್ದೀರಾ, ರಾಜ್ಯದ ಹಿತಕ್ಕಿಂತ ನಿಮ್ಮ ಕುರ್ಚಿನೇ ಮುಖ್ಯ. ಪ್ರಧಾನಿಯವರ ಕುರ್ಚಿ ಉಳಿಸುವುದರಲ್ಲಿ ನೀವು ತಲ್ಲೀನರಾಗಿದ್ದೀರಾ, ಇದನ್ನು ಪ್ರತಿಭಟಿಸುತ್ತಾ ನಾವು ಸಭಾತ್ಯಾಗ ಮಾಡುತ್ತೇವೆ. ಏಕೆಂದರೆ ನಾವು ಧರಣಿ ಕುಳಿತುಕೊಳ್ಳಬೇಕಾಗಿತ್ತು ಆದರೆ ನಾವು ಈ ಮೊದಲೇ ಹೇಳಿದ ಹಾಗೆ ಈ ಅಧಿವೇಶದಲ್ಲಿ ನಾವು ಧರಣಿ ಕುಳಿತುಕೊಳ್ಳುವುದಿಲ್ಲ. ಕಾರ್ಯಕಲಾಪಗಳು ನಡೆಯಬೇಕು ಎಂದು ಹೇಳಿದ್ದೇವೆ ಆದರೂ ನಿಮ್ಮ ನೀತಿಯನ್ನು ಪ್ರತಿಭಟನೆ ಮಾಡಿ ಜನಹಿತ ನಿಮಗೆ ಬೇಕಾಗಿಲ್ಲ ಎಂದು ನಾವು ಹೊರಗಡೆ ಹೋಗುತ್ತಿದ್ದೇವೆ.

(ಈ ಹಂತದಲ್ಲಿ ಮಾನ್ಯ ಸದಸ್ಯರೊಂದಿಗೆ ಬಿಜೆಪಿ ಸದಸ್ಯರು ಕೂಡ ಸಭಾತ್ಯಾಗ ಮಾಡಿದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಉತ್ತರ ಮುಗಿದಿದ್ದರೆ ಇನ್ನೊಂದು ವಿಚಾರ ಹೇಳಬೇಕಾಗಿದೆ. ಈಗಾಗಲೇ ನಾನು ರಿಲೆವೆಂಟ್ ಪಾಯಿಂಟ್ ತಮ್ಮ ಮುಂದೆ ಇಟ್ಟಿದ್ದೇವೆ. ಅದೇನೆಂದರೆ ನೀವು ವಕೀಲರಿಗೆ ಕೊಟ್ಟಂಥ ಡ್ರಾಫ್ಟ್ ಏನು? ಸುಪ್ರೀಂ ಕೋರ್ಟ್ ಮುಂದೆ ಅಟಾರ್ನಿ ಜನರಲ್ ಕೊಡುವಂಥ ಡ್ರಾಫ್ಟ್ ಒಪ್ಪಿಕೊಳ್ಳಿ ಎಂದು ಹೇಳಿದ್ದೀರಾ ಅಥವಾ ಇಲ್ಲವಾ? ಸೆಕ್ಷನ್ 6(ಎ) ಕೆಳಗೆ ಒಂದು ನೋಟಿಫಿಕೇಷನ್ ಇಶ್ಯೂ ಮಾಡಬೇಕು ಅಥವಾ ಒಂದು ಸ್ಕೀಮ್ ತಯಾರು ಆಗಬೇಕಾಗಿದೆ, ನಿಮ್ಮ ಸ್ಕೀಮ್ ಇಲ್ಲದೇ ಅಥವಾ ನಿಮ್ಮ ಒಪ್ಪಿಗೆ ಇಲ್ಲದೆ, ನಿಮ್ಮ ವಕೀಲರು ಸುಪ್ರೀಂ ಕೋರ್ಟ್‌ನ ಮುಂದೆ ಹೇಳುವುದಕ್ಕೆ ಸಾಧ್ಯವಿಲ್ಲ. ತಾವು ಒಂದು ವಿಷಯ ಹೇಳಿದಿರಿ, ನಾವು ಹೇಳದೇ ಇರತಕ್ಕಂಥ ವಿಷಯವನ್ನು ನಮ್ಮ ಬಾಯಿಯಲ್ಲಿ ಹಾಕಿ ಸುಪ್ರೀಂ ಕೋರ್ಟ್ ಈ ರೀತಿ ಹೇಳಿದೆ ಎಂದರೆ ಏನು ಇದರ ಅರ್ಥ? ಮಾನ್ಯ ಮೊಯ್ಲಿಯವರು ಹೇಳಿದಾಗೆ ಇವತ್ತು ಸುಪ್ರೀಂ ಕೋರ್ಟ್‌ನಲ್ಲಿ ಕಂಟೆಮ್ಪ್ಟ್ ಕೇಸ್ ಬರುತ್ತದೆ, ನಾವು ಹೇಳದೆ ಇರುವುದನ್ನು ನೀವು ಅಲ್ಲಿ ಬರೆದಿದ್ದೀರಿ ಎನ್ನತಕ್ಕಂಥ ಮಾತು ಬರುತ್ತದೆ, ಅಥವಾ ಜಡ್ಜ್‌ಮೆಂಟ್ ಆರ್ಡರ್‌ನಲ್ಲಿ ಕೊಟ್ಟಿದ್ದೀರಾ, ಅದನ್ನು ನೀವು ಸುಪ್ರೀಂ ಕೋರ್ಟ್‌ಗೆ ಹೇಳಿಲ್ಲ, ಕ್ಲಾರಿಫಿಕೇಷನ್ ಏನಾದರೂ ಕೊಟ್ಟಿದ್ದೀರಾ? ಏಕೆಂದರೆ ಅದು ಆರ್ಡರ್ ಸೀಟ್‌ನಲ್ಲಿ 9.4.97ಕ್ಕೆ ಬರೆದಿದ್ದು ಮೇ, ಜೂನ್, ಜುಲೈ ಅಂದರೆ, 3 ತಿಂಗಳು ಆಯಿತು. ಅದಕ್ಕಿಂತ ಮುಂಚಿತವಾಗಿ, ಅಂದರೆ ಮಧ್ಯಭಾಗದಲ್ಲಿ 17ನೇ ಜುಲೈನಲ್ಲಿ ಒಂದು ಕೇಸ್ ಇತ್ತು, ಅದಕ್ಕೇನಾದರೂ ಅಫಿಡೆವಿಟ್ ಕೊಟ್ಟು ಕ್ಲಾರೀಫಿಕೇಷನ್ ಕೇಳಿದ್ದೀರಾ? ಅಥವಾ ಏನಾದರೂ ಸ್ಪೆಷಲ್ ಅಪ್ಲಿಕೇಷನ್ ಹಾಕಿ ಇಂತಹ ಪ್ರೊಸೇಡಿಂಗ್ಸ್‌ನಲ್ಲಿ ಏನು ಬಂದಿದೆ ಅದು ಸರಿಯಲ್ಲ ಎನ್ನತಕ್ಕಂಥದ್ದು ಹೇಳಿದಿರಾ? ಅದನ್ನು ಕೂಡ ಮಾಡಿಲ್ಲ, ಇದರ ಅರ್ಥ ಏನೆಂದರೆ ಪ್ರತಿಯೊಂದು ಸುಳ್ಳನ್ನು ಮುಚ್ಚಿಡುವುದಕ್ಕಾ[illegible]ತ್ತೊಂದು ಸುಳ್ಳು ಹೇಳಿ ತಪ್ಪು ದಾರಿಗೆ ಎಳೆಯುವುದನ್ನು ಮಾಡಿದ್ದೀರಿ.

3.40 ಪಿ.ಎಂ

ನಾವು ಪದೇ ಪದೇ ಪ್ರಸ್ತಾಪ ಮಾಡುತ್ತಿದ್ದೇವೆ. ಅಂದಿನ ಪ್ರಧಾನ ಮಂತ್ರಿಗಳಿಗೂ ನಾನು ಕೇಳಿದ್ದೆ. ಅಟಾರ್ನಿ ಜನರಲ್‌ರವರು ತಾನಾಗಿಯೇ ಯಾವ ಕಾರಣಕ್ಕಾಗಿ ಏಕೆ ಕೊಟ್ಟ. ಅದಕ್ಕೇನು ಕಾರಣ? ಅಟಾರ್ನಿ ಜನರಲ್, ಅಶೋಕ್ ದೇಸಾಯಿಯವರು ಹೇಳಿದಮೇಲೆ, ನಮ್ಮ ಅನಿಲ್ ದಿವಾನ್‌ರವರು, ನಿಮ್ಮ ವಕೀಲರು, ನಿಮ್ಮ ರಾಜ್ಯದವರು, ನಿಮ್ಮ ಕನ್‌ಸೆಂಟ್ ಇಲ್ಲದೇ, ನಿಮ್ಮ ಬ್ರೀಪಿಂಗ್ ಇಲ್ಲದೇ ಅವರ ಮಾತಿಗೆ ಸಹಮತ ಹೇಗೆ ಕೊಟ್ಟರು? ಈ ಪ್ರಶ್ನೆಯನ್ನು ನಾವು ನೇರವಾಗಿ ಕೇಳುತ್ತಿದ್ದೇವೆ. ಇದನ್ನು ನೀವು ಅವಾಯ್ಡ್ ಮಾಡುತ್ತಿದ್ದೀರಿ. ಎರಡನೆಯದೇನೆಂದರೆ, ತಾವೇ ಹೇಳಿದಹಾಗೆ ದಿನಾಂಕ : 1.1.96ರಲ್ಲಿ ಪಿ.ವಿ. ನರಸಿಂಹರಾವರವರು, ಶ್ರೀಮಾನ ದೇವೇಗೌಡರಿಗೆ ಪತ್ರವನ್ನು ಬರೆದಿದ್ದಾರೆ. ಇದರಲ್ಲಿ ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಪ್ಯಾರಾ (9) ಮತ್ತು 10ರಲ್ಲಿ ಹೇಳಿರುವುದನ್ನು ತಮ್ಮ ಗಮನಕ್ಕೆ ತರುತ್ತೇನೆ.
para 9 :

``In this connection I may add that for some time there have been suggestions that policy guidelines should have been evolved by the Union Government for sharing of inter-state river waters".

Para 10 :

"The Ministry of water Resources has prepared a draft of such guidelines in addition to other draft policies on various aspects such as resettlement and rehabilitaion of project affected people, conjunctive use of ground and surface water, national water information bill etc., All these policy guidelines have already been discussed by the National Water Board which is an official level Committee on which all States are represented. Therefore, I propose to convey the Water Resources Council of which all the Chief Ministers are members, in early February to discuss and adopt the above policy guidelines. I do believe that this is the only viable process by which complications such as we are dealing with would be obviated to a large extent making smoother working of water sharing mechanism and strengthening a sense of national integration through our river systems".

ಎಂದು ಪ್ರೈಮ್ ಮಿನಿಸ್ಟರೇ ಅವರ ಆಫೀಸಿನಿಂದ ಈ ಒಂದು ಕಮಿಟ್‌ಮೆಂಟ್ ಮಾಡಿಕೊಂಡು ಬರೆದಿದ್ದಾರೆ, ಈ ಲೆಟರ್‌ನ್ನೂ ಕೂಡ ತಾನಾಗಿಯೇ ಬರೆದಂಥ ಪತ್ರ ಅಲ್ಲ. ಅದು ಸುಪ್ರೀಂ ಕೋರ್ಟಿನ ಡೈರಕ್ಷನ್ ಮೇಲೆ ಬರೆದಂಥ ಪತ್ರ. ಏಕೆಂದರೆ ಒಂದು ಸಾರಿ ತಮ್ಮನ್ನು ಮೀಟಿಂಗಿಗೆ ಕರೆಸಿ, 11 ಟಿಎಂಸಿ ನೀರನ್ನು ಬಿಡಬೇಕೋ ಬೇಡವೋ ಬಿಡಬೇಕಾದರೆ ಹೇಗೆ ಬಿಡಬೇಕು, ಅದಕ್ಕೆ ಎಲ್ಲರನ್ನೂ ಕೂಡ ಕನ್‌ಸಲ್ಟ್ ಮಾಡಿ ತದನಂತರ ಒಂದು ನಿರ್ಣಯವನ್ನು ತೆಗೆದುಕೊಂಡು, ನೀವು ಕೊಟ್ಟಂಥ ಗೈಡ್‌ಲೈನ್ಸ್ ರಾತ್ರಿಯಿಂದ ಬೆಳಗಿನವರೆಗೆ ಕುಳಿತು, ರಾತ್ರಿ 1 ಗಂಟೆ 2 ಗಂಟೆಯವರೆಗೆ ಇದರ ಬಗ್ಗೆ ಚರ್ಚೆ ನಡೆಯಿತು. ನಮ್ಮ ನಂಜೇಗೌಡರು ಕೂಡ ಫಾರ್ಮುಲಾ ತಯಾರು ಮಾಡಿಕೊಟ್ಟರು. ನರಸಿಂಹರಾಯರು ಇದಕ್ಕೆ ಸುಮಾರು 7-8 ತಾಸು ಕಳೆದರು. ಒಂದುಸಾರಿ ತಮಿಳುನಾಡಿನವರನ್ನು ಕರೆಸಿದರು. ಒಂದುಸಾರಿ ನಮ್ಮನ್ನು ಕರೆಸಿದರು. ಪುನಃ ಕರ್ನಾಟಕದವರನ್ನು ಕರೆಸಿದ ಮೇಲೆ ಕೊನೆಗೆ ಈ ಪತ್ರವನ್ನು ತಯಾರು ಮಾಡಿದರು. ತಯಾರು ಮಾಡಿ ಕೊಟ್ಟಮೇಲೂ ಕೂಡ ಇದರ ಆಧಾರದ ಮೇಲೆ ಒಂದು ಮೀಟಿಂಗಾದರೂ ಕರೆಯಬೇಕಲ್ಲ. ಈ ಪತ್ರದ ಆಧಾರದ ಮೇಲೆ ತಾವು ಕೇಂದ್ರ ಸರ್ಕಾರಕ್ಕೆ ಒತ್ತಾಯವನ್ನೂ ಮಾಡಲಿಲ್ಲ. ಆಗ ನಮ್ಮವರೇ ಆದಂಥ ಪ್ರಧಾನ ಮಂತ್ರಿಗಳಿದ್ದರು, ಅದು 10 ತಿಂಗಳಾಗಲೀ ಅಥವಾ 11 ತಿಂಗಳಾಗಲಿ. 11 ತಿಂಗಳಲ್ಲಿ ಈ ವಾಟರ್ ರಿಸೋರ್ಸಸ್ ಕೌನ್ಸಿಲ್ ಮೀಟಿಂಗ್ ಕರೆಯುವುದಕ್ಕೆ ಅಥವಾ ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್ ತಯಾರು ಮಾಡುವುದಕ್ಕೆ ಇಷ್ಟೊಂದು ಸಮಯ ಹಿಡಿಯುತ್ತದೆಯೇ ? 6 ವಾರಗಳಲ್ಲಿ ಮಾಡಬೇಕೆಂದು ಲೈಟ್ನಿಂಗ್ ಸ್ಪೀಡ್‌ನಲ್ಲಿ ನೋಟಿಫಿಕೇಷನ್ ಬರುತ್ತದೆ. ಆದರೆ, ನ್ಯಾಷನಲ್ ವಾಟರ್ ಪಾಲಿಸಿ ಸ್ಕೀಮ್ ತಯಾರು ಮಾಡುವುದಕ್ಕೆ , ನೀವು 10 ತಿಂಗಳು ಅಧಿಕಾರದಲ್ಲಿ ಇರಬೇಕೇ ? ಇದೆಲ್ಲಾ ನೋಡಿದರೆ, ಇವರಿಗೆ ಯಾವುದೂ ಮನಸ್ಸಿಲ್ಲ. ನ್ಯಾಷನಲ್ ವಾಟರ್ ' ಪಾಲಿಸಿ ಸ್ಕೀಮ್ ತಯಾರು ಮಾಡುವುದಕ್ಕೆ ಪ್ರಯತ್ನ

ಮಾಡಿಲ್ಲ. ಅಥವಾ ವಾಟರ್ ರಿಸೋರ್ಸಸ್ ಕೌನ್ಸಿಲ್ ಮೀಟಿಂಗ್ ಕರೆಯುವುದಕ್ಕೆ ಪ್ರಯತ್ನ ಮಾಡಿಲ್ಲ. ಆಮೇಲೆ ಸುಪ್ರೀಂ ಕೋರ್ಟಿನಲ್ಲೂ ಕೂಡ ಏನು ಹೇಳಬೇಕು, ಏನು ಬಿಡಬೇಕು ಎನ್ನತಕ್ಕಂಥ ಪ್ರಜ್ಞೆ ಇಲ್ಲದೇ ಇವರು ತಮ್ಮ ವಕೀಲರಿಗೆ ಬಾಯಿಗೆ ಬಂದಿದ್ದೇ ಹೇಳು ಎಂದು ಅವಕಾಶ ಮಾಡಿಕೊಟ್ಟಿದ್ದು. ಇವತ್ತಿನ ದಿವಸ ಇಕ್ಕಟ್ಟಿಗೆ ಸಿಕ್ಕಿಸಿದ್ದಾರೆ. ಕೊನೆಗೆ ಹೇಳುತ್ತಿದ್ದಾರೆ, ನಮ್ಮ ವಕೀಲ ಆ ಮಾತು ಹೇಳಿಯೇ ಇಲ್ಲವೆಂದು ಹೇಳುತ್ತಾರೆ. ಹೇಳದೇ ಇದ್ದರೆ, ಯಾರಾದರೂ ಸುಪ್ರೀಂ ಕೋರ್ಟ್ ಪ್ರೊಸೀಡಿಂಗ್ಸ್‌ನಲ್ಲಿ ಬರೆಯುತ್ತಾರೆಯೇ? ಸುಪ್ರೀಂ ಕೋರ್ಟ್ ಜಡ್ಜಸ್ ಏನು ಹುಚ್ಚರೇ? ಅವರು, ಇವರ ಪ್ಲೀ ಇಲ್ಲದೇ, ಇವರು ಹೇಳಿಕೊಡದೇ ಅಥವಾ ಇವರ ಬ್ರೀಫಿಂಗ್ ಇಲ್ಲದೇ ಇವರ ವಕೀಲ ಹೇಗೆ ಹೇಳುತ್ತಾನೆ? ಇದೆಲ್ಲದಕ್ಕೂ ಇವರೇ ಕಾರಣಕರ್ತರು. ಈ ಜವಾಬ್ದಾರಿಯನ್ನು ಇವರೇ ಹೊತ್ತು ಕೊಳ್ಳಬೇಕು. ರೈತರ ಕಲ್ಯಾಣವನ್ನು ಅಥವಾ ಅವರಿಗೆ ಆಗತಕ್ಕ ನೋವನ್ನು ಲಕ್ಷ್ಯದಲ್ಲಿಟ್ಟುಕೊಳ್ಳದೇ ಇವತ್ತಿನದಿವಸ ಈ ಕೆಲಸ ಮಾಡದಿದಕ್ಕಾಗಿ ಸಂಪೂರ್ಣವಾದ ಹೊಣೆಯನ್ನು ಶ್ರೀಮಾನ್‌ನಾಗೇಗೌಡರು ಹೊತ್ತುಕೊಳ್ಳಬೇಕಾಗುತ್ತದೆ, ಈ ಸರ್ಕಾರ ಹೊತ್ತುಕೊಳ್ಳಬೇಕಾಗುತ್ತದೆ. ಮಾನ್ಯ ಜೆ.ಹೆಚ್ . ಪಟೇಲರಂತು ಇವರು ಬರಬೇಕಾಗಿತ್ತು. ಅವರು ಪ್ರಧಾನ ಮಂತ್ರಿಗಳ ಜೊತೆಯಲ್ಲಿ ಏನು ಮಾತನಾಡಿದರು ಎಂಬುದನ್ನು ಹೇಳಬೇಕಲ್ಲವೇ? ನಾವು, ನಾವು ಮಾತನಾಡಿಕೊಳ್ಳುತ್ತೇವೆಂದು ಹೇಳಿದರು, ಏನು ಮಾತನಾಡಿದಿರಿ? ತಮಿಳುನಾಡಿನವರ ಜೊತೆಯಲ್ಲಿ ಮಾತನಾಡಿದ ಮೇಲೆ ಮತ್ತೆ ಮಾತನಾಡುತ್ತೇನೆಂದು ಹೇಳಿದಿರಿ. ಮತ್ತೆ 5 ಸುತ್ತಿನ ಮಾತುಕತೆ ಆಯಿತು. ಅದು ಏನಾಯಿತು? ಇದೆಲ್ಲವನ್ನೂ ತಿಳಿಸುವುದಕ್ಕೆ ಮುಖ್ಯಮಂತ್ರಿಗಳು ಬರುತ್ತಾರೆ ಎಂದು ಕೊಂಡಿದ್ದೆವು. ಆದರೆ, ಅವರಿಗೆ ಇವತ್ತು ಪುರಸೊತ್ತು ಇಲ್ಲ. ನಾವೇನಾದರೂ ಹೇಳಿದರೆ ಅವರಿಗೆ ಸಿಟ್ಟುಬರುತ್ತದೆ. ನಿಮ್ಮ ಎಂ.ಪಿ.ಗಳು ಮುಖ್ಯಮಂತ್ರಿಗಳಿಗೆ ಏನು ಹೇಳಿದ್ದಾರೆ, ಆ ಮಾತನ್ನು ನಾನು ನಿಮಗೆ ಹೇಳಿದರೆ ಸಿಟ್ಟು ಬರುತ್ತದೆ. ಆದ್ದರಿಂದ ನಾನು ಹೇಳುವುದು ಬೇಡ. ನಿಮ್ಮ ಬಾಯಿಂದಲೇ ಮುತ್ತಿನ ನುಡಿಗಳು ಬರುತ್ತಾ ಇವೆ, ನಿಮ್ಮವರೇ ಹೇಳುತ್ತಿದ್ದಾರೆ, ಹೇಳಿಕೊಳ್ಳಲಿ. ಆದರೆ, ಕಾವೇರಿ ವಾಟರ್ ಡಿಸ್ ಪ್ಯೂಟ್ ಬಗ್ಗೆ ಇಲ್ಲಿ ರೈಸ್ ಮಾಡಿದ್ದಾರೆ, ಎಲ್ಲರೂ ಮಾತನಾಡುತ್ತಾರೆ, ಅದಕ್ಕೆ ಏನಾದರೂ ಸಮಾಧಾನ ಹೇಳಬೇಕು ಅಥವಾ ತಿಳುವಳಿಕೆ ಕೊಡಬೇಕು, ತಮ್ಮಲ್ಲಿರತಕ್ಕ ಮಾಹಿತಿಯನ್ನು ಹೇಳಬೇಕೆನ್ನುವ ಸೌಜನ್ಯ ಕೂಡ ಇಲ್ಲ, ಅವರು ಇವತ್ತು ಕೂಡ ಬಂದಿಲ್ಲ. ಇದೆಲ್ಲಾ ನೋಡಿದರೆ, ಇವರಿಗೆ ಇದರ ಬಗ್ಗೆ ಆಸಕ್ತಿ ಇಲ್ಲ, ಈ ರೈತರ ಹಿತವನ್ನು ಕಡೆಗಾಣಿಸುತ್ತಾ ಇದ್ದಾರೆ. ಇನ್ನು ಮುಂದೆ ಅವರ ಮಾತನ್ನು ಕೇಳತಕ್ಕಂಥಾದ್ದು ಏನು ಉಳಿದಿದೆ ? ಏನು ಹೇಳಬೇಕೋ ಅದೆಲ್ಲಾ ಹೇಳಿದ್ದೀರಿ. ನೀವು ಹೇಳಿದ ಮೇಲೆ ನಾವು ಕ್ಲಾರಿಫಿಕೇಷನ್ ಕೇಳವುದಕ್ಕೂ ತಯಾರಿಲ್ಲ. ಅದಕ್ಕಾಗಿ ಇದನ್ನು ಪ್ರತಿಭಟಿಸಿ ನಾವು ವಾಕ್ ಔಟ್ ಮಾಡುತ್ತೇವೆ.

(ಕಾಂಗ್ರೆಸ್(ಐ) ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಕೆ.ಎನ್ . ನಾಗೇಗೌಡ : ಮಾನ್ಯ ಅಧ್ಯಕ್ಷರೇ, ನ್ಯಾಷನಲ್ ವಾಟರ್ ಪಾಲಿಸಿ ಬಗ್ಗೆ ನಾವು ಕಳೆದ ಜನವರಿಯಿಂದ ಐದು ಸಾರಿ ಪ್ರೆಸ್ ಮಾಡಿದ್ದೇವೆ. ಮಾನ್ಯ ದೇವೇಗೌಡರು ಇದ್ದಾಗ ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್ ಕೊಟ್ಟಿದ್ದಾರೆ. ಪುನಃ ಫೆಬ್ರವರಿ 1996ರಲ್ಲಿ ಜೆ.ಹೆಚ್. ಪಟೇಲರು

ವಾಟರ್ ನ್ಯಾಷನಲ್ ಕೌನ್ಸಿಲ್ ಮೀಟಿಂಗ್‌ನಲ್ಲಿ ಚರ್ಚೆ ಮಾಡಿದ್ದಾರೆ. ಅದಾದ ನಂತರ 27.7.97ರಲ್ಲಿ ಜೆ.ಹೆಚ. ಪಟೇಲರು ಕೇಂದ್ರ ಸರ್ಕಾರಕ್ಕೆ ಕಾಗದ ಬರೆದು ನ್ಯಾಷನಲ್ ವಾಟರ್ ಪಾಲಿಸಿ ಆಗಬೇಕೆಂದು ಒತ್ತಾಯ ಮಾಡಿದ್ದಾರೆ. ಪುನಃ ಮುಖ್ಯ ಕಾರ್ಯದರ್ಶಿಯವರು ಜೂನ್ 2ರಲ್ಲಿ ಕಾಗದ ಬರೆದು ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್ ಆಗಬೇಕೆಂದು ಹೇಳಿದ್ದಾರೆ. ತದನಂತರ 10 ಮತ್ತು 11ರ ಎರಡು ಲೆಟರುಗಳಲ್ಲಿಯೂ ಕೂಡ ನಾವು ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್ ಬಗ್ಗೆ ಕೇಳಿದ್ದೇವೆ. ನ್ಯಾಷನಲ್ ವಾಟರ್ ಪಾಲಿಸಿಗೆ ಗೈಡ್‌ಲೈನ್ ಮಾಡಿ ಎಂದು ರಾಜ್ಯ ಸರ್ಕಾರ ತೀವ್ರವಾಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದಿದೆ. ಅದರಲ್ಲಿ ಯಾವುದೇ ಎರಡನೇ ಮಾತಿಲ್ಲ. ಇವತ್ತಿನ ದಿವಸ ಒಟ್ಟಾರೆ ಹೇಳುವುದಾದರೆ, ರಾಜ್ಯ ಸರ್ಕಾರ, ಕೇಂದ್ರದವರು ಕಳುಹಿಸಿರತಕ್ಕಂಥ ಈ ಡ್ರಾಫ್ಟ್ ನೋಟಿಫಿಕೋಷನ್ ಅಕ್ಸೆಪ್ಟ್ ಮಾಡಿಕೊಂಡಿಲ್ಲ. ಕೇಂದ್ರ ಸರ್ಕಾರದವರು ಮತ್ತೊಂದು ಸಾರಿ ನಮ್ಮನ್ನು ಮಾತುಕತೆಗೆ ಕರೆಯುತ್ತಾರೆದು ಹೇಳಿದ್ದಾರೆ. ಅವರ ಮಾತಿನಂತೆ, ನಾವು ಮಾತುಕತೆಗಾಗಿ ಕಾಯುತ್ತಿದ್ದೇವೆ. ಅವರು ಕರೆದ ನಂತರ, ನಮ್ಮ ವಿಚಾರವನ್ನು ಸ್ಪಷ್ಟವಾಗಿ, ಈ ಕರಡು ನೀತಿಯಿಂದ ರಾಜ್ಯದ ಹಿತಕ್ಕೆ ಧಕ್ಕೆ ಬಂದಿದೆ ಎನ್ನತಕ್ಕಂಥ ವಿಚಾರವನ್ನು ಹೇಳುವುದಕ್ಕೆ ರಾಜ್ಯ ಸರ್ಕಾರ ಬದ್ಧವಾಗಿದೆ ಎಂಬುದನ್ನು ತಮ್ಮ ಮುಖಾಂತರ ಅವರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಸಭಾಧ್ಯಕ್ಷರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

ಪುತ್ತೂರಿನಲ್ಲಿ ಖೋಟಾ ನೋಟು ಪ್ರಕರಣದ ಪತ್ತೆ.

+ ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) : ಮಾನ್ಯ ಅಧ್ಯಕ್ಷರೆ, 10.7.97ರಂದು ಪುತ್ತೂರಿನಲ್ಲಿ ಒಂದು ಖೋಟಾ ನೋಟು ಪ್ರಕರಣ ಪತ್ತೆಯಾಗಿದೆ. ಸುಮಾರು ಸಾವಿರಗಟ್ಟಲೆ ಮೊತ್ತದ್ದ ಹಣವನ್ನು ಪೋಲೀಸಿನವರು ಈಗಾಗಲೇ ಸೀಜ್ ಮಾಡಿದ್ದಾರೆ. ಕ್ರೈಂ ನಂ.105:97ರಲ್ಲಿ ಈ ಒಂದು ಕೇಸನ್ನು ಕೂಡ ದಾಖಲೆ ಮಾಡಿದ್ದಾರೆ. ಆದ್ದರಿಂದ ಭಾರಿ ಸ್ಟ್ರೇಂಜ್ ಸಂಗತಿಗಳೇನೆಂದರೆ, ಯಾರು ಇದರಲ್ಲಿ ಪ್ರಮುಖ ಆರೋಪಿಗಳೆನಿಸಿಕೊಂಡಿದ್ದಾರೆ, ಅವರು ಸ್ವಲ್ಪ ರಾಜಕೀಯ ವಲಯದಲ್ಲಿ ಸೇರಿದಂಥ ವ್ಯಕ್ತಿಗಳೂ ಕೂಡ ಇದರಲ್ಲಿ ಶಾಮೀಲಾಗಿದ್ದಾರೆಂದು ಅಲ್ಲಿಯ ಲೋಕಲ್ ಪತ್ರಿಕೆಗಳಲ್ಲಿ ಬಂದಿದೆ. ಅದಲ್ಲದೆ, ಇದರ ಪ್ರಮುಖ ಆರೋಪಿ, ಪೋಲೀಸರ ಸಮಕ್ಷಮದಲ್ಲಿ ತಪ್ಪಿಸಿಕೊಂಡು ಓಡಿ ಹೋಗಿದ್ದಾನೆ ಎಂಬುದನ್ನು ಕೂಡ ಅವರ ಎಫ್‌ಐ ಆರ್‌ನಲ್ಲಿ ತೋರಿಸಿಕೊಟ್ಟು, ಬಾಕಿ ಇಬ್ಬರನ್ನು ಮಾತ್ರ ದಸ್ತಗಿರಿ ಮಾಡಿದ್ದಾರೆ. ಆದರೆ, ಮುಂದೆ ಕಳೆದ ಹಲವಾರು ದಿನಗಳಿಂದ ಇದರ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಇದು ಕೇವಲ ಕರ್ನಾಟಕ ರಾಜ್ಯಕ್ಕೆ ಸೀಮಿತವಾಗಿಲ್ಲ. ಇದು ಅಂತರ್ ರಾಜ್ಯದ ಒಂದು ದೊಡ್ಡ ಖೋಟಾ ನೋಟಿನ ಜಾಲವೇ ಇದೆಯೆಂದು ಅಲ್ಲಿಯ ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಪೋಲೀಸರು ಇದರಲ್ಲಿ ತುಂಬಾ ನಿಷ್ಕ್ರಿಯರಾಗಿದ್ದಾರೆಂಬುದು ನಮ್ಮ ಗಮನಕ್ಕೆ ಬಂದ ಕಾರಣ ಈ ಒಂದು ದೇಶದ್ರೋಹಿ ಘಟನೆ, ಇಂತಹ ದೊಡ್ಡ ವಿಚಾರಗಳ ಬಗ್ಗೆ ಹಾಗೂ ಇದು ಅಂತರ್ ರಾಜ್ಯಕ್ಕೆ ಸಂಬಂಧಪಟ್ಟ ಕಾರಣ ಇದನ್ನು ತಕ್ಷಣ ಸಿ.ಬಿ.ಐನವರು ತನಿಖೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ ರಾಜ್ಯ ಮಟ್ಟದಲ್ಲಿರುವಂತಹ ರಾಜಕೀಯ ವ್ಯಕ್ತಿಗಳು ಇದರಲ್ಲಿ